ಹಿತ್ತಲಗಿಡ

ಚಾತುರ್ಮಾಸಿಕ

Vol. 2 No.3-4, July - December, 1997

(ಪೈರು ೨, ಕೊಯಿಲು ೩, ೧೯೯೭)

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವಿವಿಧತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಬಿಡಿ ಪತ್ರಿಕೆ : ರೂ. 20/-



ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ಹಿತ್ತಲಗಿಡ

ಚಾತುರ್ಮಾಸಿಕ

Vol. 2 No.3-4, July - December, 1997

(ಪೈರು ೩, ಕೊಯಿಲು ೩, ೧೯೯೭)

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವಿವಿಧತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಈ ಸಂಚಿಕೆಯಲ್ಲಿ

ಸಂಪಾದಕ ಮಂಡಳಿ

ಗೌರವ ಸಂಪಾದಕ :

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಸಹಾಯಕ ಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ವಿ.ವಿ.ನಿಲಯ, ಹೆಬ್ಬಾಳ, ಬೆಂಗಳೂರು - 560 024

ಉಪ ಸಂಪಾದಕಿ :

ತೇಜಸ್ವಿನಿ ಶರ್ಮ

ಪ್ರಕಟಣಾ ಸಹಾಯಕರು :

ಬಿ.ಎ. ಅನಿಲ್ ಕೌಶಿಕ್

ಕೆ.ಕೆ. ಆನಂದ್ ಮತ್ತು ವೀಣಾ ಎಂ.ಎಸ್.

ಲೇಖಕರ ಬಳಗ :

ಎ.ಪಿ. ಚಂದ್ರಶೇಖರ್, ಎ.ಎನ್. ಚನ್ನಪ್ಪ ಗೌಡರ್, ಬಿ. ಬಸವರಾಜ್, ಚನ್ನಬಸವ ರೆಡ್ಡಿ ಹೆಂಬರಾಳ, ಬನು ದೇಶಪಾಂಡೆ, ಮೊ.ರಾ. ಕೃಪಾಶಂಕರ್

ಹಿತ್ತಲ ಗಿಡದ ಪೋಷಕರು :

ಪ್ರೊ. ಅನಿಲ್ ಕೆ. ಗುಪ್ತ, ಮತ್ತು ಸೃಷ್ಟಿ (SRISTI - Society for Research and Initiatives for Sustainable Technologies and Institutions)

ಐ.ಐ.ಎಂ. ಅಹಮದಾಬಾದ್

ಸಂಪಾದಕೀಯ

ಕಳೆದ ಎರಡು ತಿಂಗಳಲ್ಲಿ ಎರಡು ಮಹತ್ವದ ಅಂತಾರಾಷ್ಟ್ರೀಯ ಸಮ್ಮೇಳನಗಳು ನಮ್ಮ ದೇಶದಲ್ಲಿ ಜರುಗಿರುತ್ತವೆ. ಇವುಗಳ ಹಿನ್ನೆಲೆ, ಎತ್ತಿರುವ ವಿಚಾರಗಳು ಮತ್ತು ಅವುಗಳಿಂದಾಗುವ ಪರಿಣಾಮಗಳನ್ನು ಅರಿತರೆ "ಹಿತ್ತಲಗಿಡ" ದಂತಹ ಪುಟ್ಟ ಪ್ರಯತ್ನವನ್ನು ಗಟ್ಟಿಮಾಡುವುದು ಎಷ್ಟು ಅವಶ್ಯಕವಾಗಿರುತ್ತದೆ ಎಂಬುದಕ್ಕಾಗಿ ಈ ಎರಡು ಸಮ್ಮೇಳನಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಮೊದಲನೆಯದು ಪುಣೆಯಲ್ಲಿ ನವೆಂಬರ್‌ನಲ್ಲಿ ಜರುಗಿದ ನಾಟಿ ಪಶು ಔಷಧಿ ಬಗೆಗಿನ ಸಮ್ಮೇಳನ, ಎರಡನೆಯದು ಬೆಂಗಳೂರಿನ ಕೃಷಿ ವಿ.ವಿ.ಯಲ್ಲಿ ನಡೆದ ನ ಸಾವಯವಕೃಷಿ ಬಗೆಗಿನ ವಿಶ್ವ ಮಟ್ಟದ ಸಮ್ಮೇಳನ.

*ಗೆಳೆಯರಾದ ಡಾ. ರಂಗ್ನೇಕರ್‌ರವರು ಖುದ್ದಾಗಿ ಆಹ್ವಾನಿಸಿದ್ದರಿಂದ ಪುಣೆಯ ಸಮ್ಮೇಳನಕ್ಕೆ ಹೋಗುವ ಅವಕಾಶ ದೊರೆಯಿತು. **ಹಿತ್ತಲಗಿಡ**ದಲ್ಲಿ ದಾಖಲಿಸಿರುವ ಬೀದರ್‌ನ ನಾಟೀ ಪಶುಚಿಕಿತ್ಸಕ ಅಂಬಾಜಿ ಮತ್ತು ನಿವೃತ್ತ ಪಶುವೈದ್ಯ ಇನ್‌ಸ್ಪೆಕ್ಟರ್ ಜೋಗಪ್ಪನವರ ಆಯ್ದ ಕೆಲ ಪಶು ಚಿಕಿತ್ಸೆಗಳನ್ನು ಈ ಸಮ್ಮೇಳನದಲ್ಲಿ ಪ್ರದರ್ಶಿಸಲು ಪ್ರಯತ್ನಿಸಿದೆ.*

ದೇಶಾದ್ಯಂತ ಬಂದಿರುವ ವಿಜ್ಞಾನಿಗಳು, ಎನ್.ಜಿ.ಓ.ಗಳು, ಪಂಡಿತರು ನೂರಾರು ಬಗೆ ಬಗೆಯ ನಾಟಿ ಪಶು ಚಿಕಿತ್ಸಾ ಕ್ರಮಗಳ ಬಗ್ಗೆ ಈ ಸಮ್ಮೇಳನದಲ್ಲಿ ಚರ್ಚಿಸಿ, ಇವುಗಳನ್ನು ಮತ್ತಷ್ಟು ಉತ್ತಮ ಪಡಿಸುವ ಹಾಗೇ ವಾಣಿಜ್ಯಗೊಳಿಸುವ ಬಗ್ಗೆ ಗಂಟೆಗಟ್ಟಲೆ ತಲೆ ಕೆಡಿಸಿಕೊಂಡರು. ನನ್ನ ಮುಖ್ಯ ಉದ್ದೇಶ ಈ ಸಮ್ಮೇಳನದಲ್ಲಿ ಪ್ರೊ. ಅನಿಲ್ ಗುಪ್ತಾರವರು ಸದಾ ಪ್ರತಿಪಾದಿಸುತ್ತಿರುವ 'ಈ ಸಾಮಾನ್ಯರ ಅಸಮಾನ್ಯ ಅನ್ವೇಷಣೆಗೆ' ಬೆಲೆ, ಪ್ರತಿಫಲ ಕೊಡಿಸುವಂತೆ ಮಾಡುವ ಪ್ರಸ್ತಾಪವನ್ನು ಎತ್ತುವುದಾಗಿತ್ತು. ಈ ಬಗ್ಗೆ ಈ ಸಮ್ಮೇಳನದಲ್ಲಿ ಅಷ್ಟೇನೂ ಉತ್ಸಾಹದಾಯಕ ಪ್ರತಿಕ್ರಿಯೆ ಇಲ್ಲದಿರುವುದು ಕೇವಲ ಆಕಸ್ಮಿಕವಿರಬಹುದೆಂದು ಗ್ರಹಿಸಿ, ಇಂತಹಾ ತಳಮಟ್ಟದ ಶೋಧಕರಿಗೆ ಪ್ರತಿಫಲ ದೊರಕಿಸುವ ರೀತಿ ಹೇಗೆಂದು ನಿರ್ಧರಿಸುವ ಒಂದು ಪ್ರತ್ಯೇಕ ಗೋಷ್ಠಿಗೆ ಕರೆಕೊಟ್ಟೆ. ಅದಕ್ಕೆ ಉತ್ಸಾಹದಾಯಕ ಪ್ರತಿಕ್ರಿಯೆ ಯೇನೊ ದೊರಕಿತು. ನಂತರದ ನನ್ನ ಅನುಭವ ಮಾತ್ರ ಈ ವಿದೇಶಿ

ಸಂಪಾದಕೀಯ

ವಿಜ್ಞಾನಿಗಳು, ಖಾಸಗಿ ಕಂಪನಿಗಳು ನಮ್ಮ ಈ ಸಂಪತ್ತನ್ನು ಕೊಳ್ಳೆ ಹೊಡೆಯಲು ಮಾತ್ರ ಬಂದಿರುವವರೆನ್ನುವ ನಮ್ಮೆಲ್ಲರ ಊಹೆಗೆ ಸಾಕಷ್ಟು ಪುರಾವೆ ದೊರಕಿಸುವಂತೆ ಮಾಡಿತು.

ನಾನು ಈ ಗೋಷ್ಠಿಯಲ್ಲಿ ಚರ್ಚಿಸಲು ಎತ್ತಿಕೊಂಡಿರುವ ಮುಖ್ಯ ಶಿಫಾರಸ್ಸು ಎಂದರೆ, ಈ ನಾಟಿ ಪಶು ಚಿಕಿತ್ಸೆ ಪದ್ಧತಿಗಳನ್ನು ನಿಖರಗೊಳಿಸಿ, ವಾಣಿಜ್ಯಗೊಳಿಸಿ ಅದರ ಉಪಯೋಗ ಪಡೆಯುವುದೇ ಆದಲ್ಲಿ ಇದನ್ನು ಸೃಷ್ಟಿಸಿ, ಪೋಷಿಸಿಕೊಂಡು ಬಂದಿರುವ ಆ ನಾಟೀ ಜನರಿಗೆ ಸಾಧ್ಯವಾದಷ್ಟು ಮಟ್ಟಿಗೆ ವೈಯಕ್ತಿಕವಾಗಿ ಪ್ರತಿಫಲ ದೊರೆಯುವಂತಾಗಬೇಕು. ಅದರಲ್ಲೂ ವಿದೇಶಿಯರು ಇದನ್ನು ಬಳಸಿದಲ್ಲಿ ಅವರಿಂದ ಹೆಚ್ಚು ಪ್ರತಿಫಲ ದೊರಕುವಂತಾಗಬೇಕೆನ್ನುವುದು. ಈ ಒಂದು ಅತ್ಯಂತ ನ್ಯಾಯಯುತ ಶಿಫಾರಸ್ಸಿಗೆ ಒಪ್ಪಿಗೆ ದೊರಕುವುದಿರಲಿ, ಅದರ ಮಂಡನೆಗೂ ಅವಕಾಶ ಕೊಡದಂತೆ ಮಾಡಲು ಆ ಗೋಷ್ಠಿಯಲ್ಲಿದ್ದ ವಿದೇಶಿಯರು ಯಶಸ್ವಾದರು. ಇವರಿಗೆ ನಮ್ಮ ದೇಶದ ಕೆಲ ಸ್ವಯಂ ಸೇವಾಸಂಸ್ಥೆಗಳ ಪ್ರತಿನಿಧಿಗಳು ಸಹಕರಿಸಿದ್ದು ಮಾತ್ರ ನನಗಿನ್ನೂ ಅರ್ಥವಾಗದಂತಾಗಿದೆ.

> ಇದೆಲ್ಲಕ್ಕಿಂತ ಮುಖ್ಯವಾಗಿ ನಾಚಿಕೆ ಪಡಬೇಕಾಗಿರುವ ವಿಚಾರವೆಂದರೆ ಆ ವಿದೇಶಿ ಮೂಲದಿಂದ ಹಣ, ವಿಮಾನವೆಚ್ಚ, ಭಾರೀ ಹೋಟಲ್‌ನಲ್ಲಿ ಉಳಿಯುವ ವ್ಯವಸ್ಥೆ ಆ ಮೂಲಕ ಇಂತಹಾ ಮಹಾ ಮೇಳದಲ್ಲಿ ಭಾಗವಹಿಸಲು ಅವಕಾಶ ದೊರೆತಿರುವುದರಲ್ಲೇ ಸಂತೃಪ್ತರಾಗಿ, ಅವರ ತಾಳಕ್ಕೆ ಕುಣಿಯುತ್ತಿರುವ ನಮ್ಮ ವಿಜ್ಞಾನಿಗಳು, ಬುದ್ಧಿಜೀವಿಗಳು, ಸ್ವಯಂಸೇವಾಸಂಸ್ಥೆಗಳ ವೈಚಾರಿಕ ದಿವಾಳಿತನ.

ಡಾ. ರಂಗ್ನೇಕರ್ ಮತ್ತು ಅವರ ಸಹೋದ್ಯೋಗಿಗಳು ನೀಡಿದ ಆ ತಣ್ಣನೆಯ, ಸ್ನೇಹಮಯ ಆದರೆ ಅಷ್ಟೇ ಅದ್ದೂರಿಯ ಉಪಚಾರದ ನಡುವೆಯೂ ಈ ಸಮ್ಮೇಳನದುದ್ದಕ್ಕೂ ಆ ವಿದೇಶಿಯರು ತೋರಿದ ಅಸಹನೆ, ಅಸಡ್ಡೆ, ಕೋಪತಾಪಗಳನ್ನು ಮಾತ್ರ ನನಗಿನ್ನೂ ಅರಗಿಸಿಕೊಳ್ಳದಾಗಿದೆ. ಹಾಗೇ, ಈ ನಾಟಿ ಜ್ಞಾನ ವ್ಯವಸ್ಥೆಯಲ್ಲಿ "ನಾವೂ ವಾರಸ್‌ದಾರರು" (Stake holders) ಎಂದು ಓರ್ವ ವಿದೇಶಿ ಕಂಪನಿ ಪ್ರತಿನಿಧಿ ಮೇಜುಕುಟ್ಟಿ ಹೇಳಿರುವ ದೃಶ್ಯವಂತೂ ನನ್ನನ್ನು ಧಿಗ್ಭ್ರಾಂತಗೊಳಿಸುವಂತಾಗಿದೆ. ಇವೆಲ್ಲ ನನ್ನ ವೈಯುಕ್ತವಾದ ಅನುಭವವಿರಬಹುದು, ಮತ್ತು ಇದನ್ನು ಸಾರ್ವತ್ರಿಕಗೊಳಿಸುವುದು ಸೂಕ್ತವಲ್ಲದಿರಬಹುದು. ಆದರೆ ಈ ನಿಟ್ಟಿನಲ್ಲಿ ಎಚ್ಚರಿಕೆಯಿಂದಿರಬೇಕೆನ್ನುವ ವಿಚಾರವನ್ನು ಮಾತ್ರ ಈ ನನ್ನ ಅನುಭವ ಗಟ್ಟಿ ಮಾಡುವುದರಲ್ಲಿ ಅನುಮಾನವಿರದು.

ಈ ನಿಟ್ಟಿನಲ್ಲಿ ಸದ್ಯದ ವಿಶ್ವ ವಾಣಿಜ್ಯ ಸಂಘಟನೆ ಆ ಮೂಲಕ 'ಬೌದ್ಧಿಕ ಸನದಿನ ಹಕ್ಕು'ಗಳು ಭಾರತದಂತಹ ರಾಷ್ಟ್ರದ ಮೇಲೆ ಯಾವ ಪರಿಣಾಮ ಬೀರಬಹುದು ಎನ್ನುವುದಕ್ಕೆ ನಮಗಿಂದು ಎರಡು ಬೇರೆ ಬೇರೆ ರೀತಿಯ ಅಭಿಪ್ರಾಯಗಳು ದೊರೆಯುತ್ತವೆ. ಮೊದಲನೆಯದು ಪ್ರೊ. ಎಂ.ಡಿ. ನಂಜುಂಡ ಸ್ವಾಮಿ ಮತ್ತು ವಂದನಾ ಶಿವರ ವಾದ. ಇವರ ಪ್ರಕಾರ ಈ ವಿಶ್ವ ವಾಣಿಜ್ಯ ಸಂಘಟನೆಯಾಗಲೀ ಆಗಲೀ ಆ ಮೂಲಕದ ಕಾಯಿದೆಗಳಾಗಲಿ ಶ್ರೀಮಂತ ರಾಷ್ಟ್ರಗಳು, ಬಡರಾಷ್ಟ್ರಗಳನ್ನು ಕೊಳ್ಳೆ ಹೊಡೆಯಲು ರೂಪಿಸಲ್ಪಟ್ಟಿರುವಂತಹವು. ಹಾಗಾಗಿ ಇವುಗಳನ್ನು ನಾಶಮಾಡಿ ಅವುಗಳ ಸ್ಥಾನದಲ್ಲಿ ವಿಶ್ವಸಂಸ್ಥೆಯ ಉಸ್ತುವಾರಿಯಲ್ಲಿ ಮುಕ್ತವೂ, ಸದಸ್ಯ ರಾಷ್ಟ್ರಗಳ ಸ್ವತಂತ್ರ್ಯ ಸ್ವಾವಲಂಬನೆಗಳನ್ನು ಗಟ್ಟಿ ಮಾಡುವಂತಹ ನ್ಯಾಯಯುತ ವ್ಯಾಪಾರ ವ್ಯವಸ್ಥೆಯನ್ನು ಮಾಡಬೇಕೆಂಬುದು ಇವರ ವಾದ ಮತ್ತು ಹೋರಾಟ. ಇದಕ್ಕೆ ಪರ್ಯಾಯವಾಗಿ ಪ್ರೊ.ಅನಿಲ್‌ಗುಪ್ತಾ ರವರ ವಾದ ಮತ್ತು ಪ್ರಯತ್ನ ಸದ್ಯದ ಪೇಟೆಂಟ್ ಕಾಯಿದೆ ಮತ್ತು ವಿಶ್ವ ವ್ಯಾಪಾರ ಒಪ್ಪಂದಗಳ ಮೂಲಕ ನಮ್ಮಲ್ಲಿ ವಿಫಲವಾಗಿರುವ 'ಜೀವ ವಿವಿಧತೆ ಮತ್ತು ನಾಟೀ ಜ್ಞಾನ ಸಮೂಹಗಳನ್ನು ಬಳಸಿ ಈ ದೇಶದ ಬಡರೈತರಿಗೆ, ಬುಡಕಟ್ಟು, ಅಲೆಮಾರಿ ಜನಾಂಗಗಳಿಗೆ ಪ್ರತಿಫಲ ದೊರಕಿಸಿಕೊಡಬಹುದು ಎನ್ನುವುದರತ್ತ. ಈ ಎರಡು ವಾದಗಳನ್ನು ಎಚ್ಚರಿಗೆಯಿಂದಾಲಿಸುತ್ತಾ ನಾವಿಂದು ಈ ಬಗ್ಗೆ ನಮ್ಮ ನಿಲುವುಗಳನ್ನು ರೂಪಿಸಿಕೊಳ್ಳಲು ಪ್ರಯತ್ನಿಸಬೇಕಾಗಿದೆ.

ಈ ಹಿನ್ನೆಲೆಯಲ್ಲೇ ಡಾ. ದರ್ಶನ್ ಶಂಕರ್ ಸಂಘಟಿಸುತ್ತಿರುವ **"ಔಷಧಿ ಸಸ್ಯಗಳ ಬಗೆಗಿನ ಅಂತಾರಾಷ್ಟ್ರೀಯ ಸಮ್ಮೇಳನ"** ಯಾವ ರೂಪ ಪಡೆಯುತ್ತದೆ ಎಂದು ನೋಡಬೇಕಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲೇ **"ರೈತರ ಜ್ಞಾನ ಆಧಾರಿತವಾದ ಜೈವಿಕ ತಂತ್ರಜ್ಞಾನ"** ಎಂಬ ವಿದೇಶಿಯರ ಇತ್ತೀಚೆಗಿನ ತೆವಲನ್ನು ಅತ್ಯಂತ ಎಚ್ಚರಿಕೆಯಿಂದ ಪರೀಕ್ಷಿಸಬೇಕಾಗಿದೆ. ಆದರೆ ಈ ನಿಟ್ಟಿನಲ್ಲಿ ಯಾವುದೇ ಸ್ಪಷ್ಟ ನಿಲುವುಗಳ ಗೋಜಿಲಿಗೆ ಹೋಗದ ಮತ್ತೊಂದು ಮೇಳ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಜರುಗಿತು. ಇಂದು ಬೀಸುತ್ತಿರುವ ಈ ಸಾವಯವ ಕೃಷಿಯ ಬಿರುಸಿನ ಹೊಡೆತಕ್ಕೆ ಬಾಗುವುದೇ ಅನಿವಾರ್ಯವೆಂದಂತಿದ್ದ ಈ ಸಮ್ಮೇಳನ ಸಾವಯವ ಕೃಷಿಯನ್ನು ಈ ದೇಶದಲ್ಲಿ ಗಟ್ಟಿಮಾಡುವ ಬಗೆಗಾಗಲೀ ಅಥವಾ ಸಾವಯವ ಕೃಷಿಯ ಮೂಲಕ ಆಹಾರ ಭದ್ರತೆ ಈಡೇರಿಸಿಕೊಳ್ಳುವ ಸಮ್ಮೇಳನದ ಮಹದುದ್ದೇಶದ ಈಡೇರಿಕೆಗಾಗಲೀ ಯಾವುದೇ ರೀತಿಯ

ಸಂಪಾದಕೀಯ

ನಿರ್ಧಿಷ್ಟ ಮಾರ್ಗೋಪಾಯ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿರುವುದು ಕಂಡುಬಂದಿಲ್ಲ. ಆದರೆ ರೈತರ ಒಂದು ಸಮ್ಮೇಳನದಲ್ಲಿ ನಮ್ಮ ಕೃಷಿ ಪಂಡಿತರಾದ ಡಾ. ದ್ವಾರಕನಾಥ್‌ರವರು "ಈ ಸಾವಯುವ ಕೃಷಿಯಿಂದ ದೇಶದ ಹಸಿದ ಜನತೆಗಿಂದು ಅನ್ನ ನೀಡಲು ಸಾಧ್ಯವೆ?" ಎಂದು ಎತ್ತಿರುವ ಪ್ರಶ್ನೆಯೂ ಹಾಗೇ "ಗರಿಷ್ಟ ಉತ್ಪಾದನೆಗಿಂತ ಆದಷ್ಟು ಹೆಚ್ಚು ಲಾಭಗಳಿಸುವುದೇ ನಮ್ಮ ಉದ್ದೇಶ" ಎಂದು ಸಾವಯುವ ಕೃಷಿಕರು ನೀಡಿರುವ ಹೇಳಿಕೆ ಇವೆರಡೇ ಈ ಸಮ್ಮೇಳನದ ಅತ್ಯಂತ ಪ್ರಾಮಾಣಿಕ ಅಭಿಪ್ರಾಯಗಳು ಮಾತ್ರವಲ್ಲ, ಇದು ಸಾವಯುವ ಕೃಷಿ ಬಗ್ಗೆ ಚಿಂತಿಸುವವರನ್ನೆಲ್ಲಾ ಮತ್ತಷ್ಟು ಚುರುಕುಗೊಳಿಸಬೇಕಾಗಿದೆ.

ಈ ಎಲ್ಲಾ ವ್ಯರ್ಥ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮೇಳಗಳ ನಡುವೆಯೂ ತಳಮಟ್ಟದಲ್ಲಿ ರೈತರೇ ಒಂದು ಗೂಡಿ ವಿಜ್ಞಾನಿಗಳು, NGOಗಳ ಹಾವಳಿ ಇಲ್ಲದೇ ಮುಕ್ತವಾಗಿ ಪರಿಸರ, ಸುಸ್ಥಿರ ಕೃಷಿಗಳ ಬಗ್ಗೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಚರ್ಚಿಸಿ ಕಾರ್ಯಪ್ರವತ್ತರಾಗುತ್ತಿರುವುದು ನಾವಿಂದು ಗಮನಿಸಬೇಕಾಗಿದೆ. ಇದು ನಮಗೆ ಅಪಾರ ಭರವಸೆ ಹುಟ್ಟಿಸುತ್ತಿದೆ. ಹಾಸನದ "ಹಾಸನ ಜಿಲ್ಲಾ ಪರಿಸರ ಪ್ರಿಯ ಕೃಷಿಕರ ಕೂಟ", ಮೈಸೂರು ಜಿಲ್ಲೆಯ "ಜೀವಧಾರಕ ಕೃಷಿ ಕೂಟ', ಚಿತ್ರದುರ್ಗದ "ಪ್ರಗತಿಶೀಲ ರೈತರ ವೇದಿಕೆ', ಹಾಗೇ ಪ್ರತಿ ತಿಂಗಳೂ ಒಂದಲ್ಲೊಂದು ಹೋರಾಟ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವ "ದ.ಕ. ಪರಿಸರಾಸಕ್ತ ಒಕ್ಕೂಟ' ಇವೆಲ್ಲಾ ಇಂದು ಜನತಾ ಮೂಲದಿಂದಲೇ ಪರಿಸರ, ಸುಸ್ಥಿರ ಅಭಿವೃದ್ಧಿಯ ಬಗ್ಗೆ ಏಳುತ್ತಿರುವ ಕಾಳಜಿಗೆ ಸಾಕ್ಷಿಯಾಗಿದೆ. ಈ ಎಲ್ಲಾ ಸಂಘಟನೆಗಳಿಗೆ ಇಂದು ಸೂಕ್ತ ನಾಯಕತ್ವ ಹಾಗೇ ಯೋಗ್ಯ ತಾತ್ವಿಕ ಅಡಿಪಾಯ ಅತ್ಯಗತ್ಯವಾಗಿದೆ.

ಪರಿಸರ, ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ ಎಲ್ಲಾ ಸಂಘಟನೆ, ಹೋರಾಟಗಳು ಬರಿದೇ ಉಳ್ಳವರ ಪರವಾದ ಕಾರ್ಯಕ್ರಮವಾಗದೇ ಕಡುಬಡವರ ಆಹಾರ, ಆರೋಗ್ಯ, ಆದಾಯಗಳ ಭದ್ರತೆಯನ್ನೂ ಇಂದು ಮತ್ತು ಮುಂದೂ ಕಾಪಾಡಿಕೊಂಡು ಬರುವತ್ತ ಹಾಗೇ ಪ್ರಾಣಿ, ಪಶು, ಪಕ್ಷಿಗಳಿಂದ ಸಕಲ ಜೀವರಾಶಿಗಳು ಬದುಕುಳಿಯುವ 'ಹಕ್ಕ'ನ್ನೂ ಎತ್ತಿ ಹಿಡಿಯುವತ್ತ 'ಪರಿಸರವಾದ'ದ ಬಗೆಗಿನ ತಮ್ಮ ತಾತ್ವಿಕ ನೆಲಗಟ್ಟನ್ನು ವಿಸ್ತರಿಸಿ ಕೊಳ್ಳಬೇಕಾಗಿದೆ.

ಶ್ರೀ ಯಲ್ಲಪ್ಪ ರೆಡ್ಡಿಯವರ ನೇತೃತ್ವದ "ನೈಸರ್ಗಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆ" ಶ್ರೀ ಥಾಕು ಸುಕ್ರು ಗೌಡರು ಸಂಗ್ರಹಿಸಿದ ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಗಿಡಮೂಲಿಕೆ ಔಷಧಿಗಳ ಬಗೆಗಿನ ಜ್ಞಾನದ ಪುಸ್ತಕ ಬಿಡುಗಡೆಮಾಡಿದೆ. ಈ ಜ್ಞಾನದ ಕಬಳಿಕೆ ತಡೆಯುವುದೇ ಮುಖ್ಯ ಉದ್ದೇಶವೆಂದು ಅ.ನ. ಯಲ್ಲಪ್ಪರೆಡ್ಡಿಯವರು ಮುನ್ನುಡಿಯಲ್ಲಿ ತಿಳಿಸಿರುವರು. ಆದರೆ ಈ ನಿಟ್ಟಿನಲ್ಲಿ ಈ ಜ್ಞಾನಸಂಪತ್ತನ್ನು ಧಾರೆ ಎರೆದಿರುವ ಹಾಲಕ್ಕಿ ಒಕ್ಕಲಿಗರ ಪರಿಚಯವನ್ನು ಅಂತ್ಯದಲ್ಲಿ, "ಔಷಧಿ ಮಾಹಿತಿಯನ್ನು ಹೇಳಿದವರೆಂದು" ಸಂಕ್ಷಿಪ್ತ ರೂಪದಲ್ಲಿ ನೀಡಲಾಗಿದೆ. ಇದು ಪೇಟೆಂಟ್‌ನ ಈ ದಾಳಿಗೆ ಎಷ್ಟು ಸಮಂಜಸವೆಂದು ತಿಳಿಯುತ್ತಿಲ್ಲ. ಈ ನಿಟ್ಟಿನಲ್ಲಿ ಪ್ರೊ. ಅನಿಲ್ ಗುಪ್ತಾರವರ ದೃಷ್ಟಿ ಕೋನ ಮತ್ತಷ್ಟು ಮಹತ್ವವಾಗಿರುತ್ತದೆ.

ಪ್ರೊ. ಗುಪ್ತಾರವರು ಈ ಎಲ್ಲಾ ಅಪಾರ ನಾಟಿ ಜ್ಞಾನ, ತಂತ್ರ ಜ್ಞಾನ ವ್ಯವಸ್ಥೆಯನ್ನು **"ತಳಮಟ್ಟದ ಅನ್ವೇಷಣೆ"** ಎಂದು ಸೂಕ್ತವಾಗಿ ನೋಡುತ್ತಾರೆ. ಇದು ಅತಿಶಯೋಕ್ತಿಯ ಮಾತೂ ಅಲ್ಲ. ಈ ದೇಶೀಯ ಜ್ಞಾನ, ತಂತ್ರ ಜ್ಞಾನ ವ್ಯವಸ್ಥೆಯೆಂಬುದು ತಲೆ ತಲಾಂತರದಿಂದ ಹರಿದು ಬರುತ್ತಿದೆ. ಇದನ್ನು ಈ ನಾಟಿ ಜನಗಳು ಬರಿದೇ ಪೋಷಿಸಿಕೊಂಡು ಬರುತ್ತಿರುವ "ಜಡಸಂವಹಕರು" ಎಂದರೆ ಅದು ಅವರಿಗೆ ಮಾಡುವ ಅಪಚಾರಮಾತ್ರವಲ್ಲ, ಆ ವಿದೇಶಿಯರಿಗೆ ಈ ಸಂಪತ್ತನ್ನು ಕೊಳ್ಳೆ ಹೊಡೆಯಲು ಮತ್ತಷ್ಟು ಅನುವು ಮಾಡಿ ಕೊಟ್ಟಂತಾಗುತ್ತದೆ.

ಈ ನಾಟಿ ಜನಗಳು ತಮ್ಮ ಈ ಜ್ಞಾನ ವ್ಯವಸ್ಥೆಯ ಪೋಷಕರಾಗಲೀ ಬರಿದೇ ಸಂವಾಹಕರಾಗಲೀ ಅಲ್ಲ. ಬದಲಿಗೆ ಈ ಜ್ಞಾನ ಭಂಡಾರದ ಮೂಲಕ ಆಯಾ ಕಾಲ ಪರಿಸ್ಥಿತಿಗೆ ಹೊಂದಿಕೊಂಡಂತೆ ನಿರಂತರವಾಗಿ ಅದನ್ನು ಪರಿಷ್ಕರಿಸುತ್ತಾ, ಹೊಸ ಹೊಸ ಮಾರ್ಪಾಡನ್ನು, ಅನ್ವೇಷಣೆಯನ್ನು ಮಾಡುತ್ತಿರುವರು. ಅದೂ ಕೂಡ ಯಾವುದೇ ಪೇಟೆಂಟ್ ಆಸೆಗಾಗಲೀ, ವಾಣಿಜ್ಯಮಯಗೊಳಿಸಿ ಲಾಭಕ್ಕಾಗಲೀ ಅಲ್ಲ. ಸತತ ವೈಪರೀತ್ಯ, ಕಡು ಬಡತನ, ಏಳುಬೀಳುಗಳನ್ನೆದುರಿಸಿ ಬದುಕುಳಿಯಲು ಮತ್ತು ತಮ್ಮ ಕುಲಬಾಂಧವರನ್ನು ಉಳಿಸಲು ಮಾತ್ರ. ಇದು ನೂರಾರು ಹಳಸಲು ಸಂಶೋಧನೆ ಮಾಹಿತಿಗಳ ಆಧಾರದ ಮೇಲೆ, ಹತ್ತಾರು ಜನರನ್ನು ಸಂಪರ್ಕಿಸಿ ಅವರ ಮಾರ್ಗದರ್ಶನ ದಡಿಯಲ್ಲಿ ವಿಜ್ಞಾನಿ ಓರ್ವನು ಸಂಶೋಧನಾಲಯದಲ್ಲಿ ನಡೆಸುವ ಅನ್ವೇಷಣೆಗಿಂತ ಕಡಿಮೆ ಏನೂ ಇರುವುದಿಲ್ಲ. ಯಾವುದೇ ಒಂದು ನಾಟಿ ತಂತ್ರಜ್ಞಾನ ತಲೆಮಾರಿನಿಂದ ತಲೆಮಾರಿಗೆ ಅಥವಾ ಒಂದೆಡೆಯಿಂದ ಇನ್ನೊಂದೆಡೆಗೆ ಪರಿಷ್ಕರಣಗೊಂಡು ವ್ಯತ್ಯಾಸ ಹೊಂದುತ್ತಿರುವುದು ಈಗಾಗಲೇ ಖಾತರಿಯಾಗಿದೆ.

> ಅಂದಮೇಲೆ ಈ ನಾಟಿ ಜನಗಳ ಜ್ಞಾನ, ತಂತ್ರ ಜ್ಞಾನವನ್ನು ಅನ್ವೇಷಣೆ ಎಂದು ಒಪ್ಪಿಕೊಳ್ಳಲು ನಾವೇಕೆ ಹಿಂದೆ ಮುಂದೆ ನೋಡಬೇಕು. ಪ್ರೊ.ಗುಪ್ತಾರವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇದಕ್ಕೆ ದೇಶೀಯ ಜ್ಞಾನಾಧಾರಿತ ತಳಮಟ್ಟದ ಜನರ "ಸಮಕಾಲೀನ ಅನ್ವೇಷಣೆ" ಎಂದು ಕರೆಯುತ್ತಾರೆ.

ಇದನ್ನೇ ನಾವು ನೀವೆಲ್ಲಾ ಒಕ್ಕೊರಲಿನಿಂದ ಹೇಳಿದಾಗ ಮಾತ್ರ ಈ ಜ್ಞಾನದ ಲೂಟಿ ತಡೆಯುವುದು ಮಾತ್ರವಲ್ಲ ಈ ತಳಮಟ್ಟದ ಜನಗಳಿಗೆ ಪ್ರತಿಫಲ ನೀಡಲೂ ಸಾಧ್ಯವಾಗುತ್ತದೆ. ಅಂದಮೇಲೆ ನಾವೆಲ್ಲಾ ಇದನ್ನು ದಾಖಲಿಸುವವರು, ಅಭ್ಯಸಿಸಿ ಇದರ ಮೇಲೆ ಸಂಶೋಧನೆ ನಡೆಸುವವರು, ಹೊಸ ಹೊಸ ಆವಿಷ್ಕಾರ ಮಾಡುವ ದೇಶ ವಿದೇಶದ ಪಂಡಿತರೆಲ್ಲಾ ಒಂದರ್ಥದಲ್ಲಿ ಈ ನಾಟೀ ಜನಾಂಗದ ಮೇಲೆ ನಿಂತಿರುವ 'ಪರಾವಲಂಬಿ'ಗಳೆಂಬುದನ್ನು ಮುಲಾಜಿಲ್ಲದೇ ಒಪ್ಪಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಇನ್ನು ಕಿರು ಅರಣ್ಯ ಉತ್ಪನ್ನಗಳ ಬಗ್ಗೆ ರವಿಹೆಗ್ಡೆಯವರ ವಿವರವಾದ ಲೇಖನವಿದೆ. ಇದರ ಮಹತ್ವವನ್ನು, ಇದಕ್ಕೆ ಇಂದು ದೊರೆಯುತ್ತಿರುವ ಪ್ರಾಧಾನ್ಯವನ್ನು ಈ ಲೇಖನ ಎತ್ತಿ ಹಿಡಿಯುತ್ತದೆ. ಇದೇರೀತಿ ಇಂದು ಜೀವ ವಿವಿಧತೆ, ಅಂತರ್ಜಲ, ನಾಟೀ ಔಷಧಿ ಸಸ್ಯಗಳು, ದೇವರ ಕಾಡಿನಂತಹ ದೇಶೀಯ ಸಂಸ್ಥೆಗಳು, ತೇವದರಣ್ಯ (Mangroves), ಇವುಗಳ ಮೇಲೂ ಆ ವಿದೇಶಿಯರ ಕಪಟ ದೃಷ್ಟಿ ಬೀಳುವಂತಾಗಿದ್ದು, ಇವುಗಳ ಮೇಲೆ ಸಂಶೋಧನೆ, ಅಭಿವೃದ್ಧಿಯ ಹೆಸರಿನಲ್ಲಿಂದು ಹಣ ಹರಿದುಬರುವಂತಾಗಿದೆ. ಈ ಹಣದ ಅರ್ಧಭಾಗ ಈ ಸ್ವಯಂಸೇವಾ ಸಂಸ್ಥೆಗಳ ಭಸ್ಮಾಸುರ ಹೊಟ್ಟೆಗೆ ಸೇರುವಂತಾದರೆ ಉಳಿದರ್ಧ ಸಂಶೋಧನಾ ಕೇಂದ್ರಗಳಲ್ಲಿ ವಿಜ್ಞಾನಿಗಳ ಉದ್ದೇಶ ರಹಿತ ಸಂಶೋಧನೆ, ದೇಶ ವಿದೇಶಗಳಲ್ಲಿ ಅವರ ಪ್ರಭಂದ ಮಂಡನೆಯಂತಃ ವ್ಯರ್ಥ ಕಾರ್ಯಕ್ಕಾಗಿ ದುರುಪಯೋಗವಾಗುವಂತಾಗಿದೆಯೇ ಹೊರತು ಈ ದೇಶಕ್ಕಾಗಲೀ, ಈ ಸಂಪನ್ಮೂಲಗಳನ್ನು ಪೋಷಿಸುತ್ತಾ ಜೀವನಾಧಾರವಾಗಿ ಅದನ್ನು ನಂಬಿರುವವರಿಗೆ ಕಿಂಚಿತ್ತೂ ಉಪಯೋಗವಾಗದಂತಾಗಿದೆ. ಹಾಗಾಗಿ ದುರುಪಯೋಗಗೊಳ್ಳುತ್ತಿರುವ "ಹಿತ್ತಲಗಿಡ"ದ ಸಾಲಿಗೆ ಇವೆಲ್ಲವನ್ನು ಸೇರಿಸಬಹುದಾಗಿದೆ. ಆದರೆ ಈ ರೀತಿಯ ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೆ, ಶುದ್ಧ ಸಂಶೋಧನಾ ದೃಷ್ಟಿಯಿಂದ ಕೈಗೊಂಡಿರುವ ಪ್ರೊ. ಎಂ.ಜಿ. ನಾಗರಾಜರ **"ಕೊಡಗಿನ ಪಸ್ಸ ಜಮೀನುಗಳು"** ಅತ್ಯಂತ ಸ್ವಾಗತಾರ್ಹವಾಗಿದೆ. ಅದೇ ರೀತಿ ಶಶಿಧರ ಮತ್ತು ಲತಾರವರ "ತಗ್ಗು ಭೂಮಿಯ ನಾಡ ಭತ್ತದ ತಳಿಗಳು" ಬಗೆಗಿನ ಸಂಶೋಧನೆ ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳ ಮೇಲೆ ಇನ್ನೂ ಭರವಸೆ ಉಳಿಸುವಂತೆ ಮಾಡಿದೆ.

ಇನ್ನು ನಮ್ಮ ಖ್ಯಾತ ಲೇಖಕ, ಪ್ರಗತಿಪರ ಸಮಾಜವಾದಿ ಚಿಂತಕ ಪಿ. ಲಂಕೇಶ್‌ರವರ ಆಧುನಿಕ ಕೃಷಿ ಬಗೆಗಿನ ಅನುಭವದ ಪುಟ್ಟ ಟಿಪ್ಪಣಿ ಕೊಡಲಾಗಿದೆ. ಇದನ್ನು ಅವರ ಇತ್ತೀಚಿನ ಆತ್ಮಕಥನ "ಹುಳಿಮಾವಿನ ಮರ" ದಿಂದ ಸಂಗ್ರಹಿಸಲಾಗಿದೆ. ಲಂಕೇಶರ ತೀವ್ರ ಅನಾರೋಗ್ಯದ ಹಿನ್ನೆಲೆಯಲ್ಲೇ ಅವರಿಗಾಗಿರುವ ಈ ಅನುಭವ ಕಾಕತಾಳೀಯವಾಗಿರಬಹುದು. ಆದರೆ ಇದು ಈ ಆಧುನಿಕ ಕೃಷಿಯ ವೈಪರೀತ್ಯಗಳಿಗೆ ಒಂದು ಉತ್ತಮ ಸಾಂಕೇತಿಕವಾಗಿದೆ ಎನ್ನಲು ಮಾತ್ರ ಅನುಮಾನವಿರದು.


ಇನ್ನು ಈ ಸಂಚಿಕೆಯಲ್ಲಿ ಬೇರೆ ರಾಜ್ಯಗಳಿಂದ ಭಾಷಾಂತರಿಸಿದ ಲೇಖನಗಳು ಅಧಿಕವಾಗಿವೆ. ಇದು ನಮ್ಮ ಅನಿಲ್ ಗುಪ್ತಾರವರ ಆಸೆಯೂ ಹೌದು. ಈ ರೈತರ ಜ್ಞಾನವೆಂಬುದು ಆ ಭಾಷೆಯನ್ನಾಡುವ ರೈತರುಗಳಿಗೆ ಒಂದೇ ರಾಜ್ಯದಲ್ಲಿ ವಿನಿಮಯವಾದರೆ ಸಾಲದು ಬೇರೆ ಬೇರೆ ಭಾಷೆಗಳು, ಸಂಸ್ಕೃತಿಗಳ ನಡುವೆ ಕೂಡ ವಿನಿಮಯವಾಗಬೇಕೆಂಬುದು ಅವರ ವಾದ. ತಮ್ಮ ಸಂಸ್ಥೆಯ ಮೂಲಕ ಸಾವಿರಾರು ರೈತ ಶೋಧನೆಗಳನ್ನು ದಾಖಲು ಮಾಡಿ, ಅದನ್ನು ಗಣಕೀಕರಣಗೊಳಿಸಿ, ಬೇಕೆಂದಾಗ ದೇಶದ ಯಾವುದೇ ಮೂಲೆಗಳಿಂದ ರೈತರು ಈ ಜ್ಞಾನ ವಿನಿಮಯ ಮಾಡಿಕೊಂಡು ಉಪಯೋಗಿಸುವ ವ್ಯವಸ್ಥೆಯನ್ನು ಡಾ. ಗುಪ್ತಾರವರು ಈಗಾಗಲೇ ಹುಟ್ಟಿಹಾಕಿದ್ದು, ಇದರ ಲಾಭವನ್ನು ಹಿತ್ತಲಗಿಡದ ಮೂಲಕ ನಮ್ಮ ರೈತರು ಸದ್ಯದಲ್ಲೇ ಪಡೆಯುವಂತಾಗುವರು.

ಈ ಸಾವಯವ ಕೃಷಿ ಉತ್ಪಾದನೆ ದೃಷ್ಟಿಯಿಂದ ಎಷ್ಟು ಸಮಂಜಸ ಎನ್ನುವುದಕ್ಕೆ ದಾಭೋಲ್ಕರ್‌ರವರ **"ಹತ್ತು ಗುಂಟೆಯಲ್ಲಿ ಸ್ವಾವಲಂಬನೆ"** ಹಾಗೂ ಬಸವರಾಜ ಸಂತೇಶಿವರವರ **"ಎಕರೆಗೆ 38 ಕ್ವಿಂಟಾಲ್ ಸಾವಯುವ ಭತ್ತದ ಬೆಳೆ"** ಲೇಖನಗಳು ಉತ್ತರ ದೊರಕಿಸಲಿವೆ. ಹಿತ್ತಲಗಿಡದ ಪ್ರಯತ್ನಕ್ಕೆ ಹಲವು ಪ್ರಶಂಸೆಗಳು ಬರುತ್ತಿವೆ. ಆದರೆ ನಾವಿನ್ನು ಸಾಧಿಸಬೇಕಾಗಿರುವುದು ಬಹಳವಿದೆ. ಈ ಪ್ರಸಂಶೆಗಳಿಗಿಂತ ಹೆಚ್ಚು ಶ್ರೀ ಸುದರ್ಶನ ಪುತ್ತೂರರ ಎಚ್ಚರಿಕೆಯ ಮಾತುಗಳನ್ನು ಹಾಗೇ ಪತ್ರಿಕೆ ನಿಯಮಿತವಾಗಿ ಬರುತ್ತಿಲ್ಲವೆಂಬ ಹಲವಾರು ರೈತ ಮಿತ್ರರ ದೂರಿನ ಪತ್ರಗಳನ್ನು ಗಂಭೀರವಾಗಿ ಪರಿಗಣಿಸಿ, ಈ ನಿಟ್ಟಿನಲ್ಲಿ ಹಿತ್ತಲಗಿಡದ ಮುಂದಿರುವ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಪ್ರಾಮಾಣಿಕ ಪ್ರಯತ್ನ ಪಡುತ್ತೇವೆಂದು ಹೇಳುತ್ತೇವೆ.

ಪ್ರಕಾಶ ಕಮ್ಮರಡಿ

ಜೀರಿಗೆ ಗಿಡದ ಕಾಡಿಗೆ ರೋಗಕ್ಕೆ ನವ ಕಲಾಶಾಸ್ತ್ರ

ಗುಜರಾತಿನ ಅಜ್‌ಮೇರ್ ಜಿಲ್ಲೆಯ ಸುಕ್‌ದೇವ್ ಕುಮಾರ್‌ರವರು ತಮ್ಮ ಜೀರಿಗೆ ಬೆಳೆಗೆ ತಗುಲಿದ ಕಾಡಿಗೆ ರೋಗವನ್ನು ತಡೆಗಟ್ಟಲು ಶತ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲವಂತೆ. ಅವರು ತಮಗೆ ತಿಳಿದ ಎಲ್ಲಾ ವಿಧಾನವನ್ನು ಈ ರೋಗ ನಾಶಕ್ಕೆ ಪ್ರಯೋಗಿಸಿ ನೋಡಿ ಗುಣಕಾಣದೆ ಕಡೆಯದಾಗಿ ಒಂದು ಹೊಸ ಪ್ರಯೋಗವನ್ನು ಮಾಡಿ ನೋಡಿದರಂತೆ ಅದೇನಂದರೆ ಸುಮಾರು 5-7 ಕೆ.ಜಿ.ಯಷ್ಟು 'ಕಿಂಪ್' (Kheemp - *Leptadenia reticulata)* ಎಂಬ ಗಿಡದ ಕೊಂಬೆಗಳನ್ನು ತೆಗೆದು ನೀರಿನ ಟ್ಯಾಂಕ್‌ನಲ್ಲಿ ಇಡುತ್ತಾರೆ. ಒಂದು ವಾರದ ನಂತರ ಆ ನೀರನ್ನು ರೋಗ ತಗುಲಿದ ಗಿಡಗಳಿಗೆ ಚಿಮುಕಿಸುತ್ತಾರೆ. ಈ ರೀತಿ ಮಾಡುವುದರಿಂದ ರೋಗವನ್ನು ಶೇಕಡ 80 ರಷ್ಟು ತಡೆಗಟ್ಟಬಹುದೆಂದು ಅವರು ಹೇಳುತ್ತಾರೆ.



ಕೀಂಪ್ ಗಿಡ

ಸುಕ್‌ದೇವ್ ಕುಮಾರ್ ತಹಸಿಲ್, ಬಿಜಯ್‌ನಗರ, ಅಜ್‌ಮೇರ್ ಜಿಲ್ಲೆ, ಮೂಲ: ಹನಿ ಬೀ, ಸಂ. 7(1), 1996

ಮಿಡತೆಗಳನ್ನು ಪಳಗಿಸಲು ನೀರುಳ್ಳಿ

ಬಣ್ಣದ ಮಿಡತೆಗಳು ಜೋಳದ ಬೆಳೆಯನ್ನು ನಾಶಮಾಡುತ್ತವೆ. ಬೇರುಮಾರಿ ಗಿಡ (Striga) ದಂತಹ ಪರೋಪ ಜೀವಿಗಳು (Parasites) ಮತ್ತು ಎಲೆ ಸುರುಳಿಯಂತಹ ರೋಗಗಳು ಎಲೆಗಳನ್ನು ಮತ್ತು ಅದರ ಚಿಗುರನ್ನು ಹಾಳುಮಾಡುತ್ತದೆ. ಸಾಮಾನ್ಯವಾಗಿ ಈ ಎಲ್ಲ ಪೀಡೆಗಳು ಮಳೆಗಾಲದಲ್ಲಿ ದಾಳಿಮಾಡುತ್ತದೆ. 3-4 ಕೆ.ಜಿ. ನೀರುಳ್ಳಿಯನ್ನು ಸಿಪ್ಪೆ ತೆಗೆದು ಜಜ್ಜಿ ರಸ ತೆಗೆದು, ಆ ರಸವನ್ನು ಶೋಧಿಸಿದ ನಂತರ ಗಿಡಗಳಿಗೆ ಸಿಂಪಡಿಸುತ್ತಾರೆ. ಇದರಿಂದ ಇವುಗಳು ನಾಶವಾಗುತ್ತದೆ ಎಂದು ಗುಜರಾತಿನ ರೈತರ ಅಭಿಪ್ರಾಯ.

ಚಂಗನಭಾಯಿ, ಜಿನಾಭಾಯಿ ರಾಠೋಡ್, ಪಂಮಲ್ ಜಿಲ್ಲೆ. ಸಂ. 8 (2), 1997

ನಿಂಬೆಗಿಡಗಳ ಅಂಟು ರೋಗಕ್ಕೆ

ನಿಂಬೆಗಿಡಗಳಿಗೆ ಸಾಮಾನ್ಯವಾಗಿ ತಗಲುವ ರೋಗವೆಂದರೆ ಕಾಂಡ ಸೋರುವ (Gummy disease) ಈ ಅಂಟುರೋಗ. ಈ ರೋಗದಿಂದ ಎಲೆಗಳು ಒಣಗುತ್ತವೆ ಮತ್ತು ಮರದ ಕೆತ್ತೆಗಳಲ್ಲಿ ಹುಣ್ಣಿನ ತರಹ ಕಾಣಿಸಿಕೊಳ್ಳುತ್ತದೆ. ಇದರ ಜೊತೆ ಅಂಟಿನಂತಹ ದ್ರವ ಪದಾರ್ಥ ಹೊರ ಹೊಮ್ಮುತ್ತದೆ.

ಈ ರೋಗಕ್ಕೆ ಮೆಹಸನಾ ತಾಲೂಕಿನ ಶ್ರೀ ಸೋಮಾಭಾಯಿ ಪಟೇಲರು ನೀರಿನ ಕಾಲುವೆಯಲ್ಲಿ ಹರಳೆಣ್ಣೆಯನ್ನು ಹಾಕಿ ಗಿಡಗಳಿಗೆ ನೀರನ್ನು ಬಿಡುತ್ತಾರೆ. ಇದರ ಜೊತೆ ಹೊಗೆಸೊಪ್ಪಿಗೆ ಪುಡಿಯನ್ನು ಗಿಡಗಳಿಗೆ ಸಿಂಪಡಿಸುತ್ತಾರೆ. ಈ ರೀತಿ ಮಾಡಿದಾಗ ಎರಡು ಅಥವಾ ಮೂರು ದಿನಗಳಲ್ಲಿ ಗಿಡಗಳು ರೋಗದಿಂದ ಗುಣಹೊಂದುತ್ತವೆ. ಸೋಮಾಭಾಯಿ ಯವರು ಈ ಪ್ರಯೋಗವನ್ನು ಸುಮಾರು ಹತ್ತು ವರ್ಷಗಳಿಂದ ಮಾಡುತ್ತಿದ್ದಾರೆ. ಅದೂ ಅಲ್ಲದೆ ಅವರ ಹಳ್ಳಿಯ ರೈತರು ಸಹಾ ಈ ಪ್ರಯೋಗವನ್ನೇ ಮಾಡುತ್ತಾರೆ ಎಂದು ತಿಳಿದುಬಂದಿದೆ.

ಸೋಮಭಾಯಿ ಲಲ್ಲೂ ಬಾಯಿ ಪಟೇಲ್ ಮೇಸನಾ ಜಿಲ್ಲೆ. ಹನಿ ಬೀ, ಸಂ. 8(2), 1997

ಇಲಿ ನಿಯಂತ್ರಣ

ಗುಜರಾತಿನ ಸೌರಾಷ್ಟ್ರ ಪ್ರಾಂತ್ಯದ ಜನರು ತಮ್ಮದೇ ಇಲಿ ನಿಂಯತ್ರಣ ಕ್ರಮ ಕಂಡುಹುಡುಕಿದ್ದಾರೆ. ಬೋನಿನಲ್ಲಿ ಆಹಾರವನ್ನಿರಿಸಿ ಮೊದಲು ಒಂದು ಇಲಿಯನ್ನು ಹಿಡಿಯುತ್ತಾರೆ. ಹೀಗೆ ಹಿಡಿದ ಇಲಿಗೆ ಅರಿಶಿಣವನ್ನು ನೀರಲ್ಲಿ ಕಲಸಿ ದ್ರಾವಣ ಮಾಡಿ ಸುರಿಯುತ್ತಾರೆ. ಹೀಗೆ ಹಳದಿ ಬಣ್ಣ ಹೊಂದಿದ ಇಲಿಯನ್ನು ಅನಂತರ ಉಗ್ರಾಣಾದಲ್ಲೋ ಅಥವಾ ಜಮೀನಿನಲ್ಲೋ ಬಿಡುತ್ತಾರೆ. ಈ ಹೊಸ ಇಲಿಯನ್ನು ಕಂಡ ಉಳಿದ ಇಲಿಗಳೂ ಅಲ್ಲಿಂದ ಜಾಗ ಖಾಲಿ ಮಾಡುತ್ತವೆ.

ತುಂಗೆ ಹುಲ್ಲು ನಿಯಂತ್ರಣಕ್ಕೆ

ಗುಜರಾತಿನ ರಾಜಕೋಟ ಜಿಲ್ಲೆಯ ಪ್ರದೇಶದಲ್ಲಿ ಹತ್ತಿ ಬೆಳೆಯುವುದು ಅಧಿಕ. ಹತ್ತಿಕಾಯಿಂದ ಹತ್ತಿಯನ್ನು ತೆಗೆದ ನಂತರ ಉಳಿಯುವ ಕಾಯಿಯ ಸಿಪ್ಪೆಯನ್ನು ಬಿಸಾಕುವ ಬದಲು ಅದನ್ನು ಜಾಣ್ಮೆಯಿಂದ ಉಪಯೋಗಿಸಲು ಪ್ರಯತ್ನಿಸಿದ್ದಾರೆ. ಈ ಸಿಪ್ಪೆಗಳನ್ನು ತುಂಗೆ ಹುಲ್ಲು *(Cyperus rotundus)* ತುಂಬಿರುವ ಭೂಮಿಯಲ್ಲಿ 2 ರಿಂದ 3 ಇಂಚು ದಪ್ಪದ ಹೊದಿಕೆಯಾಗುವಂತೆ ಹರಡುತ್ತಾರೆ. ಮಳೆ ಆರಂಭವಾಗುವ ಒಂದು ತಿಂಗಳ ಮೊದಲೇ ಈ ಕೆಲಸ ಮಾಡಿ ಮುಗಿಸುತ್ತಾರೆ. ಮಳೆ ನೀರು ಈ ಸಿಪ್ಪೆಗಳ ಮೂಲಕ ಹರಿದು ಭೂಮಿಯನ್ನು ಸೇರಿ ಭೂಮಿಯಲ್ಲಿರುವ ತುಂಗೆ ಹುಲ್ಲಿನ ಬೇರಿನ ಗಂಟುಗಳನ್ನು ನಾಶ ಮಾಡುತ್ತದೆಂಬುದು ರೈತರ ಅಭಿಪ್ರಾಯ. ಈ ಪದ್ಧತಿಯಿಂದ ಭೂಮಿ 2-3 ವರ್ಷಗಳ ವರೆಗೆ ಈ ಹುಲ್ಲಿನ ಕಾಟದಿಂದ ಮುಕ್ತವಾಗಿರುವುದಂತೆ. ಭೂಮಿ ಉಳುಮೆ ಮಾಡುವಾಗ ಮಣ್ಣಿನಲ್ಲಿ ಬೆರೆತು ಕೊಳೆಯುವ ಈ ಹತ್ತಿಕಾಯಿಯ ಸಿಪ್ಪೆ, ಗಿಡಗಳಿಗೆ ಉತ್ತಮ ಸಾವಯುವ ಗೊಬ್ಬರವೂ ಆಗುತ್ತದೆ. ಹೀಗೆ ಕಳೆ ನಿಯಂತ್ರಣ ಜೊತೆಗೆ ಉತ್ತಮ ಗೊಬ್ಬರ ಎರಡು ರೀತಿಯ ಲಾಭ ; ಉಪಯೋಗ ವಿಲ್ಲವೆಂದು ಬಿಸಾಡುತ್ತಿದ್ದ ಸಿಪ್ಪೆಗಳಿಂದ.


ಮೂಲ: ಹನಿ ಬೀ, ಸಂ. 7(3), 1996

ಭತ್ತದ ಕೃಷಿಯಲ್ಲಿ ತಮಿಳುನಾಡಿನ ದೇಶೀಯ ಕೀಟ ಹತೋಟಿ ಕ್ರಮಗಳು

ಕಂದುಜಿಗಿ ಹುಳು (Brown Plant Hopper) ನಿಯಂತ್ರಣಕ್ಕೆ :

◆ ಕಣಗಲೆ *(Nerium indicum)* ಗಿಡದ ಬೀಜಗಳನ್ನು ಒಂದು ರಾತ್ರಿ ನೀರಿನಲ್ಲಿ ನೆನೆಸಿ, ಮರುದಿನ ಸೋಸಿ ಸಮ ಪ್ರಮಾಣದಲ್ಲಿ ನೀರನ್ನು ಬೆರೆಸಿ ಸಿಂಪಡಿಸಬೇಕು.

◆ ಲೋಳೆಸರ *(Aloe vera)* ದ ಲೋಳೆಯನ್ನು ದನದ ಗಂಜಲದೊಂದಿಗೆ ಬೆರೆಸಿ ಸಿಂಪಡಿಸಬೇಕು.



◆ ತಂಜಾವೂರಿನ ಜಿಲ್ಲೆಯಲ್ಲಿ ಅನೇಕ ರೈತರು ಎಕ್ಕ *(Calotropis gigantea)* ದ ಎಲೆಯನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಹರಡುವರು. ಇದರಿಂದ ಜಿಗಿ ಹುಳುವಿನ ಹತೋಟಿ ಸಾಧ್ಯ ಎಂಬುದು ಅವರ ಅನುಭವ.

◆ ಹತ್ತು ಕೆ.ಜಿ. ಭತ್ತದ ತೌಡಿಗೆ ಮೂರು ಲೀಟರ್ ಸೀಮೆ ಎಣ್ಣೆ ಬೆರೆಸಿ ಸಿಂಪಡಿಸಿದರೆ ಕಂದುಜಿಗಿ ಹುಳುವಿನ ಹತೋಟಿ ಸಾಧ್ಯ.

ಕಾಂಡ ಕೊರಕ *(Scirphophaga incestulas)* ನಿಯಂತ್ರಣಕ್ಕೆ

ಗೇರು ಮರದ ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಹರಡುವುದರಿಂದ ಕಾಂಡಕೊರಕದ ಹತೋಟಿ ಸಾಧ್ಯ.

ಸೆಣಬು *(Corchorus Capsularis)* ನ ಬೀಜವನ್ನು ಒಂದು ರಾತ್ರಿ ನೀರಿನಲ್ಲಿ ನೆನೆಸಿ ನೀರಿನೊಂದಿಗೆ ಸಮಪ್ರಮಾಣದಲ್ಲಿ ಬೆರೆಸಿ ಸಿಂಪಡಿಸಬೇಕು.

ತೆನೆ ತಿಗಣೆ ನಿಯಂತ್ರಣಕ್ಕೆ

✱ ಗ್ಲಿರಿಸೀಡಿಯ ಗೊಬ್ಬರದ ಗಿಡದ ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಹರಡುವುದರಿಂದ ತೆನೆ ತಿಗಣೆ ಹತೋಟಿ ಸಾಧ್ಯ.

ಸೈನಿಕ ಹುಳು ನಿಯಂತ್ರಣಕ್ಕೆ

ಭತ್ತದ ಗದ್ದೆಯಲ್ಲಿ ಎಕ್ಕದ ಎಲೆಗಳನ್ನು ಹರಡುವುದರಿಂದ ಸೈನಿಕ ಹುಳುವಿನ ಹತೋಟಿ ಸಾಧ್ಯ.

✱ ರಾಂಚಿ ಜಿಲ್ಲೆಯ ಅನೇಕ ರೈತರು ಬೂದಿಯನ್ನು ಸೀಮೆ ಎಣ್ಣೆಯಲ್ಲಿ ಮಿಶ್ರಮಾಡಿ ನೀರಿನೊಂದಿಗೆ ಬೆರೆಸುತ್ತಾರೆ. ಇದರಿಂದ ಅನೇಕ ಹುಳುಗಳ ಹತೋಟಿ ಸಾಧ್ಯ ಎಂಬುದವರ ಅಭಿಪ್ರಾಯ.

ಏಡಿ ಕಾಟಕ್ಕೆ

✱ ಮುತ್ತುಗದ ಹೂಗಳನ್ನು ಏಡಿಯ ಬಿಲದ ಬಳಿ ಇರಿಸುವುದರಿಂದ ಉಪದ್ರವ ಕಡಿಮೆ.

✱ ಐದಾರು ಹುಣಿಸೆ ಹಣ್ಣಿನ ಬೀಜಗಳನ್ನು ಒಂದು ರಾತ್ರಿ ನೆನೆಸಿ ಮರುದಿನ ಏಡಿಯ ಬಿಲದ ಬಳಿ ಇರಿಸಿ ಫಲಿತಾಂಶ ನಮಗೆ ತಿಳಿಸಿ

ಮೂಲ: 'Traditional Pest Control' by V.Bhaskaran & Prof. P. Narayana swamy

ಅನುವಾದ: ಬಿ.ಎ.ಅನಿಲ್‌ಕೌಶಿಕ್

ಹಿತ್ತಲ ಗಿಡದ ಹಿಂದಿನ ಸಂಚಿಕೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಆಸಕ್ತರು ಬಿಡಿ ಪ್ರತಿಗೆ ರೂ.25/- ಎಲ್ಲಾ ಪ್ರತಿಗಳಿಗೆ ರೂ. 150/- ರಂತೆ ಹಣ ಪಾವತಿ ಮಾಡಿ ಪಡೆಯಬಹುದು.

ಅಂಚೆ ವೆಚ್ಚ ಪ್ರತ್ಯೇಕ

ರಾಗಿ ಮುದ್ದೆಗೆ ಕಾಳಿನ ಸಾರು ಬೇಕೆ ?

✱ ಅವರೆ, ಅಲಸಂದೆ, ಹುರುಳಿ, ಹೆಸರು ಇವುಗಳನ್ನು ಸಮ ಪ್ರಮಾಣದಲ್ಲಿ ರಾಗಿಯೊಂದಿಗೆ ಬೆರೆಸಿ ಶೇಖರಿಸಿದರೆ ಕೆಡದು. ಬೇಕಾದಾಗ ಜರಡಿ ಹಿಡಿದು ಪ್ರತ್ಯೇಕಿಸಬಹುದು. ಹೇಗಿದೆ ಕೋಲಾರದ ರೈತರ ಐಡಿಯಾ? ಧಾನ್ಯಗಳ ಶೇಖರಣೆಯಲ್ಲೂ ರಾಗಿ-ಕಾಳಿನ ನಂಟು ಬೆರೆಸಿದ್ದಾರೆ. ರಾಗಿ ಕಾಳನ್ನು ಹೊಟ್ಟಿನಿಂದ ಬೇರ್ಪಡಿಸುವುದು ರಗಳೆ ಕೆಲಸ. ಅದಕ್ಕೆ ಕೋಲಾರ ಜಿಲ್ಲೆಯ ರೈತರು ಚಂದ್ರಿಕೆಯನ್ನು ಜರಡಿಯ ಹಾಗೆ ಉಪಯೋಗಿಸುತ್ತಾರೆ. ರೇಷ್ಮೆ ಗೂಡನ್ನು ತೆಗೆದ ಮೇಲೆ ಉಳಿದ ರೇಷ್ಮೆ ಎಳೆಗಳು ಹೊಟ್ಟನ್ನು ಹಿಡಿದಿಟ್ಟುಕೊಳ್ಳುತ್ತವೆ. ಅಂದ ಹಾಗೆ ರಾಗಿಯ ಹೊಟ್ಟಿಗೆ ಗೆದ್ದಲಿನ ಕಾಟ ಕಡಿಮೆಯಂತೆ.

✱ ಈರುಳ್ಳಿ ಕಟಾವಿನ 15 ದಿನಗಳ ಮುನ್ನ ರೋಲರ್ ಹಾಯಿಸುವುದು ಕೋಲಾರದ ರೈತರು ಬಹು ಹಿಂದಿನಿಂದ ಮಾಡಿಕೊಂಡು ಬಂದ ಪದ್ಧತಿ. ಈಗ ಇದಕ್ಕೆ ವೈಜ್ಞಾನಿಕ ವಿವರಣೆ ಕೊಡಲಾಗಿದೆ. (ಹಿಂದು 06.11.97) ರೋಲರ್ ಹಾಯಿಸಿದಾಗ ಎಲೆಗಳು ಬಾಗಿ, ಗೆಡ್ಡೆಯಿಂದ ಎಲೆ ಆಹಾರ ತೆಗೆದುಕೊಳ್ಳುವುದು ನಿಲ್ಲುತ್ತದೆ. ಗುಣ ಮಟ್ಟ ಹೆಚ್ಚುತ್ತದೆ. ಕೀಟ ರೋಗಗಳ ಹಾವಳಿಯನ್ನೂ ನಿಯಂತ್ರಿಸಿದ ಹಾಗಾಗುತ್ತದೆ. ಕೊಯ್ಲಿನ ನಂತರ ಕಂಬಕ್ಕೆ ತೂಗಿ ಹಾಕಿ ಒಣಗಿಸುತ್ತಾರೆ.

✱ ಹೊಂಗೆ ಮತ್ತು ಬೇವಿನ ಎಣ್ಣೆಯನ್ನು ತೊಗರಿ ಮತ್ತು ಅವರೆ ಬೀಜಕ್ಕೆ ಲೇಪಿಸಿ ಶೇಖರಿಸಿದರೆ ಕೆಡದು ಎನ್ನುತ್ತಾರೆ ಕೋಲಾರದ ರೈತರು. ಕ್ವಿಂಟಾಲ್ ಬೀಜಕ್ಕೆ ಒಂದೂವರೆ ಕುಡುತೆ (300 ml.) ಸಾಕು.

ಸಂಗ್ರಹ : ವಾಸುದೇವ ಅಡಮಾರು

ನಾಟಿ ಬೇಸಾಯ ಕ್ರಮಗಳು

ಮಾವಿನ ಹೂ ಬೀಳುವುದು ತಡೆಗಟ್ಟಲು

ಮಾವಿನ ಮರದ ಹೂಗಳು ಗಾಳಿಯಿಂದ ಹಾಗೂ ಕೆಲವು ಕಾಯಿಲೆಗಳಿಂದ ಉದುರುವುದು ಸಾಮಾನ್ಯವಾದ ವಿಷಯ. ಈ ತೊಂದರೆಯನ್ನು ತಡೆಗಟ್ಟಲು ಉತ್ತರ ಗುಜರಾತಿನ ರೈತರು ಮಾವಿನ ಮರದ ಸುತ್ತಾ ಸಣ್ಣ ಗುಂಡಿಯನ್ನು ತೆಗೆಯುತ್ತಾರೆ. ಈ ಗುಂಡಿಯನ್ನು ಮಾವಿನ ಹೂ ಬಿಡುವ ಸಮಯದಲ್ಲಿ ಮರದಿಂದ ಒಂದು ಅಡಿಯಷ್ಟು ದೂರದಲ್ಲಿ ತೆಗೆಯಲಾಗುತ್ತದೆ. ಈ ಗುಂಡಿಗೆ *60-80* ಲೀ ನಷ್ಟು ಮಜ್ಜಿಗೆನೀರನ್ನು ಮತ್ತು *2* ಕೆ.ಜಿ.ಯಷ್ಟು ಉಪ್ಪನ್ನು ಬೆರೆಸಿ ಹಾಕುತ್ತಾರೆ. ಒಂದು ಗಂಟೆಯ ಬಳಿಕ ಮಜ್ಜಿಗೆ ಮಣ್ಣಲ್ಲಿ ಬೆರೆತನಂತರ ಆ ಗುಂಡಿಗೆ ನೀರನ್ನು ಬೆರೆಸಲಾಗುತ್ತದೆ. ಈ ಪ್ರಯೋಗವನ್ನು ಒಂದು ವಾರದ ನಂತರ ಮತ್ತೆ ಮಾಡಲಾಗುತ್ತದೆ. ಈ ರೀತಿ ಮಾಡುವುದರಿಂದ ಹೂ ಉದುರುವುದು ಕಮ್ಮಿಯಾಗಿ ಮಾವಿನ ಉತ್ಪತ್ತಿ ಹೆಚ್ಚುತ್ತದೆ ಎಂದು ರೈತರು ನಂಬುತ್ತಾರೆ.

(ರೈತರು ಮಜ್ಜಿಗೆಯನ್ನು ಇನ್ನೂ ಹಲವು ಬೆಳೆಗಳಿಗೆ ಉಪಯೋಗಿಸುತ್ತಾರೆ. ಅದರಲ್ಲೂ ಮೆಣಸು, ಮತ್ತು ತರಕಾರಿಗಳ ಉತ್ಪತ್ತಿ ಹೆಚ್ಚಿಸಲು ಮತ್ತು ರೋಗಗಳಿಂದ ರಕ್ಷಿಸಲು ಇದನ್ನು ಬಳಸುತ್ತಾರೆ.)

- ಠಾಕೂರ್ ಮಂಗಾಜಿ ದುದ್ದಾಜಿ, ಬಾನಸ್‌ಕಾಂತ, ಗುಜರಾತ್, ಮೂಲ: ಹನಿ ಬೀ, ಸಂ. 8 (2) 97

ಗೊಬ್ಬರದ ಬದಲು ಎಲೆಕಳ್ಳಿ

ಸಾಂಪ್ರದಾಯಕವಾಗಿ ರೈತರು ಪ್ರಾಣಿಗಳ ಸಗಣಿ ಮತ್ತು ಮೂತ್ರವನ್ನು ಗುಂಡಿಯಲ್ಲಿ ಹಾಕಿ ಅದನ್ನು ಕೊಳೆಯಲು ಬಿಟ್ಟು ಗೊಬ್ಬರ ಮಾಡಿ ಗಿಡಗಳಿಗೆ ಬಳಸುತ್ತಾರೆ. ಆದರೆ ಪಂಚಮಲ್‌ನ ಶ್ರೀ ಶಂಭೂಬಾಯಿಯವರು ಎಲೆಕಳ್ಳಿಯನ್ನು ಸಾವಯವ ಕೃಷಿಗಾಗಿ ಬಳಸುತ್ತಾರೆ. ಅವರು 10x10 ಅಡಿಯ ಗುಂಡಿಯನ್ನು ತೆಗೆದು ಅದರಲ್ಲಿ ಅಡಿಗೆ ಮನೆಯಲ್ಲಿ ಇರುವಂತಹ ಪ್ರಯೋಜನವಿಲ್ಲದ ಪದಾರ್ಥಗಳು, ಒಣ ಹುಲ್ಲು ಮತ್ತು ಎಲೆಗಳನ್ನು ಹಾಕಿ ತುಂಬಿಸುತ್ತಾರೆ. ಈ ಎಲ್ಲಾ ಪದಾರ್ಥಗನ್ನು 6 cm ನಷ್ಟು ಎತ್ತರಕ್ಕೆ ತುಂಬಿಸಿಡುತ್ತಾರೆ ಮತ್ತೆ ಸುಮಾರು 50-100 ಕೆ.ಜಿ.ಯಷ್ಟು ಎಲೆಕಳ್ಳಿ *(Euphorbia nerrifolia)* ಯ ಗಿಡಗಳನ್ನು ಒಂದು ಅಡಿಯಷ್ಟು ಉದ್ದಕ್ಕೆ ಕತ್ತರಿಸಿ ಆ ಗುಂಡಿಯಲ್ಲಿ ಜೋಡಿಸಲಾಗುತ್ತದೆ. ಇದರ ಮೇಲೆ ಸಗಣಿಯನ್ನು ಸವರಿ ಮಳೆಗಾಲದಲ್ಲಿ ಮಳೆ ನೀರನ್ನು ಈ ಗುಂಡಿಗೆ ಹರಿಯಲು ಬಿಡುತ್ತಾರೆ. ಮತ್ತೊಂದು ಪದರು ಒಣ ಹುಲ್ಲು, ಎಲೆಕಳ್ಳಿಯ ತುಂಡುಗಳು ಹಾಗೂ ಸಗಣಿಯನ್ನು ಗುಂಡಿಯಲ್ಲಿ ಹಾಕಲಾಗುತ್ತದೆ. ಒಂದು ವರ್ಷದ ನಂತರ ಈ ಗೊಬ್ಬರವು ಉಪಯೋಗಿಸಲು ಸಿದ್ಧವಾಗಿರುತ್ತದೆ. ಈ ಗೊಬ್ಬರವನ್ನು ಮುಖ್ಯವಾಗಿ ಜೋಳದ ಬೆಳೆಗೆ ಹಾಕುತ್ತಾರೆ.

ಶಂಭೂಬಾಯಿ ಮಲಬಾಯಿ ಮುಂದವದ, ಪಂಚಮಹಲ್ ಜಿಲ್ಲ
ಮೂಲ : ಹನಿ ಬೀ, ಸಂ. 8(2), 1997

ಸಾಸಿವೆ ಬೆಳೆಯಲು ಸೂಕ್ತ ಸಮಯ

ಮಳೆಗಾಲದಲ್ಲಿ ರಾಜಸ್ಥಾನದಲ್ಲಿ ಅಧಿಕವಾಗಿ ಬೆಳೆಯುವ ಬೆಳೆಯೆಂದರೆ ಸಾಸಿವೆ. ಈ ಬೆಳೆ ಬೆಳೆಯುವ ಪ್ರದೇಶವು ಕಳೆದ ಕೆಲವು ವರ್ಷಗಳಿಂದ ಅಧಿಕವಾಗಿ ವಿಸ್ತರಿಸಿದೆ. ಮಧ್ಯಾಹ್ನದ ಹೊತ್ತು ಇರುವೆಗಳು ತಮ್ಮ ಗೂಡಿನಿಂದ ಹೊರಗೆ ಹೋಗುವುದನ್ನು ಕಂಡರೆ ಆ ಸಮಯವೇ ಸಾಸಿವೆ ಗಿಡಗಳನ್ನು ನೆಡಲು ಅತಿ ಉತ್ತಮವಾದ ಸಮಯವೆಂದು ತಿಳಿಯಲಾಗುತ್ತದೆ. ಸಾಮಾನ್ಯವಾಗಿ ಸಾಸಿವೆಯನ್ನು ಅಕ್ಟೋಬರ್‌ನ ಮೊದಲನೆಯ ವಾರದಲ್ಲಿ ನೆಡಲಾಗುತ್ತದೆ. ರೈತರು ಮಧ್ಯಾಹ್ನದ ಹೊತ್ತು ಇರುವೆಗಳನ್ನು ಹೊರಗೆ ಕಂಡರೆ ಹವೆಯಲ್ಲಿ ಉಷ್ಣಾಂಶವು ಕಮ್ಮಿಯಾಗಿದೆ ಎಂದು ತಿಳಿಯುತ್ತಾರೆ. ಸಾಸಿವೆಯು ತಾಪ ಸೂಕ್ಷ್ಮ ಉಳ್ಳ ಬೆಳೆ.

ಚೌಧರಿ ರಾಮ್‌ಜತನ್ ಶ್ರಿಸುವಲಾಲ್ ತೆಹಸಿಲ್ ಸಾಮ್‌ಬಾರ್ ಲೇಕ್, ಜೈಪುರ್.
ಮೂಲ : ಹನಿ ಬೀ, ಸಂ. 7(1), 1996

ಶೀಘ್ರ ಬೇರು ಮೂಡಿಸಲು

ಎಲೆಕಳ್ಳಿಯ ಹಾಲನ್ನು ಕಾಂಡದ ಕಟಿಂಗ್‌ಗಳಿಗೆ ಲೇಪನ ಮಾಡಿದರೆ ಶೀಘ್ರ ಬೇರು ಮೂಡುತ್ತದೆ. ದಾಳಿಂಬೆ, ಸಪೋಟದಲ್ಲಿಯೂ ಕೂಡ ಈ ರೀತಿ ಮಾಡಬಹುದು, ಮರಳಿನಲ್ಲಿ ಸ್ವಲ್ಪ ಉಪ್ಪು ಮಿಶ್ರಮಾಡಿ ನಂತರ ಕಟಿಂಗ್‌ಗಳನ್ನು ನೆಡಬೇಕು ಎಂಬುದು ಸಂತೇಶಿವರದ ಬಿ. ಬಸವರಾಜ್‌ರವರ ಅನುಭವ

ಸಂಗ್ರಹ : ಬಿ.ಎ.ಅನಿಲ್‌ಕೌಶಿಕ್

ಗಿಡಗಳಿಗೂ ಸಾರಾಯಿ

ಸಾರಾಯಿ ತಯಾರಿಸುವಾಗ ಕೊನೆಗೆ ಉಳಿಯುವ ಕುಡಿತಕ್ಕೆ ಉಪಯೋಗವಿಲ್ಲದ ದ್ರಾವಣವೆಂದರೆ ಗಿಡಗಳಿಗೆ ಇಷ್ಟ ಎನ್ನುವುದು ಗುಜರಾತ್ ರಾಜ್ಯ ವೆಸಿಲಾ ಜಿಲ್ಲೆಯ ಜನರ ಅನುಭವ. ಅರಿಶಿಣ, ಸಿಹಿಗುಂಬಳ ಇವುಗಳಿಗೆ ಬೀಳುವ ಹುಳು ತಡೆಗಟ್ಟಲು ಈ ದ್ರಾವಣವನ್ನು ಗಿಡದ ಬುಡಕ್ಕೆ ಹಾಕುತ್ತಾರೆ. ಈ ದ್ರಾವಣವನ್ನು ಟೊಮೆಟೋ, ಮೆಣಸು, ಕೊತ್ತಂಬರಿ, ಮೆಂತೆ ಇತ್ಯಾದಿ ಸೊಪ್ಪಿನ ಗಿಡಗಳಿಗೆ ಹಾಕುವುದರಿಂದ ಗಿಡದ ಬೆಳವಣಿಗೆ ಉತ್ತಮಗೊಂಡು, ರೋಗ ನಿರೋಧಕ ಶಕ್ತಿ ಬರುವುದಂತೆ. ಈ ದ್ರಾವಣವನ್ನು ಬೀಜ ಬಿತ್ತನೆಗೆ ಮೊದಲು, ಅಥವಾ ಗಿಡ ಹುಟ್ಟಿದ ನಂತರ ಬಳಸಬಹುದೆಂಬುದು ಅಲ್ಲಿಯ ಜನರ ಅನುಭವ.

ಮೂಲ : ಹನಿ ಬೀ, ಸಂ. 7(3), 1996

ರಾಜಾಸ್ಥಾನದ ಭಿಲ್ಲ ಜನಾಂಗದ ಬೇಸಾಯ ಕ್ರಮಗಳು

ಅನುವಾದ: ಮೊ.ರಾ. ಕೃಪಾಶಂಕರ್, ಮೂಲ: ಹನಿ ಬೀ, ಸಂ. 7 (3), 1996

ಮಂಗಗಳಿಂದ ಪಾರು

ಮಹುವಾ ಅಥವಾ ಹಿಪ್ಪೆ *(Madhuca latifolia)* ಮರಗಳು ಹೂ ಬಿಡುವ ಕಾಲದಲ್ಲಿ ಮಂಗಗಳ ಕಾಟ ಹೆಚ್ಚು. ಅಪಾರ ಹಾನಿಯಂತೂ ತಪ್ಪಿದ್ದಲ್ಲ. ಇವುಗಳಿಂದ ಪಾರುಮಾಡಲು, ಮರದ ಎದೆಯ ಮಟ್ಟದ ಎತ್ತರದಲ್ಲಿ ಕಾಂಡಕ್ಕೆ ಜಾಲಿ ಮರದ ಮುಳ್ಳಿನ ಕೊಂಬೆಗಳನ್ನು ಕಟ್ಟಬೇಕು. ಸಾಮಾನ್ಯವಾಗಿ ಹೆಬ್ಬೆಟ್ಟಿನ ಗಾತ್ರದಷ್ಟು ದಪ್ಪವಿರುವ ಕೊಂಬೆ ಕಟ್ಟುತ್ತಾರೆ. ಇದು ಉದಯ್‌ಪುರ್ ಜಿಲ್ಲೆಯ ಸಾಲುಂಬರ್ ತಾಲ್ಲೂಕಿನ ಭಿಲ್ ಜನಾಂಗದವರು ಅನುಸರಿಸುವ ಕ್ರಮ.

ಕಾಡು ತಾಳೆ ಮರಗಳ ರಕ್ಷಣೆ

ಮಾನವನ ಸ್ವಾರ್ಥದ ಬಳಕೆಗೆ ಒಳಪಟ್ಟು, ವಿನಾಶದ ಅಂಚಿಗೆ ಹೋಗುತ್ತಿರುವ ಹಲವಾರು ಸಸ್ಯಗಳಲ್ಲಿ ಕಾಡುಜಾತಿಯ ತಾಳೇ ಮರವೂ *(Phoenix sylvestiris)* ಕೂಡ ಒಂದು. ಫೆಬ್ರವರಿ ಮತ್ತು ಜನವರಿ ತಿಂಗಳುಗಳಲ್ಲಿ, ಮರವಿನ್ನೂ ಚಿಕ್ಕದಾಗಿರುವಾಗಲೇ ಅದರ ಎಲೆಗಳನ್ನು ಕಿತ್ತು ದಿನಬಳಕೆ ವಸ್ತುಗಳನ್ನು ತಯಾರಿಸುವುದು, ಝುದೋಲ್ ತಾಲ್ಲೂಕಿನ ಜನಗಳ ರೂಢಿ. ಇದರ ಎಲೆಗಳಿಂದ ಅವರು ಪೊರಕೆ ಮತ್ತಿನ್ನಿತರ ವಸ್ತುಗಳನ್ನು ತಯಾರಿಸುತ್ತಾರೆ. ಆದರೆ ಇದರಿಂದ ಮರಕ್ಕೆ ಆಗುವ ಹಾನಿ ಅಪಾರ.

ಚಿಕ್ಕ ಮರಗಳ ಎಲೆಗಳನ್ನು ಉದ್ದವಾಗಿ ಮೇಲಿನಿಂದ ಸುಮಾರು ಎರಡನೇ ಮೂರರಷ್ಟು (2/3) ಭಾಗದಷ್ಟು ಸೀಳಬೇಕು. ಹೀಗೆ, ಎಲೆಗಳನ್ನು ಗಿಡದಲ್ಲಿ ಇರುವಂತೆಯೇ ಸೀಳುವುದರಿಂದ, ಮರಕ್ಕೆ ಯಾವುದೇ ಹಾನಿಯಾಗುವುದಿಲ್ಲ ಮತ್ತು ಆ ರೀತಿ ಮಾಡಿದ ಎಲೆಗಳು ಯಾವುದೇ ಉಪಯೋಗಕ್ಕೆ ಬರದಿರುವುದರಿಂದ ಜನಗಳು ಅದರ ತಂಟೆಗೆ ಬರುವುದಿಲ್ಲವಂತೆ.

ಪುಷ್ಪೀಕರಣ ಹಾಗೂ ಹಣ್ಣು ಮಾಗಿಸುವ ತಂತ್ರಜ್ಞಾನಗಳು

ಮಹುವಾ ಮರವನ್ನು ನಮ್ಮ ಇಚ್ಛೆಯಂತೆ ಬಹು ಬೇಗನೆ ಹಾಗೂ ಹೆಚ್ಚು ಪುಷ್ಪ ಹಾಗೂ ಫಲ ಭರಿತವಾಗುವಂತೆ ಮಾಡಬಹುದೇ ? ಹೌದು ಇದೊಂದು ನಮ್ಮ ಗ್ರಾಮೀಣ ತಂತ್ರಜ್ಞಾನ ಎನ್ನುತ್ತಾರೆ, ರಾಜಸ್ಥಾನದ ಉದಯಪುರ ಜಿಲ್ಲೆಯ ಝುರೋಲ್ ತಾಲ್ಲೂಕಿನ ಒಬ್ಬ ಉದಯೋನ್ಮುಖ ರೈತ ರೂಪ್‌ಲಾಲ್ ಭಿಲ್.

ಮರದ ಕಾಂಡದ ಎದೆಯ ಮಟ್ಟದ ಎತ್ತರದಲ್ಲಿ ಒಂದು ಪಟ್ಟಿಯ ರೀತಿಯಲ್ಲಿ ಕೊಡಲಿಯಿಂದ ಕೆತ್ತಬೇಕು. ಕೆತ್ತನೆ ಕೇವಲ ಸೆ.ಮೀ ಒಂದು ಇಂಚು ಆಳ ಇರುವಷ್ಟು ಮಾತ್ರ ಇರಬೇಕು. ಹೆಚ್ಚಾದರೆ ಮರಕ್ಕೆ ಅಪಾಯ. ಹೂವು ಮತ್ತು ಹಣ್ಣು ಬಿಡುವ ಕಾಲದಲ್ಲಿ ಈ ರೀತಿ ಮಾಡುವುದರಿಂದ, ಮರ ಅತೀ ಬೇಗ ಹೂವುಗಳನ್ನು ಬಿಡುವುದಷ್ಟೇ ಅಲ್ಲ, ಬಹಳಷ್ಟು ಹೂವು ಹಣ್ಣು ಬಿಡುವುದು. ಈ ವಿಧಾನಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಘಾಗರಿ ಎಂದು ಕರೆಯುತ್ತಾರೆ. ಈ ಕ್ರಿಯೆಯನ್ನು ಮುಂದಿನ ವರ್ಷಗಳಲ್ಲೂ ಮುಂದುವರಿಸಬಹುದು.

(ಹೀಗೆ ಕೆತ್ತುವುದರಿಂದ ಸಸ್ಯದ ಅಡುಗೆ ಮನೆಗಳಾದ ಎಲೆಗಳಲ್ಲಿ ತಯಾರಾದ ಸಸ್ಯ ಆಹಾರವು ಕಾಂಡದ ಮೂಲಕ ಸರಾಗವಾಗಿ ಬೇರಿನ ಜೀವಕೋಶಗಳಿಗೆ ಹೋಗಲು ಸ್ವಲ್ಪ ತಡೆಯುಂಟಾಗುತ್ತದೆ. ಇದರಿಂದ ಕೆತ್ತಿದ ಮೇಲ್ಭಾಗದಲ್ಲಿ ಹೆಚ್ಚು ಆಹಾರ ಶೇಖರವಾಗಿ ಮರವನ್ನು ಹೆಚ್ಚು ಫಲ ಪುಷ್ಪಭರಿತವಾಗಿ ಮಾಡುತ್ತದೆ ಎನ್ನುವುದು ಒಂದು ವೈಜ್ಞಾನಿಕ ಕಾರಣವಿರಬಹುದು)



ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ಯಾವುದೇ ಮಾಹಿತಿ, ತಂತ್ರಜ್ಞಾನ ಮತ್ತು ವಿಚಾರಗಳನ್ನು ವಾಣಿಜ್ಯ ದೃಷ್ಟಿಯಿಂದ ಉಪಯೋಗಿಸುವವರು, ಮೊದಲು ಅದನ್ನು ಹಿತ್ತಲಗಿಡದ ಮತ್ತು ಅದರ ಮೂಲ ವ್ಯಕ್ತಿಗಳು, ಸಮುದಾಯದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.
- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಬಳಸಬಯಸುವ ರೈತರು ಮೊದಲು ಅವನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

☛ ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

ಸಂಪಾದಕ

ವಿದೇಶಿ ಸಾವಯವ ಹೂ ಬೇಸಾಯ

ನ್ಯೂಜಿಲ್ಯಾಂಡಿನ ಹೂ ಬೆಳೆಗಾರ ಟೋನಿ ರಾಬಿನ್‌ಸನ್ ಸಾವಯವ ಮಾದರಿಯಲ್ಲಿ ಹೂ ಬೆಳೆಸಲು ಆರಂಭಿಸಿದ್ದಾರೆ. ಸೂಕ್ತವಾದ ಜೊತೆ ಬೆಳೆಗಳು ಸ್ವಾಭಾವಿಕ ಸಿಂಪರಣೆಗಳು ಇವುಗಳಿಂದಲೇ ಕಳೆ ಹಾಗೂ ಕೀಟದ ಹತೋಟಿ ಮಾಡುತ್ತಾರೆ. ಟೀ ಮಾಡಿ ಉಳಿದ ಸೊಪ್ಪು, ಹಾಗೂ ಇತರ ಕಳೆಗಳು ಇವನ್ನೆಲ್ಲಾ ಒಟ್ಟು ಮಾಡಿ ಚೆನ್ನಾಗಿ ಕೊಳೆಸಿ ಗೊಬ್ಬರ ಮಾಡುತ್ತಾರೆ. ನೆಲದ ಮೇಲೆ ಈ ಗೊಬ್ಬರವನ್ನು ಹರಡಿ ಅದರಲ್ಲೇ ಗಿಡ ನೆಡುತ್ತಾರೆ. ಗಿಡದ ಬುಡಕ್ಕೆ ಇನ್ನೊಂದು ಪದರ ಗೊಬ್ಬರ ಹಾಕುತ್ತಾರೆ. ಇವರ ತೋಟದಲ್ಲಿ ಎರೆಹುಳುಗಳು ಧಾರಾಳವಾಗಿವೆಯಂತೆ. ಹಾಗಾಗಿ, ಇವರಿಗೆ ಗಿಡಗಳ ನಡುವೆ ಮಧ್ಯಂತರ ಬೇಸಾಯ ಮಾಡುವ ಅಗತ್ಯವೇ ಇಲ್ಲ. ಆ ಕೆಲಸವನ್ನು ಎರೆಹುಳುಗಳೇ ನಿರ್ವಹಿಸುತ್ತವೆ. ಇವರ ತೋಟದಲ್ಲಿ ಕೀಟಗಳ ಹಾವಳಿ ಕಡಿಮೆ. ಹಾಗೆಂದು ಕೀಟಗಳೇ ಇಲ್ಲವೆಂದಲ್ಲ. ಹೇನು ಗಳ ಕಾಟ ಹೆಚ್ಚಂತೆ. ಈರುಳ್ಳಿ, ಬೆಳ್ಳುಳ್ಳಿ ಇವುಗಳಿಂದ ಮಾಡಿದ ಕಷಾಯವನ್ನು ಸಿಂಪಡಿಸಿ ಹೇನನ್ನು ಹತೋಟಿಯಲ್ಲಿಟ್ಟಿದ್ದಾರೆ. ಈ ಕಷಾಯಕ್ಕೂ ಬಗ್ಗದ ಹೇನುಗಳನ್ನು ಎಣ್ಣೆ ಸಿಂಪಡಿಸಿ ನಿಯಂತ್ರಿಸುತ್ತಾರಂತೆ.

ಸಂಗ್ರಹ: ತೇಜಸ್ವಿನಿ

ಹಿತ್ತಲಗಿಡಕ್ಕೆ ಮಾಹಿತಿ, ಸಲಹೆಗಳು

ಹಿತ್ತಲಗಿಡಕ್ಕೆ ಸೂಕ್ತ ಎನಿಸಿದ ಮಾಹಿತಿಗಳು, ವ್ಯಕ್ತಿಗಳು, ದೇಶೀಯ ಸಂಸ್ಥೆಗಳ ಬಗ್ಗೆ ಹಾಗೇ ಪತ್ರಿಕೆಯನ್ನು ಉತ್ತಮ ಪಡಿಸಲು ನಿಮ್ಮಿಂದ ಸಲಹೆಗಳು ಬೇಕಾಗಿದೆ. ಸೂಕ್ತ ಮಾಹಿತಿ, ಸಲಹೆಗಳಿಗೆ ಬೆಂಗಳೂರಿನ ಇಕ್ರಾ ಸಂಸ್ಥೆಯ ಸಾವಯವ ಕೃಷಿ ಬಗೆಗಿನ ಪುಸ್ತಕಗಳ ಬಹುಮಾನ ನೀಡಲಾಗುವುದು.

ಸಂ.

ಎಕರೆಗೆ 38 ಕ್ವಿಂಟಾಲ್ ಸಾವಯವ ಭತ್ತ

ಸಂತೇಶಿವರದ ಬಸವರಾಜು ಸಾಧನೆ

ಪ್ರತಿ ವರ್ಷ ಧೀರ್ಘಾವದಿ ಬೆಳೆಯಾದ ಮಂಡ್ಯ ವಿಜಯ ಭತ್ತವನ್ನು ಸಾವಯ ಪದ್ಧತಿಯಲ್ಲಿ ಎಕರೆಗೆ 36-38 ಕ್ವಿಂಟಾಲ್ ಬೆಳೆಯುತ್ತಿರುವೆ. ಅದಕ್ಕೆ ಪ್ರತಿ ವರ್ಷ ಮೇ ತಿಂಗಳಲ್ಲಿ ದ್ವಿದಳ ಧಾನ್ಯಗಳ ಬೆಳೆಗಳಾದ ಹೆಸರು, ಉದ್ದು, ಅಲಸಂದೆಗಳಲ್ಲಿ ಯಾವುದಾದರೊಂದು ಬಿತ್ತನೆ ಮಾಡಿ, ಬೆಳೆ ಬಂದಾಗ ಕಾಯಿ ಬಿಡಿಸಿ ಗಿಡವನ್ನು ಭೂಮಿಗೆ ಸೇರಿಸುವೆ.

ಜುಲೈ ಮೊದಲ ವಾರ ಮಂಡ್ಯ ವಿಜಯ ಭತ್ತವನ್ನು ಮೊಳಕೆ ಕಟ್ಟುವೆ. ಅಂದರೆ 24 ಕೆ.ಜಿ. ಬೀಜವನ್ನು ಅರ್ಧ ಗಂಟೆ ಬಿಸಿಲಿನಲ್ಲಿ ಒಣಗಿಸಿ ನಂತರ ಮೂರು ಗಂಟೆಗಳ ಕಾಲ ನೆರಳಿನಲ್ಲಿ ಹರಡಿ ಬಿಡುವೆ. ಇದರಲ್ಲಿರುವ ಜೊಳ್ಳು ತೆಗೆದು 24 ಗಂಟೆ ನೆನೆ ಹಾಕುವೆ. ನಂತರ ಬಸಿದು ಅದರೊಡನೆ ಸಣ್ಣದಾಗಿ ಕತ್ತರಿಸಿದ ಮೂರು ಕೆ.ಜಿ. ಬೇವಿನ ಸೊಪ್ಪನ್ನು ಮಿಶ್ರಮಾಡಿ ಚೀಲಕ್ಕೆ ಹಾಕಿ ಬಿಗಿಯಾಗಿ ಕಟ್ಟಿ ಭಾರವಾದ ವಸ್ತುಗಳನ್ನು ಹೇರಿ ಶಾಖ ಬರುವ ರೀತಿಯಲ್ಲಿ ಜೋಪಾನ ಮಾಡುವೆ. 6 ಗಂಟೆಗಳಾದ ಮೇಲೆ ಭತ್ತದ ಚೀಲವನ್ನು ಹೊರ ತೆಗೆದು ಬಿಸಿ ನೀರಿನಿಂದ ನೆನೆಸಿ ಮತ್ತೆ ಅದೇ ಸ್ಥಳದಲ್ಲಿ ಭದ್ರಪಡಿಸುವೆ. 12 ಗಂಟೆಗಳಾದ ಮೇಲೆ ಹೊರತೆಗೆದು ಭತ್ತದ ಚೀಲವನ್ನು ತಣ್ಣೀರಿನಲ್ಲಿ 10 ನಿಮಿಷ ಮುಳುಗಿಸಿ ನೆನೆಸಿ ಹೊರತೆಗೆದು ಮತ್ತೆ 6 ಗಂಟೆಗಳಾದ ನಂತರ ಅದೇ ರೀತಿ ತಣ್ಣೀರಿನಲ್ಲಿ 10 ನಿಮಿಷ ನೆನೆಸಿ ನಂತರ ಮೊದಲ ರೀತಿ ಬಾರವಾದ ವಸ್ತುಗಳನ್ನು ಹೇರಿ ಕಾವು ಬರುವ ರೀತಿ ಮಾಡುವೆ. 48 ಗಂಟೆಗಳಲ್ಲಿ ಮೊಳಕೆ ಬರುವುವು. ಈ ಮೊಳಕೆಗಳನ್ನು ಸಿದ್ಧಗೊಳಿಸಿದ ವಟ್ಟಲು ಪಾತಿಯಲ್ಲಿ ಬಿತ್ತನೆ ಮಾಡುವೆ. 10-12 ದಿನಗಳಾದ ನಂತರ ಮೇಲು ಗೊಬ್ಬರವಾಗಿ (2 ಕೆ.ಜಿ. ಕಡಲೆಕಾಯಿ ಹಿಂಡಿ ನೆನೆಯುವಷ್ಟು ಗಂಜಲ ಈ ಮಿಶ್ರಣ ಹುಡಿಯಾಗುವಷ್ಟು ಬೂದಿ ಬೆರೆಸಿ ಪಾತಿಗಳಿಗೆ ಕೊಡುವೆ. 15 ದಿನಗಳಾದ ನಂತರ ರಾತ್ರಿ ವೇಳೆ ಅರ್ಧ ಗಂಟೆಗಳ ಕಾಲ ವಟ್ಟಲ ಹತ್ತಿರ ಬೆಂಕಿ ಉರಿಸುವೆ. ಈ ಬೆಂಕಿಯ ಬೆಳಕಿಗೆ ಬಿಳಿ ಚಿಟ್ಟೆ ಆಕರ್ಷಣೆ ಹೊಂದಿ ಅದರಲ್ಲಿ ಬಿದ್ದು ನಾಶವಾಗುತ್ತವೆ. ಈ ರೀತಿ ದಿನ ಮಾಡುವೆ. ನಾಟಿ ಮಾಡುವ ಮುನ್ನ ಕೀಟನಾಶಕವಾಗಿ ಹಿಪ್ಪೇ ಹೂವಿನ ಕಷಾಯ ಸಿಂಪಡಿಸುವೆ. ಒಂದು ದಿನದ ನಂತರ ನಾಟಿ ಮಾಡಿಸುವೆ. ನಾಟಿಯಾದ 10 ದಿನಗಳ ನಂತರ ಪೈರಿನ ಮೇಲೆ ಇಬ್ಬನಿ ನೀರು ಇರುವಾಗಲೇ ಎಕರೆಗೆ 50 ಕೆ.ಜಿ. ಬೇವಿನ ಹಿಂಡಿ ಎರಚಿ ಕಳೆ ಕೀಳಿಸುತ್ತೇನೆ. 25ನೇ ದಿನವೂ ಕೂಡ ಕಳೆ ಕೀಳಿಸುವೆ. ನಂತರ ಈ ಬೆಳೆಯಲ್ಲಿ ಯಾವ ರೀತಿಯ ಕೀಟಗಳೂ ಕಂಡು ಬರುವುದಿಲ್ಲ. ಬೆಂಕಿ ರೋಗವಂತೂ ಕಂಡೇ ಇಲ್ಲ.

ಭತ್ತ ದುಂಡಾಡುವ ಮುನ್ನ ಒಂದು ಗುಂಟೆಗೆ ಒಂದು ಜೇಡರ ಹುಳವನ್ನು ಬಿಡುವೆ. ಭತ್ತದ ತೆನೆ ಹೊರ ಬರುವ ವೇಳೆಗೆ ಗದ್ದೆ ತುಂಬಾ ಬಲೆ ಹರಡಿ ಈ ಭತ್ತದ ತನೆಗೆ ಬರುವ ತೆನೆ ತಿಗಣೆ ತಿನ್ನುತ್ತವೆ.

ಭತ್ತದ ತೆನೆಯಲ್ಲಿ ಜೊಳ್ಳು ಬರುವುದಿಲ್ಲ. ಅಕ್ಕಿ ರುಚಿಯಾಗಿರುತ್ತದೆ. ಈ ಅಕ್ಕಿಯನ್ನು ಹೆಚ್ಚು ಬೇಯಿಸಿದರೂ ಅನ್ನ ಮೊಸರಿನಂತಾಗುವುದಿಲ್ಲ. ಈ ಕ್ರಮದಿಂದ ಬೆಳೆ ಬೆಳೆದರೆ ಆಹಾರದಲ್ಲಿ ವಿಷ ಸೇರುವುದಿಲ್ಲ. ಪೋಷಕಾಂಶಗಳು ಹೆಚ್ಚು ಕಂಡು ಬರುತ್ತದೆ. ಅನ್ನ ಊಟಮಾಡಿದರೆ ಮುದ್ದೆ ಊಟ ಮಾಡಿದಷ್ಟು ತೃಪ್ತಿಸಿಗುತ್ತದೆ.

ಬಿ. ಬಸವರಾಜು ಸಂತೇಶಿವರ, ಹಾಸನ ಜಿಲ್ಲೆ

ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಔಷಧಿ ಕ್ರಮಗಳು

ಉತ್ತರ ಕನ್ನಡದ ಸಿರಸಿ, ಯಲ್ಲಾಪುರ, ಹೊನ್ನಾವರ, ಅಂಕೋಲ ಮೊದಲಾದೆಡೆ ಬದುಕುತ್ತಿರುವ ಹಾಲಕ್ಕಿ ಒಕ್ಕಲಿಗರು ನಾಟೀ ವೈದ್ಯಕೀಯಕ್ಕೆ ಹೆಸರುವಾಸಿಯಾದ ಬುಡಕಟ್ಟು ಜನಾಂಗ. ಇವರ ಔಷಧಿ ಜ್ಞಾನ, ಬಳಸುವ ವಿವಿಧ ಗಿಡ ಮೂಲಿಕೆಗಳ ವಿವರವನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಸಹಾಯಕ ಇಂಜಿನಿಯರ್ ಥಾಕು ಸುಕ್ರ ಗೌಡರು ಬಹಳ ಪರಿಶ್ರಮದಿಂದ ಸಂಗ್ರಹಿಸಿದ್ದು, ಅದನ್ನು ಶ್ರೀ ಅ.ನ. ಯಲ್ಲಪ್ಪ ರೆಡ್ಡಿಯವರ ನೇತೃತ್ವದ ನೈಸರ್ಗಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆ ಪ್ರಕಟಿಸಿರುತ್ತದೆ.

ಜಾನುವಾರುಗಳ ಹಲಗೆ ರೋಗಕ್ಕೆ ಅಕ್ಷತೆ ಬಳ್ಳಿ ಮತ್ತು ಆಪತ್ಯದ ಮರ

✵ **ಕುಂಟು ಹಲಗೆ:** ಪ್ರಾರಂಭದಲ್ಲಿ ಹಿಂದಿನ ಎರಡು ಕಾಲುಗಳನ್ನು ಕುಂಟುತ್ತವೆ. ನಂತರ ಒಂದೆರಡು ದಿನಗಳಲ್ಲಿ ಮುಂದಿನ ಇನ್ನೆರಡು ಕಾಲುಗಳು ಕುಂಟಾಗಿ ಎಳೆದುಕೊಂಡು ಹೋಗುತ್ತವೆ. ಜ್ವರ ಬಂದು ಶರೀರ ದುರ್ಬಲವಾಗಿ, ಹುಲ್ಲು ನೀರು ಮುಟ್ಟುವುದಿಲ್ಲ.

✵ ಒಣ ಹಲಗೆ : ಬಾಯಿ ಪೂರ್ತಿ ಒಣಗಿ ಹೋಗಿ ಎಂಜಲು ಸಹ ಇರುವುದಿಲ್ಲ. ಮಲಬದ್ಧತೆಯಿಂದ ಮಲಗಟ್ಟಿಯಾಗಿ ಪ್ರಯಾಸದಿಂದ ತಿಣುಕುವುವು.

✵ ನೀರು ಹಲಗೆ : ಬಾಯಲ್ಲಿ ನೀರು ಅಂದರೆ ಜೊಲ್ಲು ಸುರಿಸುತ್ತವೆ. ಮೇವನ್ನು ತಿನ್ನುವುದಿಲ್ಲ. ತೆಳ್ಳಗಿನ ಅತಿಸಾರ, ಮಳೆಗಾಲದ ಪ್ರಾರಂಭದಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುವುದು. ಮೈಮೇಲೆ ಕೈಯಿಟ್ಟರೆ, ಮೈ ಹಾಗೂ ಬಾಲ ಅಲುಗಾಡಿಸುವುದಿಲ್ಲ.

ಹಸೀ ಹುಲ್ಲನ್ನೂ, ತಣ್ಣೀರನ್ನೂ ಹಾಕಬಾರದು. ಅಕ್ಷತೆ ಬಳ್ಳಿ *(Bridelia scandens)* ಕಾಂಡದ ತೊಗಟೆ ಐದು ತೊಲೆ, ಹಲಗೆ ಬಳ್ಳಿ, *(Elaegnus comferta)* ಕಾಂಡದ ತೊಗಟೆ ಐದು ತೊಲೆ, ಎರಡನ್ನೂ ಮಿಶ್ರ ಮಾಡಿ, ಒರಳಿನಲ್ಲಿ ಹಾಕಿ ಜಜ್ಜಿ, ಅರ್ಧಸೇರು ಅಕ್ಕಚ್ಚಿನಲ್ಲಿ (ಅಕ್ಕಿ ತೊಳೆದ ನೀರು) ಹಾಕಿ, ಕದಡಿ, ಸೋಸಿ, ಚರಟವನ್ನು ತೆಗೆದು, ಪೂರ್ತಿ ರಸವನ್ನು ಒಂದು ನಳಗದಲ್ಲಿ ಹಾಕಿ ದನಗಳ ಬಾಯಿ ತೆರೆದು ಕುಡಿಸಬೇಕು. ಒಂದೇ ಸಾರಿ ಕುಡಿಸಿದರೆ ಸಾಕು ಗುಣವಾಗುತ್ತದೆ.

✵. ಇದೇ ರೀತಿ ಕುಂಟು ಹಲಗೆಯ ರೋಗದ ಲಕ್ಷಣ ಅರಿತು, ಆಪತ್ಯದ ಮರ *(Anthocephalus cadamba)* ದ ತೊಗಟೆಯನ್ನು ಎರಡು ನೂರು ಗ್ರಾಂ ಅಕ್ಕಿ ತೊಳೆದ ನೀರಿನಲ್ಲಿ ಅರೆದು, ಅದನ್ನು ಅರ್ಧ ಲೀಟರ್ ನೀರಿನಲ್ಲಿ ಬೆರೆಸಿ, ಒಂದು ನಳಗದಲ್ಲಿ ಹಾಕಿ ದನಗಳಿಗೆ ಬಾಯಿ ತೆರೆದು ಕುಡಿಸಬೇಕು. ಬೆಳಿಗ್ಗೆ ಒಂದೇ ಸಾರಿ, ಮೂರು ದಿವಸ ತಪ್ಪದೇ ಮಾಡಬೇಕು.

ದನಗಳ ಚಂಡು ಮುರುಕ ರೋಗಕ್ಕೆ ಅಮೃತಬಳ್ಳಿ

✵ ಈ ರೋಗದಿಂದ ದನಗಳು ಪೂರ್ತಿ ಕುತ್ತಿಗೆಯನ್ನು ಎಡಬದಿಗೆ ತಿರುಗಿಸಿ ಕೊಂಡಿರುತ್ತದೆ. ಎಷ್ಟೇ ಬಲವಾಗಿ ಎಳೆದು ನೆಟ್ಟಗೆ ಮಾಡಿದರೂ ತಕ್ಷಣ ಎಡಬದಿಗೆ ತಿರುಗಿಕೊಳ್ಳುತ್ತದೆ. ದನಗಳು ಸುತ್ತಿ ಸುತ್ತಿ ತಿರುಗಿ ಬಿದ್ದು ಒದ್ದಾಡುತ್ತವೆ. ಶರೀರ ಪೂರ್ತಿ ತಣ್ಣಗಾಗುವುದು. ನೀರು ಮೇವು ತಿನ್ನದೇ ಇರುವುದು. ದನಗಳು ಬದುಕುಳಿಯುವ ಸಾಧ್ಯತೆ ತೀರಾ ಕಮ್ಮಿ. ಸಾಮಾನ್ಯವಾಗಿ ರೋಗ ಕಂಡ ನಾಲ್ಕೈದು ದಿನಗಳಲ್ಲಿ ಸಾವನ್ನಪ್ಪುತ್ತವೆ. ನಾಲ್ಕು ತೊಲೆ ಅಮೃತ ಬಳ್ಳಿ *(Tinospora cordifolica)* ಕಾಂಡ ಜಜ್ಜಿ, ರಸ ಹಿಂಡಿ, ಐದು ಚಮಚ ರಸ ದನಗಳಿಗೆ ದಿನಕ್ಕೆರಡು ಸಾರಿ ಎರಡು ದಿವಸ ಕುಡಿಸಿದರೆ ಗುಣವಾಗುತ್ತದೆ. ಔಷಧ ಕೊಟ್ಟು ಒಂದು ಘಂಟೆಯ ನಂತರ, ಒಣಹುಲ್ಲು, ಕಾದಾರಿದ ನೀರನ್ನು ಕೊಡಬೇಕು. ಕಾಯಿಲೆ ಬಾರದೇ ಇರುವ ದನಗಳಿಗೂ ಇದನ್ನು ಕೊಡುವುದರಿಂದ ಈ ರೋಗ ಕಾಣಿಸಿಕೊಳ್ಳುವ ಸಾಧ್ಯತೆ ಕಡಿಮೆ.

ಚವಿ ರೋಗಕ್ಕೆ ಆರತಿ ಕುಂಡಿಗೆ

ಈ ರೋಗದಿಂದ ಎಮ್ಮೆ ಅಥವಾ ಆಕಳು ನಿಗದಿತ ವೇಳೆಗೆ ಮೊದಲು ಕರು ಹಾಕುತ್ತವೆ. ಇಲ್ಲದಿದ್ದರೆ ಕರುಗಳ ಕಾಲಿನ ತುದಿಯಲ್ಲಿ, ಕಿವಿಯ ಅಂಚಿನಲ್ಲಿ ಹಾಗೂ ಬಾಲದ ತುದಿಯಲ್ಲಿ ಕೂದಲು ಉದುರುತ್ತದೆ. ಕರುವಿನ ಹೊಟ್ಟೆ ಉಬ್ಬರಿಸಿ ದೇಹದಲ್ಲಿ ದುರ್ಬಲವಾಗಿ ಕ್ರಮೇಣ ಸಾಯುತ್ತವೆ. ಇದರಿಂದ ಹಾಲು ಸಹ ತೆಳ್ಳಗಾಗಿ ಅರಸಿನ ಬಣ್ಣವಾಗುತ್ತದೆ. ಇದಕ್ಕೆ ಆರತಿಕುಂಡಿಗೆ *(Costus specious)* ಗಡ್ಡೆ, ಮರಬಾಳೇ ಕಾಯಿ, ಹಾಗೂ ಮರದ ಮೇಲಿರುವ ಬಂದಳಿಕೆ ಎಲೆ ಇವು ಮೂರನ್ನೂ ನೂರು ಗ್ರಾಂ ನಂತೆ, ಒಂದು ಸೇರು ಅಕ್ಕಿ ತೊಳೆದ ನೀರಿನಲ್ಲಿ ಅರೆದು ಸೋಸಿ, ಒಂದು ಬಾಟಲಿಯಲ್ಲಿ ಹಾಕಿ ಕುಡಿಯಬೇಕು. ದಿನಾಲು ಬೆಳಿಗ್ಗೆ ಒಂದೇ ಬಾರಿ. ಇದೇ ರೀತಿ ಮೂರು ರವಿವಾರ ತಪ್ಪದೇ ಕುಡಿಸಬೇಕು.

ದನಗಳ ಹಲ್ಲು ಅಲುಗಾಡಿದರೆ ಈಶ್ವರೀ ಬಳ್ಳಿ

ಹಲ್ಲಿನ ಬುಡದಲ್ಲಿ ನರಗಳ ದುರ್ಬಲತೆಯಿಂದ ದನಗಳ ಹಲ್ಲು ಅಲುಗಾಡುವುವು. ಇದರಿಂದ ನೋವಾಗಿ, ಹುಲ್ಲು ತಿನ್ನಲು ಆಗುವುದಿಲ್ಲ. ಹುಲ್ಲನ್ನು ತಿನ್ನಲಾರದೇ ಹಾಗೆಯೇ ಸಿಂಬೆ ಸಿಂಬೆ ಮಾಡುತ್ತವೆ. ಈಶ್ವರೀ ಬಳ್ಳಿ *(Avistolochia indica)* ಬೇರನ್ನು ಲಿಂಬೇರಸದಲ್ಲಿ ಇಲ್ಲವೇ ಹುಳಿಕಂಚೀ ಕಾಯಿಯ ರಸದಲ್ಲಿ ತೇಯ್ದು, ಗಂಧಮಾಡಿ ಐದು ಚಮಚ, ಬಾಯಿ ತೆರದು ನೆಕ್ಕಿಸಬೇಕು. ದಿನಕ್ಕೆರಡು ಸಾರಿ, ಐದು ದಿವಸ ಮಾಡಿದರೆ ಹಲ್ಲು ಬುಡದಲ್ಲಿ ಗಟ್ಟಿಯಾಗಿ ಆರಾಮವಾಗುತ್ತದೆ.

ಮೂಲ: ಕರ್ನಾಟಕ ಔಷಧಿ ಸಸ್ಯಗಳ ಪರಂಪರೆ 1'

ತಗ್ಗು ಭೂಮಿಯ ನಾಡ ಭತ್ತದ ತಳಿಗಳು ಒಂದು ಸಂಶೋಧನೆ

ಲತ ಜೆ., ಡಾ. ಎಚ್.ಇ.ಶಶಿಧರ, ತಳಿ ಅಭಿವೃದ್ಧಿ ಮತ್ತು ಅನುವಂಶೀಯ ವಿಭಾಗ, ಜಿ.ಕೆ.ವಿ.ಕೆ. ಬೆಂಗಳೂರು - 560 065

ಭತ್ತ ಬೆಳೆಯುವ ಮೂಲ ಸ್ಥಳಗಳನ್ನು ಮುಖ್ಯವಾಗಿ ಐದು ಪಂಗಡಗಳಾಗಿ ವಿಂಗಡಿಸಲಾಗಿದೆ. ಅವು ಯಾವುದೆಂದರೆ, ನೀರಾವರಿ, ಮಳೆ ಆಶ್ರಿತ ತಗ್ಗುಭೂಮಿ, ಎತ್ತರ ಭೂಮಿ, ಆಳ ನೀರು ಮತ್ತು ಸಮುದ್ರ ತೀರವಲಯ. ಭತ್ತ ಬೆಳೆಯುವ ಒಟ್ಟು ಹೆಕ್ಟೇರು ಪ್ರದೇಶದಲ್ಲಿ ಶೇಕಡಾ 45 ರಷ್ಟು ನೀರಾವರಿಯಾಗಿದ್ದು, ಶೇಕಡಾ 33 ರಷ್ಟನ್ನು ಇತರ ರೀತಿಯಲ್ಲಿ ಬೆಳೆಯತ್ತಾರೆ.

ಮಳೆ ಆಶ್ರಿತ ತಗ್ಗು ಪ್ರದೇಶಗಳಲ್ಲಿ ಬೆಳೆಯುವ ಭತ್ತವು, ಪರಿಸರದ ವಿಚಾರದಲ್ಲಿ ಅಂದರೆ ಮಳೆ, ನೀರಿನ ಆಳ, ಪ್ರವಾಹ, ಮಣ್ಣಿನ ವಿಧ ಮತ್ತು ಸ್ಥಳ ವರ್ಣನೆಗಳಲ್ಲಿ ಹೆಚ್ಚು ವೈವಿಧ್ಯಮಯ ವಾಗಿದೆ. ಈ ಪರಿಸ್ಥಿತಿಯಲ್ಲಿ ರೈತರು ಖುಷ್ಕಿ ಪದ್ಧತಿಯನ್ನು ಅನುಸರಿಸುತ್ತಾರೆ ಹಾಗೂ ತಮ್ಮಲ್ಲಿಯೆ ಆದ ನಾಡತಳಿಗಳನ್ನು ಉಪಯೋಗಿಸುತ್ತಾರೆ. ನಾಡತಳಿಗಳಲ್ಲಿ ಅನುವಂಶೀಯ ವೈವಿಧ್ಯತೆಯು ಹೆಚ್ಚಾಗಿರುವುದರಿಂದ ಅವುಗಳಿಗೆ ವಿಶೇಷ ನಿರೋಧಕ ಶಕ್ತಿಯು ಬಳುವಳಿಯಾಗಿ ಬಂದಿದೆ. ಆದ್ದರಿಂದ ಇದು ತನಗೆ ಒಗ್ಗದ ಪರಿಸರದಲ್ಲೂ ಕೂಡ ಇಳುವರಿ ಕೊಡುತ್ತದೆ. ರೈತರ ಬೇಸಾಯ ಕ್ರಮ, ಅವರು ಉಪಯೋಗಿಸುವ ನಾಡತಳಿಗಳು ಮತ್ತು ಅದರ ಮುಖ್ಯ ಗುಣವಿಶೇಷಗಳನ್ನು ಅರಿತುಕೊಳ್ಳಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಒಂದು ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಬಿತ್ತುವ ಬೀಜವನ್ನು ಅನೇಕ ಬತ್ತ ಬೆಳೆಯುವ ಖುಷ್ಕಿ ಮಳೆ ಆಶ್ರಿತ ಪ್ರದೇಶಗಳಿಂದ ಶೇಖರಿಸಲಾಗಿತ್ತು.

ಸಸ್ಯ ಬೇರೂರುವ ರೀತಿಯನ್ನು ಪಿ.ವಿ.ಸಿ. ಪೈಪ್‌ಗಳನ್ನು ಬಳಸಿ ಅಧ್ಯಯನ ಮಾಡಲಾಯಿತು. ಅವುಗಳನ್ನು ಮಣ್ಣಿನಲ್ಲಿ ಗುಂಡಿ ತೋಡಿ ಅದರಲ್ಲಿ ಹೂತಿಟ್ಟು ತೇವಾಂಶದ ವ್ಯತ್ಯಾಸವನ್ನು ಹತೋಟಿಯಲ್ಲಿ ಇಡಲಾಗಿತ್ತು. ಈ ಪೈಪುಗಳಿಗೆ ಮಣ್ಣು ಮತ್ತು ಕೊಟ್ಟಿಗೆ ಗೊಬ್ಬರವನ್ನು ತುಂಬಿ ಬೀಜವನ್ನು ಬಿತ್ತನೆ ಮಾಡಿ ನಿಯಮಿತವಾಗಿ 72 ದಿನಗಳ ತನಕ ನೀರನ್ನು ಹಾಕಲಾಗುತ್ತಿತ್ತು. ಅದೇ ಕಾಲದಲ್ಲಿ ಮತ್ತೊಂದು ಗುಂಪನ್ನು 57ನೇ ದಿನದವರೆಗೂ ನೀರೆರೆದು ಅನಂತರ ಹದಿನೈದು ದಿನಗಳವರೆಗೂ ನೀರು ಹಾಕದೆ 72ನೆಯ ದಿನ ಕೊಯ್ಲು ಮಾಡಲಾಗಿತ್ತು. ನೀರುಹಾಕದೆ ಬೆಳೆಸುವುದರಿಂದ ನಾವು ಮಳೆ ಆಶ್ರಿತ ಪ್ರದೇಶದಲ್ಲಿ ಬೇರುಗಳ ಬೆಳವಣಿಗೆಯನ್ನು ಅರಿತುಕೊಳ್ಳಬಹುದು. ನೀರಿನಂಶದಲ್ಲಿ ಕಡಿತಮಾಡಿದ ಪ್ರಮಾಣವನ್ನು ದಾಖಲಿಸುವುದರಿಂದ ತೇವಾಂಶದ ಒತ್ತಡವನ್ನು ಕಂಡು ಹಿಡಿಯಬಹುದು.

ನೀರಾವರಿ ಪರಿಸರದಲ್ಲಿ ತುಮಕೂರಿನ ಮೂರು ತಳಿಗಳು (ನಂಜೇಗೌಡ ಪಾಳ್ಯ, ಲೋಕಲ್, ಹಲಗಿನಹಳ್ಳಿ ಲೋಕಲ್, ತುಮಕೂರು ಲೋಕಲ್) ಹಾಸನದ ಎರಡು ತಳಿಗಳು (ಸವಾಸಿಹಳ್ಳಿ ಲೋಕಲ್-1, ಸವಾಸಿಹಳ್ಳಿ ಲೋಕಲ್-3) ಮತ್ತು ಮಂಡ್ಯದ ಒಂದು ತಳಿ (ಸಾಗರ ಕಟ್ಟೆ ಲೋಕಲ್-1) ಉತ್ತಮ ಬೇರಿನ ಗುಣಗಳನ್ನು ವ್ಯಕ್ತಪಡಿಸಿತ್ತು. ಅದರೆ ತೇವಾಂಶ ಒತ್ತಡದಲ್ಲಿ ತುಮಕೂರಿನ ಒಂದೇ ಒಂದು ತಳಿ (ನಂಜೇಗೌಡ ಪಾಳ್ಯ ಲೋಕಲ್) ಉತ್ತಮ ಬೇರಿನ ಗುಣಗಳನ್ನು ಹೊಂದಿತ್ತು.

ಭತ್ತದ ಇಳುವರಿ ಬಗ್ಗೆ ಸಂಶೋಧನೆಗಾಗಿ ನಾಡತಳಿಗಳನ್ನು ರೈತರ ಭೂಮಿಯಲ್ಲೇ ಅವರ ಅಳವಡಿಸುವ ಒಣಪದ್ಧತಿ ಅಥವಾ ಪುಣಜಿ ಪದ್ಧತಿಯನ್ನು ಅನುಸರಿಸಿಯೇ ಬೆಳೆದೆವು.

ಸದ್ಯದ ಸಂಶೋಧನೆಯಿಂದ ಮಂಡ್ಯದ ಎರಡು ತಳಿಗಳಲ್ಲಿ ನಾಗಮಂಗಳ ಲೋಕಲ್, ಅತ್ತಿಕೆರೆ ಲೋಕಲ್, ಬೇರೆಲ್ಲ ತಳಿಗಳಿಗಿಂತ ಹೆಚ್ಚಿನ ಸಸಿಗಳ ಒಜಸ್ಸು ಕಂಡು ಬಂದಿತು. ಹಾಗೇ ಮಂಡ್ಯತಳಿಗಳನ್ನು ಹಾಸನ, ತುಮಕೂರು ಮತ್ತು ಶಿವಮೊಗ್ಗ ನಾಡತಳಿಗಳಿಗೆ ಹೋಲಿಸಿದಾಗ ಅವುಗಳು ಸಸಿ ಹಂತದಲ್ಲಿ ಚೆನ್ನಾಗಿ ನಾಟಿಕೊಳ್ಳುವ ಸಾಧ್ಯತೆ ಹೆಚ್ಚಾಗಿತ್ತು.

ಸಂಶೋಧನೆಯ ಫಲಿತಾಂಶ ಏನೆಂದರೆ ನಾಡತಳಿಗಳು ಮಳೆ ಆಶ್ರಿತ ತಗ್ಗುಭೂಮಿಯಲ್ಲಿ ಹೊಂದಿ ಕೊಳ್ಳುವ ಎಲ್ಲಾ ತರದ ಗುಣಗಳು ಹೊಂದಿರುವಂತಹವಾಗಿದ್ದು, ಇವುಗಳನ್ನು ಸಸ್ಯತಳಿ ಅಭಿವೃದ್ಧಿಗಾಗಿ ಉಪ ಯೋಗಿಸಿದಲ್ಲಿ ವಿವಿಧ ಪರಿಸರಕ್ಕೆ ಬೇಕಾದ ವಿಶೇಷ ತಳಿಗಳು, ಒಳ್ಳೆಯ ಬೇರು ಮತ್ತು ಹೆಚ್ಚಿನ ಒಜಸ್ಸು ಗುಣಗಳು ಮತ್ತು ಅದೇ ಪರಮಾವಧಿ ಅಧಿಕ ಇಳುವರಿ ನೀಡತಕ್ಕ ತಳಿಗಳನ್ನು ಪಡೆಯಬಹುದಾಗಿದೆ.

ಶ್ರದ್ಧಾಂಜಲಿ

ನಿಸರ್ಗ ಮತ್ತು ಮಾನವ ನಡುವಿನ ಸಂಬಂಧಗಳನ್ನು ಗಟ್ಟಿಮಾಡುವ ಚಳುವಳಿಗಳಲ್ಲಿ ಸಕ್ರಿಯವಾಗಿದ್ದ, ಮಾನವತಾವಾದಿ ಸಾಹಿತಿ ಶಿವರಾಮು ಕಾರಂತರ ನಿಧನಕ್ಕೆ ಹಿತ್ತಲ ಗಿಡ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಗಿರಿಜನರು ಮತ್ತು ಕಿರು ಅರಣ್ಯ ಉತ್ಪನ್ನಗಳು - ಒಂದು ಪಕ್ಷಿ ನೋಟ

ರವಿ ಹೆಗಡೆ, ಟಾಟಾ ಶಕ್ತಿ ಸಂಶೋಧನಾ ಸಂಸ್ಥೆ, ಬೆಂಗಳೂರು.

ಅರಣ್ಯದಲ್ಲಿ ಮರದ ದಿಮ್ಮಿಗಳ ಹೊರತಾಗಿ ಸಿಗುವ ಜೇನು, ಹಣ್ಣು ಹಂಪಲು, ಗೆಣಸು, ಹೂ ಮೊಗ್ಗುಗಳು, ಗಿಡ ಮೂಲಿಕೆಗಳೇ ಮುಂತಾದ ಪದಾರ್ಥಗಳನ್ನು ಕಿರು ಅರಣ್ಯ ಉತ್ಪನ್ನಗಳೆಂದು ಕರೆಯಲಾಗುತ್ತದೆ. ಈ ಉತ್ಪನ್ನಗಳು ಗಿರಿಜನರ, ಅರಣ್ಯವಾಸಿಗಳ ಮತ್ತು ಅರಣ್ಯದ ಅಂಚಿನಲ್ಲಿರುವ ಜನರ ದಿನ ನಿತ್ಯದ ಆಹಾರ, ವಸತಿ, ಆರೋಗ್ಯ ಮತ್ತು ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಜನರಿಂದ ಉಪಯೋಗಿಸಲ್ಪಡುವ ಎಲ್ಲಾ ಉತ್ಪನ್ನಗಳ ಹೊರತಾಗಿ ಸುಮಾರು 135 ದಶಲಕ್ಷ ಡಾಲರ್‌ಗಳ ಮೌಲ್ಯದ ಉತ್ಪನ್ನಗಳನ್ನು ಪ್ರತಿವರ್ಷ ಭಾರತ ರಫ್ತು ಮಾಡುತ್ತಿದೆ.

> ಇಂತಹ ಹಿರಿದಾದ ಮಹತ್ವ ಹೊಂದಿರುವ ಈ ಪದಾರ್ಥಗಳನ್ನು ಕಿರು ಅರಣ್ಯ ಉತ್ಪನ್ನಗಳೆಂದು ಕರೆಯ ಲಾಗುತ್ತಿರುವುದು ಒಂದು ಆಭಾಸವೆಂದೇ ಹೇಳಬಹುದು. ಅದಲ್ಲದೇ, ಕಿರು ಅರಣ್ಯ ಉತ್ಪನ್ನಗಳ ವಹಿವಾಟುಗಳನ್ನು ಸರಕಾರದ ಅನೌಪಚಾರಿಕ ಕ್ಷೇತ್ರದಲ್ಲಿ ಸೇರಿಸಿ ರುವುದರಿಂದ ಇವುಗಳಿಂದ ದೊರೆಯುವ ಆದಾಯ, ಉದ್ಯೋಗಾವಕಾಶಗಳು ಮತ್ತು ಇತರ ವಹಿವಾಟುಗಳ ಬಗ್ಗೆ ವಿವರವಾದ ದಾಖಲೆಗಳು ಸರ್ಕಾರದ ಅಂಕಿ ಅಂಶಗಳಲ್ಲಿ ಸಿಗುವುದಿಲ್ಲ.

ಈ ಎಲ್ಲ ಮಿತಿಗಳ ಮಧ್ಯೆಯೂ ಕಳೆದ ದಶಕದಲ್ಲಿ, ಇವುಗಳ ವಿಚಾರದಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಆಸಕ್ತಿ ಬೆಳೆದಿರುವುದು ತಿಳಿದು ಬರುತ್ತದೆ. ಇದಕ್ಕೆ ಕಾರಣಗಳೂ ಇವೆ. ಮೊದಲನೆಯದಾಗಿ, ನಿರಂತರವಾಗಿ ನಡೆಯುತ್ತಿರುವ ಅರಣ್ಯ ನಾಶದಿಂದ ಅನೇಕ ಉಪಯೋಗಿ ಸಸ್ಯಗಳು ನಶಿಸಿ ಹೋಗುತ್ತಿರಬಹುದೆಂದು ಶಂಕಿಸಲಾಗುತ್ತಿದೆ. ಎರಡನೆಯದಾಗಿ, ಅರಣ್ಯ ಮೂಲದ ಇಂತಹ ಸಸ್ಯವರ್ಗಗಳು ಆಧುನಿಕ ವೈದ್ಯ ವಿಜ್ಞಾನದಲ್ಲಿ ಉಪಯುಕ್ತವಾದ ಹಲವು ಔಷಧಿ ಅಂಶಗಳನ್ನು ಹೊಂದಿದ್ದು, ಅವುಗಳ ಬೆಳವಣಿಗೆ ಅಂತರರಾಷ್ಟ್ರೀಯ ಔಷಧಿ ವಿಜ್ಞಾನದ ಬೆಳವಣಿಗೆಗೆ ಸಹಕಾರಿಯಾಗಬಲ್ಲದೆಂದು ಭಾವಿಸಲಾಗಿದೆ. ಮೂರನೆಯದಾಗಿ, ಕಿರು ಅರಣ್ಯ ಉತ್ಪನ್ನಗಳ ವೈಜ್ಞಾನಿಕ ಸಂಗ್ರಹಣೆ, ಸುಧಾರಿತ ಸಂಸ್ಕರಣೆ ಮತ್ತು ಮಾರಾಟದಿಂದ ಗಿರಿಜನರ ಮತ್ತು ಇತರ ಸ್ಥಳೀಯ ಜನರ ಆರ್ಥಿಕ ಅಭಿವೃದ್ಧಿ ಸಾಧ್ಯ ಮತ್ತು ಈ ಮೂಲಕ ಜೀವ ವೈವಿಧ್ಯತೆಯ ಸಂರಕ್ಷಣೆಯಲ್ಲಿ ಪಾಲ್ಗೊಳ್ಳುವಂತೆ ಸ್ಥಳೀಯ ಜನರನ್ನು ಪ್ರೇರೇಪಿಸಲು ಸಾಧ್ಯ ಎಂಬ ಭಾವನೆಯೂ ಇದೆ. ಈ ಎಲ್ಲ ಕಾರಣಗಳಿಂದ ಕಿರು ಅರಣ್ಯ ಉತ್ಪನ್ನಗಳಲ್ಲಿ ಇಂದು ಕೇವಲ ಸ್ಥಳೀಯ ಜನರು ಮಾತ್ರವಲ್ಲದೇ, ವಿಜ್ಞಾನಿಗಳು, ಪರಿಸರ ಪ್ರೇಮಿಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಅಭಿವೃದ್ಧಿ ಇಲಾಖೆಗಳ ಆಸಕ್ತಿ ಬೆಳೆಯುತ್ತಿರುವುದು ಗಮನಾರ್ಹ. ಬಿಳಿಗಿರಿರಂಗನ ಬೆಟ್ಟದ ಸೋಲಿಗರು, ಬಂಡೀಪುರ ನೀಲಗಿರಿ ಪ್ರದೇಶದ ಜೇನು ಕುರುಬರು, ಬೆಟ್ಟ ಕುರುಬರು, ಇರುಳರು, ಫಣಿಯರು, ಕೊಂಕಣ ಪ್ರದೇಶದ ಗೌಳಿಗರು, ಸಿದ್ಧಿಗಳು ಮುಂತಾದ ಹಲವು ಜನಾಂಗಗಳು ಅರಣ್ಯ ಸಂಪನ್ಮೂಲಗಳ ಮಧ್ಯೆ ಸೌಹಾರ್ದದಿಂದ ಬದುಕುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಬದಲಾಗುತ್ತಿರುವ ಮತ್ತು ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಅನೇಕ ಗಿರಿಜನ ಜನಾಂಗಗಳು ಅರಣ್ಯೋತ್ಪತ್ತಿಗಳ ಮೇಲೆ ಅತಿಯಾಗಿಯೇ ಅವಲಂಬಿತವಾಗಿವೆ. ಉದಾಹರಣೆಗೆ, ಬಿಳಿಗಿರಿ ರಂಗನ ಬೆಟ್ಟದಲ್ಲಿ ಸೋಲಿಗರ ವಾರ್ಷಿಕ ಆದಾಯದ ಶೇಕಡಾ 48 ರಿಂದ 60 ರಷ್ಟು ಭಾಗ ಕೇವಲ ಕಿರು ಅರಣ್ಯ ಉತ್ಪನ್ನಗಳ ಮಾರಾಟದಿಂದ ಬರುತ್ತಿದೆ. ಮಧುಮಲೈ ವನ್ಯಧಾಮದ ಸುತ್ತ ಮುತ್ತ, ಗಿರಿಜನರು ತಮ್ಮ ಆದಾಯದ ಶೇ. 15 ರಿಂದ ಶೇ. 32 ರಷ್ಟು ಭಾಗವನ್ನು ಕಿರು ಅರಣ್ಯ ಉತ್ಪನ್ನಗಳ ಮಾರಾಟದಿಂದ ಗಳಿಸುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ಧಿ ಜನಾಂಗದ ವಾರ್ಷಿಕ ಆದಾಯದ ಶೇ.10 ರಿಂದ ಶೇ. 32 ರಷ್ಟು ಭಾಗವು ಕುಣಬಿ ಜನಾಂಗದ ವಾರ್ಷಿಕ ಆದಾಯದ ಶೇ.30 ರಿಂದ ಶೇ.43 ರಷ್ಟು ಭಾಗವು ಮತ್ತು ಕಿರು ಅರಣ್ಯ ಉತ್ಪನ್ನಗಳಿಂದ ಗಳಿಸಲ್ಪಡುತ್ತಿದೆ.

ಪ್ರಾರಂಭದಲ್ಲಿ ಗಿರಿಜನರಿಂದ ಸಂಗ್ರಹಿಸಲ್ಪಡುವ ಅರಣ್ಯೋತ್ಪನ್ನಗಳ ವ್ಯಾಪಾರ ಮಧ್ಯವರ್ತಿಗಳ ಮೂಲಕ ನಡೆಯುತ್ತಿದ್ದು, ಇತ್ತೀಚಿನ ಎರಡು ದಶಕಗಳಲ್ಲಿ ಅನೇಕ ಕಡೆಗಳಲ್ಲಿ ಸುಮಾರು 20 ದೊಡ್ಡ ಪ್ರಮಾಣದ ಗಿರಿಜನರ ವಿವಿದೋದ್ದೇಶ ಸಹಕಾರಿ ಸಂಘಗಳ ಮುಖಾಂತರ ನಡೆಯುತ್ತಿದೆ. ಕೆಲವು ಗಿರಿಜನರ ಪ್ರದೇಶಗಳಲ್ಲಿ ಇಂತಹ ಸಂಘಗಳ ಸ್ಥಾಪನೆ ಇನ್ನೂ ಆಗಬೇಕಾಗಿದೆ. ಈಗಾಗಲೇ ಸ್ಥಾಪಿಸಲ್ಪಟ್ಟ ಸಂಘಗಳಲ್ಲಿ ಅನೇಕ ಸಂಘಗಳು ನಿರಂತರವಾಗಿ ನಷ್ಟದಲ್ಲೇ ಮುಂದುವರಿದಿವೆ.

> ಅಲ್ಲದೇ ಸಂಗ್ರಹಕಾರ ಸದಸ್ಯರಿಂದ ಸಂಗ್ರಹಿಸಲ್ಪಟ್ಟ ಅರಣ್ಯ ಉತ್ಪನ್ನಗಳಿಗೆ ಸಂಘದಿಂದ ನೀಡುತ್ತಿರುವ ಮಾರಾಟ ಬೆಲೆ ತುಂಬಾ ಕಡಿಮೆ ಇದ್ದು, ಅನೇಕ ಪದಾರ್ಥಗಳಿಗೆ ಬಳಕೆದಾರರ ರೂಪಾಯಿಯಲ್ಲಿ ಸಂಗ್ರಹಕಾರರ ಪಾಲು ಪೈಸೆಗೂ ಕಡಿಮೆ ಇದೆ.

ಹಿತ್ತಲಗಿಡ ವ್ಯವಸ್ಥಿತಗೊಳ್ಳುತ್ತಿರುವುದು ??

ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಗಿರಿಜನರ ಜೀವನದ ಮತ್ತು ಸಂಸ್ಕೃತಿಯ ಒಂದು ಭಾಗವಾಗಿದೆ. ಪೂರ್ವದಲ್ಲಿ ತಮ್ಮ ಪಾರಂಪರಿಕ ಜ್ಞಾನವನ್ನು ಪ್ರಯೋಗಿಸಿ ಕೊಂಡು ತಮ್ಮದೇ ಆದ ಅನೇಕ ಹೆಚ್ಚೆಟ್ಟಿನ ನಿಮಯಗಳನ್ನು ಬಳಸಿ ಗಿರಿಜನರು ಅರಣ್ಯೋತ್ಪನ್ನಗಳ ನಿರ್ವಹಣೆಯಲ್ಲಿ ತೊಡಗಿದ್ದರೆಂಬುದು ತಿಳಿದು ಬಂದಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಗಿರಿಜನರಲ್ಲಿ ಅದರಲ್ಲೂ ಯುವ ಪೀಳಿಗೆಯಲ್ಲಿ ಪಾರಂಪರಿಕ ಜ್ಞಾನವೇ ನಶಿಸಿ ಹೋಗುತ್ತಿರುವುದು ಒಂದು ದುರದೃಷ್ಟವೇ ಸರಿ. ಗಿರಿಜನರ ಸ್ಥಳಾಂತರ ಮತ್ತು ಪುನರ್ವಸತಿ, ಬೆಳೆಯುತ್ತಿರುವ ಜನಸಂಖ್ಯೆ, ನಶಿಸಿ ಹೋಗುತ್ತಿರುವ ಅರಣ್ಯ ಸಂಪನ್ಮೂಲಗಳು, ಬಾಹ್ಯ ಜಗತ್ತಿನ ವ್ಯಾಪಾರೀ ಮನೋಭಾವದ ಒತ್ತಡ, ಮತ್ತು ಗಿರಿಜನರ ಆರ್ಥಿಕ ಹಾಗೂ ಸಾಮಾಜಿಕ ಪ್ರತ್ಯೇಕತೆ ಈ ಎಲ್ಲ ಕಾರಣಗಳಿಂದ ಗಿರಿಜನರಲ್ಲಿದ್ದ ಪುರಾತನ ಸಂಸ್ಕೃತಿ ಮತ್ತು ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಗಳು ಕುಸಿಯುತ್ತಿರಬಹುದೆಂದು ಶಂಕಿಸಲಾಗಿದೆ.

ಟಾಟಾ ಶಕ್ತಿ ಸಂಶೋಧನಾ ಸಂಸ್ಥೆ ಅಮೇರಿಕ ಸಂಯುಕ್ತ ಸಂಸ್ಥಾನದ ಮಸಾಚುಸೆಟ್ಸ್ ವಿಶ್ವವಿದ್ಯಾಲಯದ ಮತ್ತು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಸಹಯೋಗ ದೊಂದಿಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಯಾದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಆಶ್ರಯದ್ದಲ್ಲಿ ಸೋಲಿಗರ ಅಭಿವೃದ್ಧಿ ಮತ್ತು ಜೀವ ವೈವಿಧ್ಯತೆಯ ಸಂರಕ್ಷಣೆಯ ಬಗ್ಗೆ ಯೋಜನೆಯೊಂದರಲ್ಲಿ ಕಾರ್ಯನಿರತ ವಾಗಿದೆ. ಸೋಲಿಗರು ಅರಣ್ಯದಿಂದ ಸಂಗ್ರಹಿಸುವ ನೆಲ್ಲಿಕಾಯಿ, ಜೇನು, ಸೀಗೇಕಾಯಿ ಇತ್ಯಾದಿ ಪದಾರ್ಥಗಳನ್ನು ತಾವೇ ಸಂಸ್ಕರಿಸಿ ಮಾರಾಟಮಾಡಿ ಬಂದ ಲಾಭವನ್ನು ತಮ್ಮ ಜನಾಂಗದ ಅಭಿವೃದ್ಧಿಗಾಗಿ ಬಳಸುವುದು ಮತ್ತು ತಮ್ಮ ಆದಾಯದ ಮೂಲವಾದ ಈ ಅರಣ್ಯ ಉತ್ಪತ್ತಿಗಳನ್ನು ಸುಸ್ಥಿರವಾಗಿ ಬಳಸಿ ಪರಿಸರವನ್ನು ಸಂರಕ್ಷಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ ಸೋಲಿಗರಿಂದ ತಯಾರಿಸಲ್ಪಟ್ಟ ನೆಲ್ಲಿಕಾಯಿಯ ಉಪ್ಪಿನಕಾಯಿ, ಮೊರಬ್ಬ, ಅಡಿಕೆ, ಸಂಸ್ಕರಿಸಿದ ಜೇನು ತುಪ್ಪ, ಸೀಗೇಕಾಯಿ ಪುಡಿ ಮುಂತಾದ ಪದಾರ್ಥಗಳು ಬೆಂಗಳೂರಿನ ಮಾರುಕಟ್ಟೆಗೂ ಕಾಲಿಟ್ಟಿವೆ. ಇದರ ಜೊತೆಗೇ ಈ ಸಂಶೋಧನಾ ಸಂಸ್ಥೆಗಳು ಗಿರಿಜನರ ಪಾರಂಪರಿಕ ಜ್ಞಾನದ ಬಗ್ಗೆ ಮತ್ತು ಗಿರಿನಜರ ಅರಣ್ಯ ಉತ್ಪತ್ತಿಗಳ ಸಂಗ್ರಹಣೆಯಿಂದ ಅರಣ್ಯದ ಮೇಲಾಗಬಹುದಾದ ಪರಿಣಾಮಗಳ ಬಗ್ಗೆ, ಬಿಳಿಗಿರಿ ರಂಗನ ಬೆಟ್ಟ ಮತ್ತು ಮದುಮಲೈ ವನ್ಯಧಾಮದ ಸುತ್ತ ಮುತ್ತ ಸಂಶೋಧನೆಗಳನ್ನು ಮುಂದುವರಿಸಿದೆ. ಭಾರತೀಯ ವಿಜ್ಞಾನ ಮಂದಿರದ ಪರಿಸರ ವಿಜ್ಞಾನ ಕೇಂದ್ರವು ನೀಲಗಿರಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ ಸಂಶೋಧನೆಯಲ್ಲಿ ನಿರತವಾಗಿದೆ. ಜನಪರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯು ಧಾರವಾಡ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸ್ಥಳೀಯ ಆರೋಗ್ಯ ಪರಂಪರೆಗಳ ಪುನರುತ್ಥಾನದ ಪ್ರತಿಷ್ಠಾನವು ದಕ್ಷಿಣ ಭಾರತದ ಹಲವು ಕಡೆ ಔಷಧಿ ಸಸ್ಯಗಳ ಸಂರಕ್ಷಣೆ, ಅಬಿವೃದ್ಧಿ ಮತ್ತು ಈ ಕುರಿತಾದ ಪಾರಂಪರಿಕ ಜ್ಞಾನದ ಸಂರಕ್ಷಣೆಯಲ್ಲಿ ತೊಡಗಿದೆ. ಇದಲ್ಲದೇ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಗಿರಿಜನರ ಅಭಿವೃದ್ಧಿ ಮತ್ತು ಜೀವ ವೈವಿಧ್ಯತೆಯ ಸಂರಕ್ಷಣೆಯ ಕಾರ್ಯಕ್ರಮಗಳಲ್ಲಿ ತೊಡಗಿವೆ. ಇದಲ್ಲದೇ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಗಿರಿಜನರ ಅಬಿವೃದ್ಧಿ ಮತ್ತು ಜೀವವೈವಿಧ್ಯತೆಯ ಸಂರಕ್ಷಣೆಯ ಕಾರ್ಯಕ್ರಮಗಳಲ್ಲಿ ತೊಡಗಿವೆ.

ಇವೆಲ್ಲವುಗಳ ಮಧ್ಯೆ ಇತ್ತೀಚಿನ ದಿನಗಳಲ್ಲಿ ಕಿರು ಅರಣ್ಯ ಉತ್ಪನ್ನಗಳ ಮೇಲೆ ಗಿರಿಜನರ ಅವಲಂಬನೆ ಕಡಿಮೆಯಾಗುತ್ತಿರುವುದು ಕಂಡುಬರುತ್ತಿದೆ. ಬಿಳಿಗಿರಿ ರಂಗನ ಬೆಟ್ಟದಲ್ಲಿ ಸೋಲಿಗರು ತಮ್ಮ ಮನೆಗಳ ಸುತ್ತಮುತ್ತ ಕಾಫಿ ಬೀಜದ ಕೃಷಿಯನ್ನು ಪ್ರಾರಂಭಿಸಿದ್ದು ನೆಲ್ಲಿಕಾಯಿ ಸಂಗ್ರಹಣೆಯಲ್ಲಿ ಮೊದಲಿಗಿಂತ ಕಡಿಮೆ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು, ಮಧುಮಲೈ ಸುತ್ತಮುತ್ತ ಜೇನು ಕುರುಬರು, ಬೆಟ್ಟ ಕುರುಬರು ಮತ್ತು ಇರುಳರು ಕೃಷಿ, ಪಶು ಸಂಗೋಪನೆ ಮತ್ತು ಸಂಬಳದ ಕೆಲಸಗಳನ್ನೇ ಹೆಚ್ಚಾಗಿ ಬಯಸುತ್ತಿರುವುದು ಇವೆಲ್ಲ ಗಿರಿಜನರ ದೃಷ್ಟಿಕೋನದಲ್ಲಾಗುತ್ತಿರುವ ಮಾರ್ಪಾಟನ್ನು ತೋರಿಸುತ್ತಿವೆ. ಈ ದಿಶೆಯಲ್ಲಿ ಇಂದು ಕವಲು ಮಾರ್ಗದಲ್ಲಿರುವ ಗಿರಿಜನರು ತಮ್ಮ ಪಾರಂಪರಿಕ ಜ್ಞಾನವನ್ನುಪಯೋಗಿಸಿ ಕೊಂಡು ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆಯಲ್ಲಿ ಮುಂದು ವರಿಯುತ್ತಾರೋ ಇಲ್ಲವೋ ಎಂಬುದನ್ನು ಮುಂಬರುವ ದಿನಗಳಲ್ಲಿ ಕಾದುನೋಡ ಬೇಕಾಗಿದೆ.

'ಹಿತ್ತಲಗಿಡ ಮಾರಾಟ ಜಾಲ'

ನಿಮ್ಮ ಬಳಿಯಿರುವ ವಿಶಿಷ್ಟ, ಅಷ್ಟೇ ಉಪಯುಕ್ತ ನಾಟೀ ತಳಿಗಾಗಲಿ ಅಥವಾ ನೀವು ಬೆಳೆಯುತ್ತಿರುವ ಸಾವಯುವ ಉತ್ಪನ್ನಗಳಿಗಾಗಲಿ ಒಳ್ಳೆಯ ಬೆಲೆ, ಮಾರಾಟ ಸೌಲಭ್ಯ ಅಗತ್ಯವಿದೆಯೇ ? ಹಾಗಿದ್ದಲ್ಲಿ ನೀವು ಪೂರೈಸುವ ಉತ್ಪನ್ನಗಳ ಪ್ರಮಾಣ ಹಾಗೂ ಅಂದಾಜು ಬೆಲೆಯನ್ನು ಬರೆದು ತಿಳಿಸಿ. 'ಹಿತ್ತಲ ಗಿಡ'ದ ಮೂಲಕ ನಿಮ್ಮ ಉತ್ಪನ್ನಗಳ ಮಾರಾಟಕ್ಕೆ ಪ್ರಯತ್ನಿಸುತ್ತೇವೆ.

ಕೊಡಗಿನ ಪನ್ಯ (ಜಮೀನು) ಗಳು

ಎಂ.ಜಿ.ನಾಗರಾಜ್

"ಪನ್ಯ" ಎಂದರೆ ಕೊಡಗಿನ ಹಾಲೇರಿ ಅರಸರ ಖಾಸಗಿ ಕೃಷಿ ಭೂಮಿಗೆ ಇದ್ದ ಹೆಸರಾಗಿತ್ತು. ರಾಜರ ವಶಕ್ಕಿದ್ದ ಅರಮನೆ ಕೃಷಿ ಜಮೀನು ಎಂಬುದಾಗಿತ್ತು. ರಾಜರು ನೀಡಿದ ಸವಲತ್ತಿನ ಕಾರಣ ಅವರ ಪನ್ಯ ಜಮೀನಿನಲ್ಲಿ ಬಿಟ್ಟಿಯಾಗಿ ನಿರ್ದಿಷ್ಟ ಸಂದರ್ಭಗಳಲ್ಲಿ ಕೆಲಸ ಮಾಡುವ ಪದ್ಧತಿ ಇತ್ತು. 'ಮುಯ್ಯಾಳು' ಎಂದರೆ ವಿನಿಮಯ ಸಹಾಯದ ದುಡಿಮೆ. ವಿನಾ ಪ್ರತಿಫಲಾಪೇಕ್ಷೆಯ ಕೆಲಸವಲ್ಲ ಎಂಬುದು ಗ್ರಾಮೀಣ ಕೃಷಿಕರಲ್ಲಿ ಇಂದೂ ಪ್ರಚಲಿತವಿರುವ ರೂಢಿಯಾಗಿದೆ. ಅಂದರೆ ಇಂತಹ ಒಂದು ಪದ್ಧತಿ ಕೊಡಗಿನ ಪನ್ಯ ಜಮೀನುಗಳಲ್ಲಿ 14ನೇ ಶತಮಾನದಲ್ಲಿತ್ತು ಎಂಬ ಸೂಚನೆ ದೊರೆಯುತ್ತದೆ. ಕ್ರಿ.ಶ. 1470 ರ ವಿಜಯನಗರ ಕಾಲದ ಶಾಸನದಲ್ಲಿ ಹೊಲೆಯರು ವೀರ ಬಣಜರ ಕೈಕೆಳಗೆ ಹೀಗೆಯೇ ಅವಲಂಬಿತ ಆಳುಗಳಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಸೂಚನೆ ಇದೆ. ಕೊಡಗಿನ ಕೆಂಬಟ್ಟಿ, ಮಾರಂಗಿ, ಕುಕ್ಕ, ಯೆರವ ಇತ್ಯಾದಿ ದಲಿತ ವರ್ಗದ ಕೃಷಿಯಾಳುಗಳಲ್ಲಿ ಈ ಮುಯ್ಯಾಳು ಹೆಚ್ಚು ಪ್ರಚಲಿತದಲ್ಲಿವೆ.

ಚೆಂಗಾಳ್ವರ ಕ್ರಿ.ಶ. 1278ರ ನಿಡುತ ಶಾಸನದಲ್ಲಿ 'ದೇವ ಹಿಂದಣ ಪರೆಯಗದ್ದೆ' ಎನ್ನುವುದು ಪನ್ಯದ ವಿಶಾಲರೂಪದ ಗದ್ದೆ ಎಂಬ ಸೂಚನೆ ನೀಡುತ್ತದೆ. ಶಾಸನದ ಉಳಿದ ವಿವರಗಳು ಅದಕ್ಕೆ ಇಂಬುಕೊಡುವಂತಿದೆ. ಚೆಂಗಾಳ್ವರ ನಂತರ ಹಾವೇರಿ ಅರಸರ ಕಾಲದಲ್ಲಿ ಈ ಪನ್ಯದ ವ್ಯವಸ್ಥೆ ಕ್ರಮಗೊಂಡು ವಿಕಾಸವಾದ ಸ್ವರೂಪವನ್ನು ತೋರುತ್ತದೆ. ಪನ್ಯ ಜಮೀನುಗಳ ಇತಿಹಾಸ ಕ್ರಿ.ಶ. 888 ರಷ್ಟು ಹಿಂದಿನ ಹಳಮೆಯನ್ನು ಹೊಂದಿದ್ದರೂ ಅದಕ್ಕೊಂದು ನಿಗದಿತ ಸ್ವರೂಪ ಬಂದದ್ದು ಹಾವೇರಿ ಅರಸರ ಕಾಲದಲ್ಲಿ. ಮಾಗಡಿ ಹಿರಿಯ ಕೆಂಪೇಗೌಡನಲ್ಲಿಯೂ ಪಿಣ್ಯ ಜಮೀನುಗಳು ಇದ್ದುದು ಕಾಣಬರುತ್ತದೆ. ಒಂದೆರಡು ಸಾವಿರದಷ್ಟು ಜನರನ್ನು ಅರಮನೆ ಪಿಣ್ಯದ ಹೊಲಗದ್ದೆ ತೋಟಗಳ ವ್ಯವಸಾಯಕ್ಕೆ ಕೆಂಪೇಗೌಡನಲ್ಲಿ ನೇಮಕವಾಗಿದ್ದರು. ಆಂಗ್ಲರ ಕಾಲದಲ್ಲಿಯೂ ಈ ವ್ಯವಸ್ಥೆ ಮುಂದುವರಿದರೂ ಖಾಸಗಿ ಒಡತನಕ್ಕೆ ಅಂದರೆ ಕೊಡವ, ಗೌಡ ಜನಾಂಗಗಳಿಗೆ ಹಂಚಿದಂತೆ ಕಾಣುತ್ತದೆ. ಕೆಲವರು ಗದ್ದೆಗಳನ್ನಾಗಿಯೇ ಉಳಿಸಿಕೊಂಡರೆ ಇನ್ನು ಕೆಲವರು ತೋಟಗಳನ್ನಾಗಿ ಪರಿವರ್ತಿಸಿದ್ದಾರೆ. ಆದರೆ ಅವಕ್ಕೆ ಪನ್ಯ ಜಮೀನು ಎಂಬ ಹೆಸರು ಮಾತ್ರ ಉಳಿದಿದೆ. ರಾಜರ ಕಾಲದಲ್ಲಿಯೂ ಪನ್ಯದ ಜಮೀನುಗಳನ್ನು, ತಮಗೆ ಸಲ್ಲಿಸಿದ ಸೇವೆಯ ಕುರುಹಾಗಿ ಕೊಡಗಿನ ಜನರಿಗೆ 'ಜಮ್ಮ' ಭೂಮಿ ಅಂದರೆ ಅನ್ಯರಿಗೆ ಯಾವುದೇ ಬಗೆಯಲ್ಲಿ ವರ್ಗಾಯಿಸಲು ಬಾರದೆ ವಂಶ ಪಾರಂಪರ್ಯ ಅನುಭವಿಸುವ ಕೃಷಿ ಭೂಮಿ, ಜನ್ಮಸಿದ್ಧ ಹಕ್ಕಿನ ಭೂಮಿಯಾಗಿ ನೀಡಲಾಗಿದ್ದು ಅಂತಹವರ ವಂಶೀಕರು ಇಂದು ಇದ್ದಾರೆ.

ಪನ್ಯ ಜಮೀನುಗಳ ಲಕ್ಷಣಗಳು

ಪನ್ಯ ಜಮೀನುಗಳು ಸಾಮಾನ್ಯವಾಗಿ ಒಳ್ಳೆಯ ಫಲವತ್ತಿನ ಜಮೀನುಗಳಾಗಿದ್ದವು. ನೀರು ತಡಕಟ್ಟಿದ ನೀರಾವರಿ ಸೌಕರ್ಯ ಹೊಂದಿದ್ದವು. ಇವು ಬಹಳ ವಿಶಾಲವಾದ ಗದ್ದೆಗಳಾಗಿವೆ, ನೆರೆಯಲ್ಲಿ ತೋಡು ಅಥವಾ ಕೆರೆಗಳು, ಗರೆಕಾಡು ಹಾಗು ಬಾಣೆಜಾಗ ಹೊಂದಿರುವಂತಹವು. ಸಾಮಾನ್ಯವಾಗಿ ಭದ್ರಕಾಳಿ, ಭಗವತಿ, ಪನ್ನಂಗಾಲತ್ತಮ್ಮೆ ದೇಸರ ಕಾಡು, ದೇವರ ನೆಲೆ ಅಥವಾ ಮಠಗಳನ್ನು ಹೊಂದಿರುತ್ತವೆ. ಸಹಜವಾಗಿ ಜಮೀನಿನ ನೆರೆಯಲ್ಲಿ ಕೃಷಿಯಾಳುಗಳ ವಸತಿ ಇರುತ್ತದೆ. ವಿಶೇಷತಃ ಕೆಂಬಟ್ಟಿಗಳು ಮೂಲನಿವಾಸಿ ವರ್ಗದವರಾಗಿ ಇವುಗಳಲ್ಲಿ ಹೆಚ್ಚು ನೆಲೆ ಹಾಗು ಸಂಖ್ಯೆಗಳಲ್ಲಿ ಇರುವುದುಂಟು. ಖಾಸಗಿ ಪನ್ಯಗಳಾದರೆ ಮನೆತನದ ಹಿರಿಯರ ಸ್ಮಾರಕ ಕಟ್ಟಡವಾದ ಕೈಮಡಗಳನ್ನು ಹೊಂದಿರುತ್ತವೆ. ದೇವರ ಕಾಡುಗಳು ನೆರೆಯಲ್ಲಿರುತ್ತವೆ. ಐನ್‌ಮನೆ, ಕಲ್ಲು ಬೋಟಗಳು ನೆರೆಗಿರುತ್ತವೆ. ಈ ಗದ್ದೆಗಳಲ್ಲಿ ಸಾಮಾನ್ಯವಾಗಿ ಬಿಳಿ ಭತ್ತ, ಕರ್ತೆ (ಕೆಂಬತ್ತಿ ಭತ್ತ) ಬೆಳೆಯಲಾಗುತ್ತದೆ.

ಪನ್ಯ ಜಮೀನಿನ ನಿರ್ವಹಣೆಯ ಉದ್ದೇಶಗಳು

* ಸೇನೆಯು ಯುದ್ಧಕ್ಕೆ ಹೋಗುವಲ್ಲಿ ಅಥವಾ ಗಡಿ ಕಾಯಲು ಹೋಗುವಲ್ಲಿ ಪನ್ಯ ನೆಲೆಗಳು ಹಾದಿಯ ತಂಗುದಾಣವಾಗಿರುತ್ತಿದ್ದುವು. ಸೈನ್ಯವು ಮಡಿಕೇರಿಯಿಂದ ಹೊರಟರೆ ಮೊದಲು ಅಪ್ಪಂಗಳ ಪನ್ಯ ನಂತರ 8 ಮೈಲಿ ದೂರದ ನಾಪೊಕ್ಲು ನೂರಂಬಡೆ ಪನ್ಯ ನಂತರ ಕುಂಜಲ ಪನ್ಯವಾಗಿ ನಾಲ್ಕನೇ ಪನ್ಯ ನಾಲ್ನಾಡು ಅರಮನೆ ಬಳಿ ಸಾಗುತ್ತಿತ್ತು.

* ಬಂದ ಸೈನ್ಯಕ್ಕೆ, ಅನ್ನ ಬೇಯಿಸಿ ಊಟ ಹಾಕುವ ವ್ಯವಸ್ಥೆಗೆ ಪನ್ಯ ಗದ್ದೆಯ ಭತ್ತ ಅಣಿಯಾಗಿರುತ್ತಿತ್ತು. ಇಂತಹ ಪನ್ಯದ ಪಾರು ಪತ್ಯೆಗಾರರಾಗಿ ಕೊಡವರ ಕೆಲವು ಮನೆತನಗಳವರು ಇದ್ದರು. ಆಯಾ ಪ್ರದೇಶಗಳಿಗೆ ಅಲ್ಲಿಯ ನಾಯಕ ಮನೆತನಗಳು ಪಾರುಪತ್ಯಗಾರರಾಗಿ ನೇಮಕವಾಗುತ್ತಿದ್ದುವು. ಕಕ್ಕಬ್ಬೆ ಇಳಿಜಾರಿನಿಂದ ಮಡಿಕೇರಿ ಕಡೆ ಈಗಲೂ

ಇರುವ ಕೊಂಕಣಿಗಳ ಪೂರ್ವ ಜಯರಾಜರ ಈ ಕ್ಯಾಂಪುಗಳಿಗೆ ಪನ್ನ ಗದ್ದೆಯ ಭತ್ತದಿಂದ ಅವಲಕ್ಕಿ ಮಾಡಿಕೊಡುತ್ತಿದ್ದರು. ಗಡಿ ಕಾಯುವವರಿಗೆ ಬರಿ ಅವಲಕ್ಕಿ ಮಾತ್ರ ಒದಗಿಸಲಾಗುತ್ತಿತ್ತು.

ಪನ್ನದ ಬಗೆಗಳು

ಅರಮನೆ ಪನ್ನಗಳು ರಾಜರ ಖಾಸಗಿ ಕೃಷಿ ಭೂಮಿಗಳಾಗಿ ಅರಮನೆಯ ಆಶನ ವ್ಯವಸ್ಥೆ ಹಾಗು ನಿರ್ವಹಣೆಗೆ ಯುದ್ಧದ ಸೈನಿಕರ ಆಶನ ವ್ಯವಸ್ಥೆಗೆ, ಗಡಿಕಾವಲಿನವರ ಅವಲಕ್ಕಿ ಸರಬರಾಜು ವ್ಯವಸ್ಥೆಗೆ ಭಾದ್ಯವಾಗಿದ್ದವು.

ಸೇವಾನುದಾನ ಪನ್ನಗಳು ಪಾರುಪತ್ಯಗಾರರು ಹಾಗೂ ಯುದ್ಧದಲ್ಲಿ ಶೌರ್ಯ ತೋರಿದವರಿಗೆ ನೀಡಲಾಗುತ್ತಿದ್ದ ಜಮೀನುಗಳಾಗಿ ಕಾಣ ಬರುತ್ತವೆ. ಧಾರ್ಮಿಕ ದಾನ ಪನ್ನಗಳು, ಮಠದಲ್ಲಿ ನಡೆಯುವ ದಾಸೋಹಕ್ಕೆ ಅನ್ನಸತ್ರಗಳ ನಿರ್ವಹಣೆಗೆ ಬಳಕೆಯಾಗಿದ್ದಂತೆ ಕಾಣಬರುತ್ತದೆ.

ರಾಜರ ಕಾಲದಲ್ಲಿ ಬ್ರಾಹ್ಮಣರಿಗೂ ಪನ್ನ ಜಮೀನುಗಳನ್ನು ನೀಡಲಾಗಿತ್ತು ಎಂಬುದಕ್ಕೆ ಉದಾಹರಣೆ ಆಗಿ ಪನ್ನದ ಕರಣಿಕ ಲಕ್ಷ್ಮೀನಾರಾಯಣ ಇದ್ದಾನೆ, ಕಳಕೇರಿ ನಿಡುಗಣೆಯ ಅರಮನೆ ಪಳತಕ್ಕ ತಿಮ್ಮಪ್ಪಯ್ಯ ಅವರಿಗೆ ಪನ್ನ ನೀಡಲಾದ ಬಗ್ಗೆ ಅವರ ಪತ್ನಿ ದೇವಮ್ಮನವರಿಗೆ ಪನ್ನದ ದೇವಮ್ಮನೆಂಬ ಹೆಸರಿದ್ದು ಕಡತವೇ ಇದೆ.

ಆನೆ ಬೆಪ್ಪುನಾಡು ಅರಮೇರಿಯಲ್ಲಿ 200 ಭಟ್ಟಿ ಪನ್ನ ಭೂಮಿ ಕೆಂಬಟ್ಟಿ ಹರಿಜನರಿಗೂ ಇದ್ದು, ಅದಕ್ಕಾಗಿ ಅವರನ್ನು ಪನ್ನ ಹರಿಜನರೆನ್ನುತ್ತಿದ್ದರು. ರಾಜರ ಕಾಲದಲ್ಲಿ ಅದಕ್ಕಾಗಿ ನೀಡಿದ್ದ ವಡಿ ಕತ್ತಿ ಹಾಗು ಕ್ರಿ.ಶ. 1817 ನಿರೂಪ ಕೆಂಬಟ್ಟಿ ಬಾಳೆಕುಟ್ಟ ಮನೆತನದವರಲ್ಲಿದೆ. ಆದರೆ ರಾಜರ ನಂತರ ಆ ಭೂಮಿಯನ್ನು ವಿತರಣೆ ಮಾಡಿದರೆನ್ನಲಾಗಿದೆ. ಇದಲ್ಲದೆ ಅರಮೇರಿಗೆ ಪ್ರತ್ಯೇಕವಾಗಿ 500 ಭಟ್ಟಿ ಪನ್ನ ಭೂಮಿ ಇದೆ.

ಗರ್ವಾಲೆಯಲ್ಲಿ ರೈತರು ರಾಜರ ಆಶ್ರಿತ ಕುಳಗಳಾಗಿದ್ದರು. ಜಂಮ, ಉಂಬಳಿ ಪನ್ನ ಭಾಗಗಳನ್ನು ಸಲ್ಲಿಸಿದ ಸೇವೆಗಾಗಿ ಪಡೆದರು. ಇಂದು ಪನ್ನ ಜಮೀನಿನ ಕೆಲವಷ್ಟು ಭಾಗಗಳನ್ನು ಗರ್ವಾಲೆ ಶಾಲೆಗೆ ಬಿಟ್ಟುಕೊಟ್ಟದ್ದಾರೆ. ಕೋಲಾಟದ ಮಂದಿ (ಮೈದಾನ) ಗೆಂದು ಎಲ್ಲ ಸೇರಿ ಒಟ್ಟು 150 ಎಕರೆ ಬಿಟ್ಟು ಕೊಟ್ಟಿದ್ದಾರೆ. ಮಠಗಳಿಗೆ ಇದ್ದ ಪನ್ನಗಳು ಅಲ್ಲಿನವರಿಂದಲೇ ನಿರ್ವಹಿಸಲ್ಪಡು ತ್ತಿದ್ದಂತೆ ತೋರುತ್ತದೆ.

ರಾಜರ ಕಾಲಕ್ಕೆ ಕೊಡವರು, ಗೌಡರು, ದಲಿತ ವರ್ಗದವರು ಎಲ್ಲರೂ ಪನ್ನ ಜಮೀನಿನಲ್ಲಿ ದುಡಿಯುತ್ತಿದ್ದುದುಂಟು. ಉತ್ತು ಬಿತ್ತಿ ಮುಪತ್ತಿನ ಕೆಲಸ ಮಾಡಬೇಕಿತ್ತು. ಅದರಿಂದಾಗಿ ಒಂದು ಜಾತಿ ಭೇದದ ಕಲ್ಪನೆಗೆ ಅವಕಾಶ ವಿರುತ್ತಿರಲಿಲ್ಲ ಎಂಬುದು ಗಮನಿಸಬೇಕಾದ ಅಂಶ.

ಪನ್ನ ಜಮೀನುಗಳ ಸಾಂಸ್ಕೃತಿಕ ಮಹತ್ವ

✵ ಪನ್ನಗದ್ದೆಗಳು ವಿಶಾಲ ಗದ್ದೆಗಳಾಗಿದ್ದುದರಿಂದ ಅಲ್ಲಿ ನಡೆಯುತ್ತಿದ್ದ ಓಟ್‌ನಾಟಿ ಸ್ಪರ್ಧೆ, ನಾಟಿ ಹಾಕಿದ (ಕೆಸರುಗದ್ದೆಯ ಓಟ) ಕ್ರೀಡಾ ಮನೋಬಾವನೆಗೆ ಇಂಬುಗೊಟ್ಟಿತು. ಇದು ಬಹುಶಃ ರಾಜರಕಾಲದಿಂದ ಆರಂಭವಾಗಿರಬೇಕೆನ್ನಿಸುತ್ತದೆ. ಇಂದಿಗೂ "ಓಟನಾಟಿ" ಸಾರ್ವತ್ರಿಕ ಓಟದ ಸ್ಪರ್ಧೆಯಾಗಿ ನಡೆಯುತ್ತಿದೆ.

✵ ಪರಸ್ಪರ ಸಹಾಯದ ಮುಯ್ಯಾಳು ವ್ಯವಸ್ಥೆ ಪ್ರೀತಿ ಸೌಹಾರ್ದಗಳಿಗೆ ಅವಕಾಶ ನೀಡುತ್ತಾ ಬಂದಿದೆ.

ಪನ್ನಂಗಾಲತಮ್ಮ ಹಬ್ಬದಲ್ಲಿ ನಾಡು ಕರೆಯುವಿಕೆಯಿಂದಾಗಿ ಕೊಡಗಿನ ಪನ್ನ ಜಮೀನುಗಳ ಎಲ್ಲ ಕೆಂಬಟ್ಟಿಗಳ ಸಾಮೂಹಿಕ ಹಬ್ಬವಾಗಿ ಕೊಡವರೂ ಸೇರಿ ಅಸ್ಪೃಶ್ಯತೆಯನ್ನು ದೂರವಾಗಿಸುವಂಥಹ ಧಾರ್ಮಿಕ ಆಚರಣೆಗೆ ಅವಕಾಶ ನೀಡುವಂತಹದಾಗಿದೆ.

✵ ಮಠಗಳ ನಿರ್ವಹಣೆಗೆ ಅವಕಾಶವಾಗಿ ಧಾರ್ಮಿಕ ಮೌಲ್ಯಗಳನ್ನು ಗುರುತಿಸಲು ಅವಕಾಶವಾಗಿತ್ತು.

✵ ಕೈ ಮಡ, ದೇವ ನೆಲೆಗಳ ದೇವರಕಾಡು, ಕಡಂಗಗಳ ಇರುವಿಕೆಯು ಆ ಪನ್ನ ಗದ್ದೆಗಳಿಗೆ ದೈವಿಕ ಮೌಲ್ಯ ಹಿರಿಯರ ನೆಲೆ ಎಂಬ ಭಾವನಾತ್ಮಕ ಸಂಬಂಧವನ್ನು ಕುಟುಂಬಗಳಲ್ಲಿ ಹೆಣೆಯಲು ಕಾರಣವಾಗಿತ್ತು. ಅವು ಪರಿಸರ ಹಾಗು ರಕ್ಷಣೆಗಳ ವೈಜ್ಞಾನಿಕ ಸ್ವರೂಪದ ರಚನೆಯಾಗಿಯೂ ಕಾಣುತ್ತದೆ.

✵ ಇತಿಹಾಸ ಪೂರ್ವ ಕಾಲದ ಪದ್ಧತಿಯೊಂದನ್ನು ಕಲ್ಲು ಬೋಟೆಯ ಆಚರಣೆಗಳ ಮೂಲಕ ಕಾದಿಟ್ಟು ಕೊಳ್ಳುವ ಸಾಂಸ್ಕೃತಿಕ ಸಂಕೇತಕ್ಕೆ ಅನುವಾದ ನೆಲೆಗಳಾಗಿ ಪನ್ನ ಜಮೀನುಗಳು ಉಳಿದಿವೆ.

ಹೀಗೆ ಕೊಡಗಿನ ಇತಿಹಾಸ ಜನ ಜೀವನದ ಮೇಲೆ ಸಾಂಸ್ಕೃತಿಕ ಪ್ರಭಾವಗಳನ್ನು ಉಳಿಸಿದ ರೂಪವಾಗಿ ಪನ್ನ ಜಮೀನುಗಳು ಇಂದೂ ಕಾಣಬರುತ್ತಿವೆ.

ಕೃಪೆ : ಇತಿಹಾಸದರ್ಶನ,
ಕರ್ನಾಟಕ ಇತಿಹಾಸ ಅಕಾದಮಿ (ರಿ)
ಬೆಂಗಳೂರು

ವಿ.ಸೂ. ಈ ರೀತಿಯ ಕೃಷಿ, ಅರಣ್ಯ, ಕೆರೆ, ಪರಿಸರ, ಜಾನುವಾರುಗಳ ನಿರ್ವಹಣೆ ಪದ್ಧತಿ, ರೀತಿ, ರಿವಾಜುಗಳು ನಿಮ್ಮ ಸುತ್ತಮುತ್ತಲೂ ಬಳಕೆಯಲ್ಲಿದ್ದಿರ ಬಹುದಲ್ಲವೇ ? ದಯಮಾಡಿ ಈ ಬಗ್ಗೆ ಬರೆದು ತಿಳಿಸಿ.

ಸಂ.

ಉತ್ತಮ ಶಿಶು ಘನ ಆಹಾರ ನಾಟಿಮಾಲ್ಟ್

ಬನು ದೇಶಪಾಂಡೆ, ಗೃಹವಿಜ್ಞಾನ ವಿಭಾಗ ಕೃ.ವಿ.ವಿ.ಬೆಂಗಳೂರು.

ನಿಮ್ಮ ಪುಟ್ಟಕಂದನಿಗೀಗ ನಾಲ್ಕು ತಿಂಗಳು. ಅಂಬೆಗಾಲಿಡುತ್ತಾ ಮುದ ನೀಡುವ ಅವನ ಚಟುವಟಿಕೆಗಳು ಅತಿ ವೇಗದಲ್ಲಿ ಹೆಚ್ಚಾಗುತ್ತಿವೆ. ಆಗ ಮನೆಯ ಹಿರಿಯರಾದ ಅಜ್ಜಿಯೋ, ಅಮ್ಮನೋ, ಅತ್ತೆಯೋ ಮಗುವಿಗೆ ಮೇಲಿನ ಆಹಾರ ಶುರಮಾಡಲು ಸಲಹೆ ನೀಡುತ್ತಾರೆ. ರಾಗಿಸರಿ (ಚೌರಿ), ವಡ್ಡರಾಗಿ ಹಿಟ್ಟು ಅಥವಾ ಹುರಿಹಿಟ್ಟನ್ನು ತಿನ್ನಿಸಲು ಆದೇಶ ನೀಡುತ್ತಾರೆ. *ಈ ಘನ ಆಹಾರದ ಉದ್ದೇಶ, ಮಗುವಿಗೆ ಅವಶ್ಯಕವಾದ ಅಧಿಕ ಆಹಾರದ ಪೂರೈಕೆಯಷ್ಟೇ ಅಲ್ಲ ನಾವು ದಿನನಿತ್ಯ ಉಪಯೋಗಿಸುವ ಆಹಾರದ ಪ್ರಥಮ ಪರಿಚಯ ಹಾಗೂ ಅದಕ್ಕೆ ರೂಢಿಗೊಳಿಸುವಿಕೆಯ ಮೊದಲ ಹಂತ ಕೂಡ.*

ಹುರಿಹಿಟ್ಟು ಎಂದರೆ ಆಯಾ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಏಕದಳ ಧಾನ್ಯವನ್ನು ಸ್ವಚ್ಛಗೊಳಿಸಿ, ನೆನೆಹಾಕಿ ನೆರಳಿನಲ್ಲಿ ಚೆನ್ನಾಗಿ ಒಣಗಿಸಿ, ಹುರಿದು ಅಥವಾ ಮಸ್ಲಿನ್ ಬಟ್ಟೆಯಲ್ಲಿ ಸೋಸಿಕೊಂಡು ಅದರಿಂದ ನೀರು ಅಥವಾ ಹಾಲಿನಲ್ಲಿ ಗಂಜಿ ತಯಾರಿಸಿ ಮಗುವಿಗೆ ತಿನ್ನಿಸುವುದು. ವಡ್ಡರಾಗಿ ಹಿಟ್ಟು ಎಂದರೆ ನೆನೆಸಿ ಒಣಗಿಸಿದ ರಾಗಿಯನ್ನು ಹುರಿಯದೆ ಹಾಗೇ ಹಿಟ್ಟು ಮಾಡಿಸುವುದು. ಇದರಿಂದಲೂ ಪಾಯಸದಂತೆ ಗಂಜಿ ತಯಾರಿಸಿ ಕುಡಿಸುವರು. ಅಕ್ಕಿಯನ್ನು ಸರ್ವೇ ಸಾಮಾನ್ಯವಾಗಿ ಎಲ್ಲರೂ ತಮ್ಮ ಆಹಾರದಲ್ಲಿ ಬಳಸುವುದರಿಂದ ಹುರಿದ ಅಕ್ಕಿಯ ತರಿ, ಹಿಟ್ಟು ಇವುಗಳಿಂದ ಅಂಬಲಿ ಅಥವಾ ತಿಳಿಗಂಜಿಯನ್ನು ತಯಾರಿಸಿ ಮಗುವಿಗೆ ತಿನ್ನಿಸುವ ಪರಿಪಾಠವಿದೆ. ನಾವು ದಿನವೂ ಸೇವಿಸುವ ಧಾನ್ಯಗಳಲ್ಲಿ ಸಂಯುಕ್ತರೂಪದ ಶರ್ಕರಪಿಷ್ಟಗಳಿರುತ್ತವೆ. ನೆನೆಸಿ, ಒಣಗಿಸಿ ಹುರಿಯುವದರಿಂದ ಅವುಗಳ ರಾಸಾಯನಿಕ ಗುಣಧರ್ಮಗಳು ರೂಪಾಂತರಗೊಂಡು ಸುಲಭವಾಗಿ ಜೀರ್ಣವಾಗುವ ಸರಳ ಸಕ್ಕರೆಗಳಾಗಿ ಬದಲಾಯಿಸುತ್ತವೆ. ಈ ಹಿಟ್ಟನ್ನು ಸೋಸಿದಾಗ ಹೊಟ್ಟು ಅಥವಾ ನಾರಿನಂಶವನ್ನು ತೆಗೆದುಹಾಕಿದಂತಾಗಿ ಸರಳ ಘಟಕಗಳ ಸತ್ವಯುತ ಸಾರ ಉಳಿಯುತ್ತದೆ. ಇದು ಮಗುವಿಗೆ ಜೀರ್ಣಿಸಲು ಸುಲಭ ಹಾಗೂ ರುಚಿಕರ.

ಸಾಂಪ್ರದಾಯಿಕವಾಗಿ ತಯಾರಿಸುವ ಇಂತಹ ಶಿಶು ಆಹಾರಗಳನ್ನು ಪೌಷ್ಟಿಕದಾಯಕತೆ ದೃಷ್ಟಿಯಿಂದ ಇನ್ನೂ ಉತ್ತಮಗೊಳಿಸಬಹುದು. ಇದಕ್ಕಾಗಿ ಅತಿಶ್ರಮವನ್ನು ಪಡಬೇಕಾಗಿಲ್ಲ. *ಧಾನ್ಯಗಳನ್ನು ಹಾಗೆಯೇ ಹುರಿಯುವುದಕ್ಕಿಂತ ಮೊಳಕೆ ಬರಿಸಿ ಒಣಗಿಸಿ ಹುರಿದರೆ ಶಿಶು ಆಹಾರವು ಇನ್ನೂ ರುಚಿಕರ, ಪುಷ್ಟಿಕರ ಹಾಗೂ ಸುಲಭವಾಗಿ ಪಚನವಾಗುತ್ತದೆ.* ಧಾನ್ಯಗಳನ್ನು 8 ಗಂಟೆಗಳ ಕಾಲ ನೆನೆಸಿ 18 ಗಂಟೆಗಳ ಕಾಲ ಬಟ್ಟೆಯಲ್ಲಿ ಕಟ್ಟಿ ಮೊಳಕೆ ಬರಿಸಬೇಕು. ನಂತರ ನೆರಳಿನಲ್ಲಿ ಒಣಗಿಸಿ ಘಮ್ಮೆಂದು ಪರಿಮಳ ಬರುವವರೆಗೆ ಹುರಿದು ಹಿಟ್ಟು ಮಾಡಿಸಬೇಕು. ಈ ಹಿಟ್ಟಿಗೆ ಮಾಲ್ಟ್ ಎನ್ನುತ್ತಾರೆ.

ಮೊಳಕೆ ಬರಿಸುವುದರಿಂದ ಕಾಳಿನೊಳಗೆ ಉಂಟಾಗುವ ಜೀವ ರಾಸಾಯನಿಕ ಚಟುವಟಿಕೆಗಳಿಂದಾಗಿ ಸಂಕೀರ್ಣವಾದ ಶರ್ಕರ ಪಿಷ್ಟಗಳು ಒಡೆದು ಸರಳ ಸಕ್ಕರೆಗಳಾಗುತ್ತವೆ. ಅಲ್ಲದೆ ಒಣಗಿಸಿ ಹುರಿದಾಗ ಸಿಪ್ಪೆ ಸುಲಭವಾಗಿ ಬಿಟ್ಟುಕೊಂಡು ಕೇರಿದಾಗ ನಾರಿನಂಶದ ಬಹುಭಾಗ ಹೊರಟು ಹೋಗುತ್ತದೆ. ಇದರಿಂದ ಮಗುವಿನ ಜೀರ್ಣಾಂಗದ ಮೇಲೆ ನಾರಿನಂಶವನ್ನು ಪಚನಗೊಳಿಸುವ ಒತ್ತಡ ಕಡಿಮೆ ಯಾಗುತ್ತದೆ. ಮಾಲ್ಟ್‌ನಿಂದ ತಯಾರಿಸಿದ ಗಂಜಿಯು ಇತರ ಧಾನ್ಯಗಳ ಹಿಟ್ಟಿನ ಗಂಜಿಗಿಂತ ತೆಳ್ಳಗಾಗಿ ಅಥವಾ ಮಂದವಾಗಿದ್ದು ಮಕ್ಕಳಿಗೆ ಹೆಚ್ಚು ಆಹಾರವನ್ನು ತಿನ್ನಿಸಲು ಸಹಾಯಕವಾಗುತ್ತದೆ. ಇಲ್ಲದಿದ್ದರೆ ಮಗುವಿಗೆ ತಕ್ಕ ದ್ರವರೂಪದ ಗಂಜಿ ತಯಾರಿಸಲು ಹುರಿಹಿಟ್ಟು ಅಥವಾ ವಡ್ಡರಾಗಿ ಹಿಟ್ಟಿಗೆ ತುಂಬ ನೀರನ್ನು ಸೇರಿಸಬೇಕಾಗುತ್ತದೆ. ನೀರಿನ ಪ್ರಮಾಣ ಜಾಸ್ತಿಯಾದಾಗ ಮಗುವಿಗೆ ಜಾಸ್ತಿ ಆಹಾರಾಂಶವನ್ನು ಸೇವಿಸದೆ ಪೋಷಕಾಂಶಗಳ ಲಭ್ಯತೆ ಕಡಿಮೆಯಾಗುತ್ತದೆ. ಆದರೆ ಮಾಲ್ಟ್‌ನಿಂದ ತಯಾರಿಸಿದ ತೆಳುಗಂಜಿ ಸ್ವಲ್ಪ ಹೊತ್ತಿನ ನಂತರವೂ ಹಿಟ್ಟಿನೊಂದಿಗೆ ಬೆರೆತು ಗಟ್ಟಿಯಾಗಿ ಮುದ್ದೆಯಂತಾಗದೇ ಗಂಜಿಯಾಗೇ ಉಳಿದಿರುತ್ತದೆ. ಇದಕ್ಕೆ ಮೊಳಕೆ ಬರಿಸುವಾಗ ಉತ್ಪತ್ತಿಯಾಗುವ ಅಮೈಲೇಸ್ ಎಂಬ ಕಿಣ್ವದ ಕಾರ್ಯವೇ ಕಾರಣ. ಮನೆಯಲ್ಲಿ ತಯಾರಿಸುವ ಹುರಿಹಿಟ್ಟಿಗೆ ಕಾಲು ಪ್ರಮಾಣದಲ್ಲಿ ಮೊಳಕೆ ಬರಿಸಿದ ಧಾನ್ಯದ ಹಿಟ್ಟು ಅಥವಾ ಮಾಲ್ಟ್ ಅನ್ನು ಸೇರಿಸಿದರೂ ಸಾಕು. ಈ ರೀತಿಯ ಗುಣಧರ್ಮವನ್ನು ಗಂಜಿಯಲ್ಲಿ ನಾವು ಕಾಣಬಹುದು.

ಬರೀ ಏಕದಳಧಾನ್ಯಗಳ ಮಾಲ್ಟ್‌ಗಿಂತ ದ್ವಿದಳ ಧಾನ್ಯಗಳಿಂದ ಮಾಲ್ಟ್ ತಯಾರಿಸಿ ಎರಡನ್ನೂ 2:1 ಪ್ರಮಾಣದಲ್ಲಿ ಬೆರೆಸಿದ ಶಿಶು ಆಹಾರವನ್ನಾಗಿ ಉಪಯೋಗಿಸಿದರೆ ಈ ತರಹದ ಸಂಯೋಜನೆಯಿಂದ ಪ್ರೋಟೀನ್‌ನ ಜೈವಿಕ ಮೌಲ್ಯವು ಉತ್ತಮಗೊಳ್ಳುತ್ತದೆ. ಮಗುವಿಗೆ ಶಕ್ತಿಯೊಂದಿಗೆ ಶರೀರದ ಬೆಳವಣಿಗೆ ಹಾಗೂ ನಿರ್ವಹಣೆಗೆ ಬೇಕಾದ ಪ್ರೋಟೀನ್ ಹಾಗೂ ಇನ್ನಿತರ ಮುಖ್ಯ ಪೋಷಕಾಂಶಗಳು ಅಗತ್ಯ ಪ್ರಮಾಣದಲ್ಲಿ ದೊರಕುತ್ತವೆ. ಇಂತಹ ಶಿಶು ಆಹಾರಗಳನ್ನು ತಯಾರಿಸಿ ಗಾಳಿಯಾಡುವ ಡಬ್ಬಗಳಲ್ಲಿ ತುಂಬಿಟ್ಟುಕೊಂಡರೆ ಹೆಚ್ಚುದಿನಗಳ ಕಾಲ ಉಪಯೋಗಿಸಬಹುದು. ಎಲ್ಲ ಮಕ್ಕಳಿಗೆ ಇಷ್ಟವಾಗುವ ಬಹುವಿಧದ ತಿನಿಸುಗಳನ್ನು ಈ ಪುಷ್ಟಿಕರ ಮಿಶ್ರಣದಿಂದ ತಯಾರಿಸಬಹುದು.

ಹತ್ತು ಗುಂಟೆಯಲ್ಲಿ ಸ್ವಾವಲಂಬನೆ ಮಹಾರಾಷ್ಟ್ರದ ಧಾಭೋಲ್ಕರರ ಸಿದ್ಧಾಂತ

ಕೃಪಾ, ಬೆಂಗಳೂರು

ಹತ್ತು ಗುಂಟೆ ಜಮೀನು, ದಿನಕ್ಕೆ 1000 ಲೀಟರ್ ನೀರು ಮತ್ತು ಎಂಟು ಗಂಟೆಗಳ ದುಡಿಮೆ ಇದ್ದಲ್ಲಿ, ಐದು ಜನರ ಕುಟುಂಬ ಸಕಲ ಸಮೃದ್ಧಿ ಸಂತೋಷಗಳಿಂದ ಕೂಡಿದ ಜೀವನ ನಡೆಸಬಹುದು. ಆಧುನಿಕ ಸಾವಯವ ಕೃಷಿ ವಲಯಗಳಲ್ಲಿ ಜನರು ಬೆರಗಿನಿಂದ ಕೇಳುತ್ತಿರುವ ದಾಭೋಲ್ಕರ್ ರವರ ಮೂಲ ಸಿದ್ಧಾಂತ ಇದು.

ಪ್ರಕೃತಿ ಸದಾ ಸಹಯೋಗಿ

ನಾವು ಸಸ್ಯಗಳೊಡನೆ ಸಂವಾದ ನಡೆಸಬೇಕು. ನಿನಗೆ ಏನು ಬೇಕು ಎಂದು ಕೇಳಿ ಅರ್ಥ ಮಾಡಿಕೊಂಡು ಒದಗಿಸಬೇಕು. ನಮ್ಮ ಜ್ಞಾನದಿಂದ ಸ್ವಯಂ ಶೋಧಿಯಾಗಿ ಪರಿಹಾರವನ್ನರಸಿ ಗಿಡ ಮರಗಳೊಡನೆ ಸಂವಾದ ನಡೆಸಿದರೆ ಅವೂ ಸಹಕರಿಸಿ ನಮಗೆ ಬೇಕಾದ್ದನ್ನು ನೀಡುತ್ತವೆ. ನಿಸರ್ಗದೊಡನೆ ನಡೆಸಬೇಕಾದ ಈ ಸಹ ಸಂವಾದ ಕಾವ್ಯ ಕವಿತೆಯ ಮೂಲಕವಲ್ಲ ಅತ್ಯಾಧುನಿಕ ವಿಜ್ಞಾನದಿಂದ. ಈ ವಿಜ್ಞಾನವನ್ನು ಪ್ರತಿಯೊಬ್ಬ ವ್ಯಕ್ತಿಯೂ 300 ರಿಂದ 1000 ದಿನಗಳಲ್ಲಿ ಕಲಿಯಬಹುದು. ಇದು ಒಳಗಿನ ಅಂತರಾಳದಿಂದ ಆಗುವ ವಿಕಾಸ, ಹೊರಗಿನಿಂದ ಮೂಡಿಸಲಾಗದು ಯಾವುದೇ ಜೈವಿಕ ದ್ರವ್ಯ ಗಿಡ, ಎಲೆ, ಕಡ್ಡಿ, ಮರದ ತುಂಡಾಗಲೀ, ಮಣ್ಣು, ಗೊಬ್ಬರವಾಗಲಿ, ಅದರ ಗಾತ್ರ ಗುಣಗಳಿಗೆ ಅನುಗುಣವಾಗಿ ಬೆಲೆಯಿರುತ್ತದೆ. ಎಲ್ಲಾದರೂ ಒಂದು ರೂಪಾಯಿನ ನೋಟು ಬಿದ್ದದ್ದು ಕಂಡರೆ ಒಡನೆಯೇ ಹೇಗೆ ಹೆಕ್ಕಿಕೊಳ್ಳುತ್ತೇವೋ ಹಾಗೇ ಮಣ್ಣು, ಎಲೆ, ಕಾಷ್ಟಗಳ ಬೆಲೆಯ ಅರಿವಿದ್ದು ಅದನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದನ್ನು ಕಲಿಯಬೇಕು.

ಪ್ರಕೃತಿಯೊಡನೆ ನಮ್ಮ ಸ್ಪಂದನ ಈ ಮಟ್ಟಕ್ಕೇರಿತೆಂದರೆ. ನಮಗೆ ಸಮೃದ್ಧಿ ಖಚಿತ.

ನಿಸರ್ಗದೊಡನೆಯ ಸಹ ಸಂವಾದದಲ್ಲಿ ನಾಲ್ಕು ಅಂಶಗಳು ಸೇರಿವೆ. ವಸ್ತು, ಶಕ್ತಿ, ಜೀವಿಗಳನ್ನು ಅರ್ಥ ಮಾಡಿಕೊಂಡು ಸ್ಪಂದಿಸುವ ಸಾಮರ್ಥ್ಯ ಮತ್ತು ಇವನ್ನು ನೆರವೇರಿಸ ತಕ್ಕಂತಹ ಸಮಯ ಪರಿಮಿತಿ. ಭೂಮಿ ವಸ್ತು ಹಾಗೂ ಶಕ್ತಿಯ ಭಂಡಾರ ಈ ಭಂಡಾರವನ್ನು ಬಳಸಿಕೊಳ್ಳುವಲ್ಲಿ ಸಮಯದ ಪಾತ್ರ ಗುರುತರ. ಸಮಯದಲ್ಲಿ ಮಾಡಬೇಕಾದನ್ನು ಮಾಡಲೇಬೇಕು. ಹೀಗೆ ಮಾಡಲು ನಮಗೆ ಸಂವಾದ ನಡೆಸುವ ಜ್ಞಾನ ಅಗತ್ಯ.

> *ಈ ಜ್ಞಾನವೆಂಬ ಹಾಸಿಟ್ಟು, ಸ್ವಯಂ ಶೋಧನೆ ಎಂಬ ಹೊಕ್ಕಿನೊಡನೆ ಮೇಲೆ ಹೇಳಿದ ಶಕ್ತಿ, ವಸ್ತು ಮತ್ತು ಸಮಯ ಮೂರನ್ನು ಸೇರಿಸಿ ನೇಯ್ದಲ್ಲಿ ಸಮೃದ್ಧಿ ವಾಸ್ತವವಾಗುವುದರಲ್ಲಿ ಸಂದೇಹವಿಲ್ಲ.*

ದಾಭೋಲ್ಕರ್‌ರವರ ಕೃಷಿ ವಿಜ್ಞಾನದಲ್ಲಿ ಲೆಕ್ಕಾಚಾರ ತುಂಬಿದೆ. ವಸ್ತು ಶಿಥಿಲ ಅಥವಾ ಅವನತಿಗೊಳ್ಳುವುದು (degrading) ಪ್ರಾಕೃತಿಕ ನಿಯಮ (Law of entropy) ಹೇಳುವಂತೆ. 'ಸಜೀವ ಸೃಷ್ಟಿ' ಎಂದು ಕರೆಯುವ ಇವರ ಪದ್ಧತಿಯಲ್ಲಿ ಈ ನಿಯಮವನ್ನು ನಿರಾಕರಿಸಿ ವಸ್ತುವನ್ನು ಪುನರ್ ಬಳಕೆಗೆ ತಂದು ಉನ್ನತಿ ಗೊಳಿಸಬೇಕು. ಕನಿಷ್ಠ ಶಕ್ತಿ ಬಳಸಿ ಗರಿಷ್ಠ ಪ್ರತಿಫಲ ಪಡೆಯುವುದೇ ಈ ಪುಷ್ಟೀಕರಣ ಅಥವಾ ಉನ್ನತಿಗೊಳಿಸು ವುದರ ಕ್ರಮ.

ಪ್ರಕೃತಿಯಲ್ಲಿರುವ ಶಕ್ತಿಯನ್ನು ಸತತವಾಗಿ ಸಂಗ್ರಹಿಸಿ ಸಮೃದ್ಧಿಗೊಳಿಸುತ್ತಿರಬೇಕು. ಜೈವಿಕ ದ್ರವ್ಯ ಮಣ್ಣಿಗೆ ಆಹಾರ. ಅದನ್ನು ತಿಂದು ಮಣ್ಣು ನಮ್ಮ ಆಹಾರವನ್ನು ನೀಡುತ್ತದೆ. ನಾಲ್ಕು ನೂರರಿಂದ ಆರು ನೂರು ಗ್ರಾಂ ನಷ್ಟು ಜೈವಿಕ ದ್ರವ್ಯ ನಮ್ಮ ಒಂದು ಊಟವನ್ನು ಉತ್ಪತ್ತಿ ಮಾಡಿಕೊಡುತ್ತದೆ. ಹತ್ತು ಗುಂಟೆ ಜಮೀನಿನಲ್ಲಿ ಮೂರು ವರ್ಷ ಅವಧಿಯೊಳಗೆ ಅದರ ಗರಿಷ್ಠ ಉತ್ಪಾದನೆ ಮೂಡಿಸುವ ಹೊಣೆಗೆ ನೀವು ಬದ್ಧರಾಗಿರಬೇಕು ಎನ್ನುತ್ತಾರೆ ಧಾಭೋಲ್ಕರ್.

ಈ ಕೃಷಿಗೆ ಮೂಲ ಆಧಾರ 'ಸಜೀವ ಮಣ್ಣು'. ಗಿಡಕ್ಕೆ ಅವಶ್ಯ ಇರುವ ಎಲ್ಲ ಅಂಶಗಳನ್ನೂ ಆಯಾ ಪ್ರಮಾಣದಲ್ಲಿ ಅದಕ್ಕೆ ಅಗತ್ಯ ಬೀಳುವ ಸಮಯಕ್ಕೆ ಸರಿಯಾಗಿ ಒದಗಿಸುವ ಮಣ್ಣನ್ನು ಅದಕ್ಕೆ ಕೊಡಬೇಕು. ಈ ಸಜೀವ ಮಣ್ಣಿನ ಸ್ಥೂಲ ರೂಪ ಹೀಗಿದೆ : ಅರ್ಧ ಭಾಗ ಖನಿಜ ತುಂಬಿದ ಮಣ್ಣು (activated soil) ಮತ್ತು ಅರ್ಧ ಭಾಗ ನಾನಾ ಹಂತದಲ್ಲಿ ಕೊಳೆತ ಅಥವಾ ಕೊಳೆಯುತ್ತಿರುವ ಗಿಡ ಮರಗಳ ಭಾಗಗಳು ಅಥವಾ ಜೈವಿಕ ದ್ರವ್ಯ. ಇದಕ್ಕೆ ಸ್ಥೂಲವಾಗಿ ಕಾಂಪೋಸ್ಟ್ ಎಂಬ ಶಬ್ದವನ್ನು ಬಳಸಬಹುದು.

ಖನಿಜ ತತ್ವವುಳ್ಳ ಮಣ್ಣು ಎಂದರೆ ಸೂರ್ಯನ ತಾಪದಿಂದ ಬಿಸಿಯಾಗುವ ಮೇಲ್ಪದರದ ಮಣ್ಣು. ನಡೆದು ಓಡಾಡುವಲ್ಲಿ ಮೇಲಿಂದ (ಒಂದು ಸೆಂ.ಮೀ. ನಷ್ಟು) ಗುಡಿಸಿ ತೆಗೆದು ಕೊಳ್ಳಬಹುದಾದ ಮಣ್ಣು. ನಡೆವಾಗ ತೇಯ್ದು ಉಜ್ಜಿದಂತಾದ ಅಥವಾ ಸುಟ್ಟು ಬಿಸಿಯಾದ ಮಣ್ಣಿನಲ್ಲಿ ಖನಿಜ ಸತ್ವ ಅಧಿಕವಾಗಿರುತ್ತದೆ.

ಮಿಕ್ಕ ಅರ್ಧ ಬಾಗ ಜೈವಿಕ ದ್ರವ್ಯ ನಾನಾ ತರಹದ ಎಲೆಗಳು ಕಸ ಕಡ್ಡಿಗಳು ವಿವಿಧ ಹಂತದಲ್ಲಿ ಕೊಳೆಯುತ್ತಿರುವ ಅಥವಾ

ಬೇಗ ಕೊಳೆತು ಬಿಡುವಂತಹ ತೆಳ್ಳನೆಯ ಚಿಕ್ಕ ಚಿಕ್ಕ ಎಲೆಗಳಾಗಿರಬಹುದು. ನಾವು ಬೆಳೆಸಬೇಕಾದ ಗಿಡದ ಫಲ ಬಿಡುವ ಅವಧಿಯನ್ನು ಅವಲಂಬಿಸಿ ಈ ಎಲೆ ಗೊಬ್ಬರಗಳನ್ನು ಸೇರಿಸಬೇಕು.

ಒಂದು ಚದರ ಅಡಿಯಲ್ಲಿ ಎರಡು ಲೀಟರ್ (ಬೊಗಸೆ ಲೆಕ್ಕ ಇಟ್ಟುಕೊಳ್ಳ ಬಹುದು) ಖನಿಜ ಸತ್ವ ತುಂಬಿದ ಮಣ್ಣು ಮತ್ತು 2 ಲೀಟರ್ ಗೊಬ್ಬರಯುಕ್ತ ಮಣ್ಣು ಸೇರಿಸಿದ 4 ಲೀಟರ್ ಸಜೀವ ಮಣ್ಣು ಹಾಕಬೇಕು.

ಒಂದು ಗುಂಟೆ ಅಥವಾ 1000 ಚದುರ ಅಡಿಗೆ ಗರಿಷ್ಠ 4000 ಲೀಟರ್ ಮತ್ತು ಕನಿಷ್ಠ 2500 ಲೀಟರ್ ಸಜೀವ ಮಣ್ಣು ಅಗತ್ಯ. ಒಂದು ಚದುರ ಅಡಿಗೆ300 ಗ್ರಾಂ ಗಿಂತ ಅಧಿಕವಾಗಿ ಗೊಬ್ಬರ ಹಾಕಿದರೆ ನಂಜಾಗಬಹುದು. ಕಡಿಮೆ ಇದ್ದರೆ ಪೌಷ್ಠಿ ಕಾಂಶದ ಕೊರತೆಯಾಗಬಹುದು.

ಸಮಯದ ಮಹತ್ವ : ಸಮಯವನ್ನು ದಕ್ಷತೆಯಿಂದ ಬಳಸಿಕೊಳ್ಳುವುದರಿಂದ ಮಾತ್ರ ಗರಿಷ್ಠ ಉತ್ಪಾದನೆ ಸಾಧ್ಯ. ಉದಾಹರಣೆಗೆ, ನಿಸರ್ಗದಲ್ಲಿ ಜೀರ್ಣ ವಾಗಲು ನಾಲ್ಕು ವರ್ಷ ತೆಗೆದುಕೊಳ್ಳುವಂತಹ ವಸ್ತುಗಳನ್ನು ಗದ್ದಲು ನಾಲ್ಕು ದಿನಗಳಲ್ಲೇ ಅಂತಹ ಸ್ಥಿತಿಗೆ ತರುವುದು. ಇದನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದನ್ನು ಕಲಿಯಬೇಕು. ಪ್ರಕೃತಿಯಲ್ಲಿ ಯಾವುದೇ ಸೃಷ್ಟಿ ಅನಗತ್ಯವಿಲ್ಲ ಅಥವಾ ನಿಷ್ಪ್ರಯೋಜಕವಲ್ಲ. ಒಂದು ಗಿಡ ನೆಲದಿಂದ ಎಷ್ಟು ಪಡೆದಿರುತ್ತೆ ಎಂದು ತಿಳಿಯಬೇಕಾದರೆ ಆ ಗಿಡವನ್ನು ಒಣಗಿಸಿ ಉರಿಸಿದರೆ ಎಷ್ಟು ಬೂದಿ ಬರುವುದೋ ಊಹಿಸಿಕೊಳ್ಳಿ. ಅಷ್ಟನ್ನು ಮಾತ್ರ ಅದು ಭೂಮಿಯಿಂದ ತೆಗೆದುಕೊಂಡಿರುತ್ತೆ. ಮಿಕ್ಕೆಲ್ಲವನ್ನೂ ತನ್ನಲ್ಲಿರುವ ಕ್ಲೋರೋಫಿಲ್ (ಹಸಿರು) ಮೂಲಕ ಸೂರ್ಯನ ಬೆಳಕನ್ನೂ, ನೀರನ್ನೂ ಉಪಯೋಗಿಸಿಕೊಂಡು ಉತ್ಪಾದನೆ ಮಾಡಿರುತ್ತೆ. ಹೀಗಿರುವಾಗ ನಾವು ಅನಗತ್ಯವಾಗಿ ಗೊಬ್ಬರ ನೀರು ಹಾಕಿ ಸುರಿಯಬೇಕಿಲ್ಲ.

ಸಜೀವ ಸೃಷ್ಟಿ : ಪ್ರತಿ ಗುಂಟೆಯಲ್ಲೂ ಸುಮಾರು 25 ಕಿಲೋನಷ್ಟು ಸೂಕ್ಷ್ಮ ಜೀವಿಗಳು ಇರುತ್ತವೆ. ಇವು ಸಸ್ಯ ರೂಪದ್ದೂ ಮತ್ತು ಪ್ರಾಣಿರೂಪದ್ದೂ ಆಗಿವೆ. ಬ್ಯಾಕ್ಟೀರಿಯಾ, ಶಿಲೀಂದ್ರ (ಬೂಷ್ಟಿನಂತದ್ದು), ಪಾಚಿ(alge) ಮತ್ತು ಆ್ಯಕ್ಟಿನೊಮೈಸಿನ್ (ಮಣ್ಣಿನಲ್ಲಿರುವ ರೋಗ ನಿರೋಧಕಗಳು) ಸಸ್ಯ ವರ್ಗಕ್ಕೆ ಸೇರಿದ್ದು, ಪ್ರೋಟೋಜೊಆ ಮತ್ತು ನೆಮಟೋಡ್ಸ್ ಪ್ರಾಣಿ ವರ್ಗಕ್ಕೆ ಸೇರಿವೆ. ಆರೋಗ್ಯ ವಾಗಿರುವ ಮಣ್ಣಿನಲ್ಲಿ ಇವುಗಳ ಪ್ರಮಾಣ ಸರಿಯಾಗಿದ್ದು ಇವುಗಳ ಚಟುವಟಿಕೆಯಿಂದ ವರ್ಷಕ್ಕೆ 700 ಕಿಲೋನಷ್ಟು ಕಾಂಪೋಸ್ಟ್ ತಯಾರಿಸುವ ಸಾಮರ್ಥ್ಯವುಳ್ಳದ್ದಾಗಿರುತ್ತೆ. ಈ 700 ಕೆಜಿಯಲ್ಲಿ ಮೂರನೇ ಒಂದು ಭಾಗ ಆ ಜೀವಿಗಳಿಗೇ ಅಗತ್ಯವಿದ್ದು ಮಿಕ್ಕದ್ದು ಆ ಭೂಮಿಯ ಅಗತ್ಯಕ್ಕಿಂತಲೂ ಹೆಚ್ಚಾಗಿಯೇ ಇರುವುದು. ಮೂರು ವರ್ಷಗಳಲ್ಲಿ ಈ ಕೃಷಿ ವಿಜ್ಞಾನವನ್ನು ಕಲಿತ ನಂತರ ನಮ್ಮ ಹತ್ತು ಗುಂಟೆಗೆ ಹೊರಗಿನಿಂದ ತಂದು ಹಾಕುವ ಯಾವ ಅಗತ್ಯವೂ ಇರುವುದಿಲ್ಲ ಎಂದು ಧಾಭೋಲ್ಕರ್‌ರವರು ಹೇಳುತ್ತಾರೆ.

ಪ್ರತಿ ಚದುರಡಿಯಲ್ಲಿ ನಿತ್ಯವೂ ಎರಡು ಗ್ರಾಂ ಒಣ ತೂಕದಷ್ಟು ಜೀವದ್ರವ್ಯ ಉತ್ಪತ್ತಿಯಾಗುತ್ತಿದ್ದರೆ, ಅದು ಸಕ್ಷಮ ಉತ್ಪಾದನೆ. ಹತ್ತು ಗುಂಟೆಯಲ್ಲಿ ದಿನಕ್ಕೆ 20 ಕಿಲೋ ಜೈವಿಕ ದ್ರವ್ಯ ಉತ್ಪಾದನೆ ಮಾಡಬಹುದು. ಇದನ್ನು ನಮಗೆ ಬೇಕಾದ ರೂಪದಲ್ಲಿ - ತರಕಾರಿ, ಹಣ್ಣು, ಧಾನ್ಯ, ಮೇವು, ಉರುವಲ ಇತ್ಯಾದಿ ಪಡೆಯಬಹುದು. ಇದಕ್ಕೆ ಆರಂಭದಲ್ಲಿ ದಿನಕ್ಕೆ 1000 ಲೀಟರ್ ನೀರು ಅಗತ್ಯ. ಕ್ರಮೇಣ ನಮ್ಮ ಕೌಶಲ್ಯ ಮತ್ತು ಜ್ಞಾನ ಹೆಚ್ಚಿದಂತೆ ನೀರಿನ ಅಗತ್ಯ ಅರ್ಧಕ್ಕಿಳಿಸಬಹುದು.

ಮನುಷ್ಯರಂತೆ ಸಸ್ಯ ಜೀವನದಲ್ಲೂ ನಾಲ್ಕು ಹಂತಗಳಿರುತ್ತೆ - ಬಾಲ್ಯಾವಸ್ಥೆ, ತರುಣಾವಸ್ಥೆ, ಪ್ರೌಢಾವಸ್ಥೆ ಮತ್ತು ವೃದ್ಧಾಪ್ಯ. ಗಿಡದ ಆಯುಷ್ಯದ $^1/_5$ ಭಾಗ ಅವರ ಬಾಲ್ಯಾವಸ್ಥೆ. ನಂತರದ $^1/_5$ ಭಾಗ ತರುಣಾವಸ್ಥೆ.

ಬಾಲ್ಯಾವಸ್ಥೆಯಲ್ಲಿ ಒಳ್ಳೆಯ ಬಿಸಿಲು ಅವಶ್ಯ. ಸಧೃಡವಾದ ಬೇರು, ಬುಡದ ಬುನಾದಿಯಾಗಬೇಕು. ತರುಣಾವಸ್ಥೆಯಲ್ಲಿ ಗಿಡ ಚೆನ್ನಾಗಿ ಹರಡಿ ಬೆಳೆದು ಶರೀರ ದಷ್ಟ ಪುಷ್ಟಿಯಾಗಿ ಪೋಷಣೆ ಶೇಖರಿಸಿಕೊಳ್ಳುವ ವಯಸ್ಸು. ಈ ಹಂತದಲ್ಲಿ ಗಿಡ ಬೆಳೆಯದೇ ಕಾಯಿ ಹಣ್ಣು ಬಿಟ್ಟರೆ ಅದರ ಆಯಸ್ಸು ಕ್ಷೀಣವಾಗುವುದು. ತರುಣಾವಸ್ಥೆಯ ನಂತರ ಫಲ ಬಿಡುವ ಪ್ರೌಢಾವಸ್ಥೆ.

ಈ ಹಂತಗಳನ್ನು ತಿಳಿದುಕೊಳ್ಳುವ ಅಗತ್ಯ ಏಕೆಂದರೆ ಪ್ರೌಢಾವಸ್ಥೆಯಲ್ಲಿ ನಮಗೆ ಫಲ ಸರಿಯಾಗಿ ಕೊಡಬೇಕೆಂದರೆ, ಅದರ ತರುಣಾವಸ್ಥೆಯಲ್ಲಿಯೇ ಅಗತ್ಯವಾದ ಪೋಷಣೆಯನ್ನು ಪೂರೈಸಬೇಕು. ಉದಾಹರಣೆಗೆ 35 ರಿಂದ 60 ದಿನಗಳಲ್ಲಿ ಕಾಯಿ ಬಿಡುವ ಸೋರೆ ವಿಧಗಳಿವೆ. ಬಾಳೆಯಲ್ಲಿ ಐದನೇ ತಿಂಗಳಲ್ಲಿ ಗೊನೆಯ ಮೂಲ ಶುರುವಾಗಿದ್ದು ಆಗ ಅದಕ್ಕೆ ಸಿಗುವ ಪೋಷಣೆಯನ್ನವಲಂಬಿಸಿ ಕಾಯಿ/ಗೊನೆಯ ಗಾತ್ರ ನಿರ್ಧಾರವಾಗುತ್ತೆ. ತೆಂಗಿನ ಗಿಡಕ್ಕೆ ನೀವು ಇಂದು ಪೂರೈಸಿದ ಪೋಷಣೆಯ ಪರಿಣಾಮ ಮೂರು ವರ್ಷಗಳಲ್ಲಿ ತಿಳಿಯುವುದು. ಇಂದು ಹೊರ ಬರುವ ಗರಿಯು ಗಿಡದಲ್ಲಿ ಒಂದೂವರೆ ವರ್ಷದ ಹಿಂದೆಯೇ ಅಂಕುರವಾಗಿರುವುದು. ಕಣ್ಣೊಂದರಲ್ಲಿ ಐದು ಎಲೆಗಳ ಅಂಕುರಾಂಶ ಇರುವುದು. ಸರಿಯಾದ ಪೋಷಣೆ ದೊರೆತಲ್ಲಿ, ಈ ಐದು ಎಲೆಗಳು

ಬೆಳೆದು ಆರೋಗ್ಯವಾದ ಗಿಡವಾಗುವುದರಲ್ಲಿ ಸಂದೇಹವಿಲ್ಲ.

ನಾಲ್ಕು ಲೀಟರ್ ಸಜೀವ ಮಣ್ಣು, ಒಂದು ಚದುರ ಅಡಿ ನೆಲ ಅಥವಾ ಸೂರ್ಯನ ಬೆಳಕು, ನಾಲ್ಕು ಚದುರ ಅಡಿ ಎಲೆಯ ವ್ಯಾಪ್ತಿ, ದಿನಕ್ಕೆ ಸುಮಾರು ಒಂದು ಲೀಟರ್ ಮಣ್ಣು, 300 ದಿನಗಳಲ್ಲಿ ಒಂದು ಕಿಲೋ ಒಣ ತೂಕದಷ್ಟು ಜೈವಿಕ ದ್ರವ್ಯವನ್ನು ಕೊಡುವುದು. ಇದು ಸಸ್ಯ ಸಂಸಾರದ ನಿಯಮ.

ಪ್ರಯೋಗ ಪರಿವಾರದ ಚಮತ್ಕಾರಗಳು

ದಾಭೋಲ್ಕರ್‌ರವರು ಬೀದಿ ಗುಡಿಸಿದ ಮಣ್ಣು ಮತ್ತು ಪಾರ್ಥೆನಿಯಂ ಗಿಡಗಳನ್ನು ಪಾತಿಗೆ ತುಂಬಿ ಮಹಡಿಯಲ್ಲಿ 20 x 30 ಅಡಿ ಚಪ್ಪರ ಹಾಕಿ ದ್ರಾಕ್ಷಿ ಗಿಡ ಬೆಳೆಸಿ 500 ಗೊಂಚಲು ದ್ರಾಕ್ಷಿ ಬಂದಿತ್ತು.

ಇವರಿಂದ ಮಾಹಿತಿ ಪಡೆದ ಮಹಾರಾಷ್ಟ್ರದ ಖ್ಯಾತ ಸಮಾಜವಾದಿ ಮುಖಂಡ, ಗೋರೆಯವರು ರಸ್ತೆ ಬದಿಯಲ್ಲಿ ಹತ್ತು ಚದುರ ಅಡಿ ಪಾತಿ ಮಾಡಿ ದ್ರಾಕ್ಷಿ ಬಳ್ಳಿಯನ್ನು ಮೂರನೇ ಮಹಡಿ ಚಪ್ಪರಕ್ಕೆ ಬಿಟ್ಟು ಹೇರಳವಾಗಿ ಹಣ್ಣು ಪಡೆದಿದ್ದರು.

ಸಾವಯವ ದ್ರಾಕ್ಷಿ ಬೆಳೆಗಾರರ ಸಂಘಗಳು ಹಲವಾರು ಕೊಲ್ಲಾಪುರ, ನಾಸಿಕ್ ಮುಂತಾದ ಜಿಲ್ಲೆಗಳಲ್ಲಿ ಇವೆ.

ಹೊರಗಿನಿಂದ ತಂದ ಗೊಬ್ಬರ, ಔಷಧಿ ಇಲ್ಲದೆ, ಇವರು ಎಕರೆಗೆ 16 ಟನ್ ದ್ರಾಕ್ಷಿ ಒಂದು ವರ್ಷದಲ್ಲಿ ಬೆಳೆಯುತ್ತಿದ್ದಾರೆ. ಒಂದು ಚದರ ಅಡಿಯಲ್ಲಿ ನಾಲ್ಕು ಲೀಟರ್ ಸಜೀವ ಮಣ್ಣಿನಲ್ಲಿ ನಿಂಬೆ ಗಿಡವೊಂದಕ್ಕೆ 25 ಹಣ್ಣುಗಳು ಬಿಡುತ್ತವೆ.

ಒಂದು ಸೌತೆ ಬಳ್ಳಿಗೆ ಒಬ್ಬರು ಹಲ್ಲು ತೊಳೆವ ನೀರು ಸಾಕು. ದ್ರಾಕ್ಷಿ ಸೌತೆಯಂತಹ ನೀರು ಹೆಚ್ಚಿರುವ ಬೆಳೆಗಳು ಭೂಮಿಯಿಂದ ತೆಗೆದು ಕೊಳ್ಳುವುದು ಬಹಳ ಸ್ವಲ್ಪವೇ. ಎಲ್ಲವನ್ನೂ ಸೂರ್ಯನ ರಶ್ಮಿಯಿಂದ ಉತ್ಪಾದಿಸುತ್ತವೆ.

ಮುನ್ನೂರು ಗ್ರಾಂ ಗೋಧಿ ಬೀಜ ಬಿತ್ತಿ 120 ಚದರ ಅಡಿ ಪಾತಿಯೊಂದಕ್ಕೆ ಮೂರು ಕಿಲೋ ಧಾನ್ಯ ಬೆಳೆದಿದ್ದರು. ಕೊಲ್ಲಾಪುರದ ರೈತನೊಬ್ಬ ಪ್ಲಾಸ್ಟಿಕ್ ಪದರ ಹರಡಿ ಮೇಲೆ ಮಣ್ಣು ಹಾಕಿ ಶೇಂಗಾ ಬೆಳೆದಿದ್ದನು. ಪ್ಲಾಸ್ಟಿಕ್ ಮೇಲೆ ಕಾಯಿಗಳು ಕುಳಿತಿದ್ದು ಘಾಸಿಯಾಗದೇ ಕಾಯಿಗಳನ್ನು ಸುಲಭವಾಗಿ ಕಿತ್ತುಕೊಳ್ಳಲಾಯಿತು. ಎಕರೆಗೆ ನಾಲ್ಕು ಟನ್ ಬೀಜ ಬಂದಿತ್ತು.

ನಿಮ್ಮ ಸಮಸ್ಯೆಗೆ ದಾಭೋಲ್ಕರ್‌ರವರಿಂದ ರೆಡಿಮೇಡ್ ಪರಿಹಾರಗಳು ದೊರೆಯುತ್ತೆ ಎಂದೆಣಿಸಿದರೆ ನಿರಾಶೆಯೇ ನಿಮಗೆ. ಪ್ರತಿಯೊಂದು ಸ್ಥಳ, ಮಣ್ಣು, ನೀರು ಗಿಡಗಳನ್ನು ಅಧ್ಯಯನ ಮಾಡಿ ಪ್ರಯೋಗದ ಮೂಲಕ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕೆನ್ನುವ ಅವರು ಕೆಲವು ಮೂಲಭೂತ ಅಂಶಗಳನ್ನಂತೂ ತಿಳಿಸುತ್ತಾರೆ.

ಯಾವುದಕ್ಕೂ ಜಗ್ಗದ ನಮ್ಮ ನಿಂಬೆ ಗಿಡಗಳ ಹುಳು ಕಾಟಕ್ಕೇನು ಮಾಡಲಿ ಅಂತ ಕೇಳಿದರೆ, ಆ ಹುಳುಗಳನ್ನು ಒಂದು ಪೆಟ್ಟಿಗೆಯಲ್ಲಿ ಸಾಕಿ ಅದರ ಜೀವನ ಚಕ್ರವನ್ನು ತಿಳಿದುಕೊ. ಆಗ ಏನು ಮಾಡಬೇಕು ಅಂತ ತಾನೇ ತಿಳಿಯುವುದು ಎನ್ನುತ್ತಾರೆ.

ತೌಡನ್ನೂ ಪ್ಯಾಕೆಟ್ಟುಗಳಲ್ಲಿ ಹಾಕಿ ಬೆಲ್ಲ ಮತ್ತೊಂದೆರಡು ವಸ್ತು ಬೆರೆಸಿ ನಿಮಗೇ, ದನಕ್ಕೆ ಪೌಷ್ಟಿಕ ಆಹಾರ ಎಂದು ಮಾರಿ ಲಾಭ ಹೊಡೆಯುತ್ತಾರೆ. ಹೊಟ್ಟನ್ನೂ ಉರುವಲಾಗಿಯೋ ಅಥವಾ ಮನೆಗೆ ಇಟ್ಟಿಗೆ, ಮರದ ಹಲಗೆ ಮಾಡಲು ಉಪಯೋಗಿಸಿಕೊಳ್ಳುತ್ತಾರೆ.

ಕಬ್ಬನ್ನು ಇಡಿಯಾಗಿ ಕಾರ್ಖಾನೆಗೆ ಹಾಕಿ ಪೌಷ್ಟಿಕಾಂಶ ಇಂಧನ ಹಾಗೂ ಮಣ್ಣಿಗೆ ಮರಳಿ ಕೊಡಬೇಕಾದ ಜೈವಿಕ ದ್ರವ್ಯ ಎಲ್ಲವನ್ನೂ ಕಳೆದುಕೊಳ್ಳುತ್ತೇವೆ.

ಸಜೀವ ಕೃಷಿ ನಮಗೆ ಅಗತ್ಯವಿರುವ ಅನೇಕ ವಸ್ತುಗಳನ್ನು ಬೆಳೆದುಕೊಂಡು ಮನೆಯವರ ಆಹಾರ, ಆರೋಗ್ಯ ಪೂರೈಕೆಗೆ ಪ್ರಾಧಾನ್ಯ ಕೊಡುವುದು. ಭತ್ತವನ್ನು ಮನೆಯಲ್ಲೇ ಅಕ್ಕಿ ಮಾಡಿ ಪೌಷ್ಟಿಕಾಂಶ ಉಳಿಸಿಕೊಳ್ಳಬಹುದು. ತೆಗೆದ ಸ್ವಲ್ಪ ತೌಡು ಸಹ ಮನೆಯ ಕೋಳಿಗೆ, ಆಕಳಿಗೆ ಆಹಾರವಾಗುವುದು. ಹೊಟ್ಟು ಒಲೆಗೆ ಇಂಧನವಾಗುವುದು.

ಹತ್ತಿ ಬೆಳೆದು ನೀವೇ ನೂತರೆ, ಬೀಜ ದನಕ್ಕೆ, ನೂಲು ನಿಮ್ಮ ವಸ್ತ್ರಕ್ಕೆ. ಇದೆಲ್ಲ ಯಾವುದೋ ರಾಮರಾಜ್ಯದ ಕನಸಲ್ಲ. ಈಗ ಒಂದು ತಲೆಮಾರಿನ ಮೊದಲು, ಮುಖ್ಯವಾಗಿ ಅಣೆಕಟ್ಟು, ನೀರಾವರಿ ಬರದಿದ್ದಾಗ, ರೈತ ಕುಟುಂಬಗಳು ಆರೇಳು ಬೆಳೆಗಳನ್ನು ಬೆಳೆಯುವುದು ಸಾಮಾನ್ಯವಾಗಿತ್ತು. ಧಾನ್ಯ, ಕಾಳು, ಎಣ್ಣೆ ಬೀಜ, ಸಾಂಬಾರ ಪದಾರ್ಥ, ಹತ್ತಿ, ಸೆಣಬು ಇತ್ಯಾದಿ ಬೆಳೆದುಕೊಳ್ಳುತ್ತಿದ್ದರು. ಕನ್ನಂಬಾಡಿ ಕಟ್ಟೆ ಬರುವ ಮುನ್ನ ಆ ಪ್ರದೇಶದಲ್ಲಿ ರಾಗಿ, ಭತ್ತ, ಹೆಸರು, ಉದ್ದು, ಅವರೆ, ಎಳ್ಳು, ಹತ್ತಿ ಬೆಳೆಯುತ್ತಿದ್ದರು. ಜನ ಜಾನುವಾರು ಎಲ್ಲರಿಗೂ ಪೌಷ್ಟಿಕ ಆಹಾರವಿತ್ತು. ಅಲ್ಲಿಯ ಹೆಂಗಸರು ನೂಲುವುದು, ನೇಯುವುದು ಬಣ್ಣ ಹಾಕುವುದು ಎಲ್ಲ ಮಾಡುತ್ತಿದ್ದರು.

ಹಿತ್ತಲಗಿಡದ ಕುಟುಂಬ

- **Honey Bee** - ಇಂಗ್ಲೀಷ್
- **Nam Vazhi Velanmai** - ತಮಿಳು
- **Lokasarvani** - ಗುಜರಾತಿ
- **Dzongkha Honey Bee** - ಭೂತಾನಿ
- **Thenetiga** - ತೆಲುಗು
- **Sujh Bujh** - ಹಿಂದಿ
- **Khoj Bhal** - ಪಂಜಾಬಿ

ರೈತರ ಜ್ಞಾನ ಆಧಾರಿತವಾದ ಜೈವಿಕ ತಂತ್ರಜ್ಞಾನ

(BIOTECHNOLOGY - BUILDING ON FARMERS' KNOWLEDGE)

ಪ್ರಕಾಶಕರು : ಮ್ಯಾಕ್‌ಮಿಲಾನ್ ಎಜುಕೇಶನ್ ಲಿಮಿಟೆಡ್, ಲಂಡನ್, ಬೆಲೆ ರೂ.120/- ಪುಸ್ತಕ ಪರಿಚಯ : ತೇಜಸ್ವಿನಿ

1992 ರಲ್ಲಿ ನೆದರಲ್ಯಾಂಡ್‌ನ ETC ಸಂಸ್ಥೆ ಹಳ್ಳಿಗಾಡಿನ ಜನತೆಯಲ್ಲಿ ಬಳಕೆಯಲ್ಲಿರುವ ಜೈವಿಕ ತಂತ್ರಜ್ಞಾನದ ಕುರಿತಾಗಿ ಅಂತರಾಷ್ಟ್ರೀಯ ಸ್ಪರ್ಧೆಯೊಂದನ್ನು ಏರ್ಪಡಿಸಿತು. ಸುಮಾರು 40 ಪ್ರಬಂಧಗಳು ಸ್ಪರ್ಧೆಗೆ ಬಂದಿದ್ದವು ಈ ಪ್ರಬಂಧಗಳನ್ನು ಮೂಲಾಧಾರವಾಗಿಟ್ಟುಕೊಂಡು ಇತರ ವೈಜ್ಞಾನಿಕ ಹಾಗೂ ಸಾಮಾಜಿಕ, ರಾಜಕೀಯ ಪ್ರಶ್ನೆಗಳನ್ನು ಮೇಲೆತ್ತುವ ಲೇಖನಗಳನ್ನೊಳಗೊಂಡ ಪುಸ್ತಕ ಇದು.

ಭಾರತ, ಥೈಲ್ಯಾಂಡ್, ಫಿಲಿಫೈನ್ಸ್ ಮುಂತಾದ ಏಷ್ಯಾದ ರಾಷ್ಟ್ರಗಳು ಸೈಬೇರಿಯಾ, ಕೋಸ್ಟಾರಿಕಾ ನಿಕಾರಾಗುವ ಮುಂತಾದ ಆಫ್ರಿಕಾದ ದೇಶಗಳ ಹಾಗೆಯೇ ದಕ್ಷಿಣ ಅಮೇರಿಕಾದ ಬ್ರೆಜಿಲ್, ಲ್ಯಾಟಿನ್ ಅಮೇರಿಕಾ ಇತ್ಯಾದಿ ದೇಶಗಳ ಬೇರೆ ಬೇರೆ ಪದ್ಧತಿಗಳೂ, ಉದಾಹರಣೆಗಳೂ ಹೇರಳವಾಗಿ ತುಂಬಿರುವ ಈ ಪುಸ್ತಕ ರೈತರಿಗೂ, ಸಂಶೋಧಕರಿಗೂ ಬೇರೆ ಬೇರೆ ರೀತಿಯಲ್ಲಿ ಉಪಯೋಗವಾಗ ಬಲ್ಲಂತಹುದು.

ಮೊದಲನೆಯ ವಿಭಾಗದ ನಾಟಿ ತಂತ್ರಜ್ಞಾನ ಮುಖ್ಯವಾಗಿ 4 ಅಂಶಗಳನ್ನು ಒಳಗೊಂಡಿದೆ.

✵ ಪ್ರಾಣಿಗಳ ಆರೋಗ್ಯ : ಸ್ಪಷ್ಟವಾದ ಕಾರಣಗಳ ಅರಿವಿಲ್ಲದಿದ್ದರೂ ಅಥವಾ ಸೂಕ್ಷ್ಮ ಪರಿಣತೆ ಇಲ್ಲದೇ ಹೋದರೂ ಹಳ್ಳಿಗಾಡಿನ ಜನರಲ್ಲಿ ಬಳಕೆಯಲ್ಲಿದ್ದ ಪದ್ಧತಿಗಳು ವ್ಯಾಕ್ಸಿನೇಷನ್‌ನಂತಹ ಮೂಲ ತತ್ವಗಳ ಆಧಾರ ಹೊಂದಿದ್ದು ಸ್ಪಷ್ಟವಾಗಿ ಗೋಚರವಾಗುತ್ತದೆ. ಕಾಯಿಲೆಯಾದ ಪ್ರಾಣಿಗಳ ರಕ್ತವನ್ನು ಆರೋಗ್ಯ ಪ್ರಾಣಿಗಳ ದೇಹಕ್ಕೆ ಚುಚ್ಚುವುದು, ಹಾಗೇ ಕಾಯಿಲೆಯ ಪ್ರಾಣಿಗಳನ್ನು ಆರೋಗ್ಯವಂತ ಪ್ರಾಣಿ ಮಂದೆಯ ನಡುವೆ ಬಿಡುವುದು ಇವೆಲ್ಲಾ ಪ್ರಾಣಿಗಳ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಅಭಿವೃದ್ಧಿಗೊಳಿಸುವ ಮೂಲ ಉದ್ದೇಶ ಹೊಂದಿದವುಗಳು.

✵ ಜೈವಿಕ ಕೀಟನಾಶಕಗಳು : ಈ ಲೇಖನದಲ್ಲಿನ ವಿವಿಧ ಗಿಡಗಳು ಅವುಗಳ ಯಾವ ಭಾಗ ಯಾವ ಕೀಟಗಳ ನಾಶಕ್ಕಾಗಿ ಉಪಯೋಗಿಸಬಹುದೆಂಬ ಪಟ್ಟಿ ಹೊಂದಿದ್ದು ರೈತರಿಗೆ ನೇರವಾಗಿ ಉಪಯೋಗವಾಗುವಂತಹದ್ದು.

✵ ಆಹಾರ ಸಂಸ್ಕರಣೆ : ಮೊಸರು ಮಾಡುವ ತಂತ್ರಜ್ಞಾನ ಮನೆ ಮನೆಯಲ್ಲೂ ಬಳಕೆಯಲ್ಲಿರುವ ನಮ್ಮ ದೇಶದಂತೆ ಬೇರೆ ಬೇರೆ ದೇಶಗಳು ತಮ್ಮದೇ ಆದ ಆಹಾರವಸ್ತುಗಳನ್ನು ತಯಾರಿಸುವ ವಿಧಾನಗಳಿವೆ. ಇಡ್ಲಿ, ದೋಸೆ ಮಾಡುವಾಗ ಹುದುಗು ಬರಿಸಿ ಆಹಾರದ ಪೌಷ್ಟಿಕಾಂಶವನ್ನು ನಮ್ಮಲ್ಲಿ ಹೆಚ್ಚಿಸುವಂತೆ ಇತರ ದೇಶಗಳಲ್ಲೂ ಅದರಲ್ಲೂ ಮುಖ್ಯವಾಗಿ ಆಫ್ರಿಕಾದಲ್ಲಿನ ವಿವಿಧ ಅಡುಗೆಗಳು ಅವುಗಳ ಹಿನ್ನೆಲೆಯಾಗಿರುವ ಜೈವಿಕ ತಂತ್ರಜ್ಞಾನ ವಿವರಿಸಲಾಗಿದೆ. ಹಾಗೇ ವಿವಿಧ ಧಾನ್ಯ, ಗೆಡ್ಡೆ-ಗೆಣಸು, ತರಕಾರಿ, ಹಣ್ಣು ಹಂಪಲುಗಳನ್ನು ಹಾಳಾಗದಂತೆ ರಕ್ಷಿಸಿಡುವ ನಾಟೀ ತಂತ್ರಜ್ಞಾನದ ವಿವರಣೆಯೂ ಇದೆ.

✵ ಬೆಳೆ ವೈವಿಧ್ಯತೆ ಹಾಗೂ ಸಂಪನ್ನತೆ ಕುರಿತಾದ ಲೇಖನ ಸ್ಥಳೀಯ ಜನರಿಗೆ ಇರುವ ಬೆಳೆಗಳ ಪರಿಚಯ, ಸ್ಥಳೀಯ ತಳಿಗಳಲ್ಲಿನ ಉತ್ತಮ ಗುಣಗಳು ಅವುಗಳನ್ನು ಉಳಿಸಿಕೊಳ್ಳುವ ಅಗತ್ಯದ ಜೊತೆಗೆ ತಳಿ ಅಭಿವೃದ್ಧಿಯಲ್ಲಿ ರೈತರು ಪಾಲುಗೊಂಡರೆ ಆಗಬಹುದಾದ ಲಾಭದ ಕುರಿತ ಅಂಶವನ್ನೊಳಗೊಂಡಿದೆ. ಉದಾಹರಣೆಗೆ ಫಿಲಿಪೈನ್ಸ್‌ನ ರೈತನೊಬ್ಬ ಅಂತರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆಯ ಒಂದು ಭತ್ತದ ತಳಿಯನ್ನು ಬೆಳೆಯುವಾಗ ಕಂಡ ಅಪರೂಪದ ಸಸಿಯನ್ನು ಬೇರ್ಪಡಿಸಿ, ಅದರಲ್ಲಿ ಅಧಿಕ ಇಳುವರಿ ಪಡೆದದ್ದೂ, ಅದೇ ಈಗ 'ಬಂಡೋರಗ' ಎಂಬ ಹೆಸರಿನಿಂದ ಅಲ್ಲಿನ ರೈತರಲ್ಲಿ ಸಾಕಷ್ಟು ಬಳಕೆಯಲ್ಲಿರುವ ವಿಷಯ ಕುತೂಹಲಕರವಾಗಿ ಮೂಡಿ ಬಂದಿದೆ.

✵ ಜೈವಿಕ ತಂತ್ರಜ್ಞಾನ : ಯಾವುದೇ ಇತರ ವೈಜ್ಞಾನಿಕ ಪುಸ್ತಕಗಳಲ್ಲಿರುವಂತೆ ಜೈವಿಕ ತಂತ್ರಜ್ಞಾನದಲ್ಲಿ ಒಳಗೊಂಡಿರುವ ಪ್ರತಿಯೊಂದೂ ತಂತ್ರಜ್ಞಾನ, ಉದಾಹರಣೆಗೆ ಅಂಗಾಂಶ ಕೃಷಿ ಗುಣಾಣು (Gene) ಗಳನ್ನು ಗುರುತಿಸುವ ಪ್ರಯೋಗಾಲಯದ (RFLP) ಪದ್ಧತಿಗಳು ಇತ್ಯಾದಿ ಅವುಗಳಿಂದಾಗುವ ಉಪಯೋಗವನ್ನು ಉದಾಹರಣೆಗಳ ಸಮೇತ ವಿವರಿಸಲಾಗಿದೆ.

ಖಾಸಗಿ ಕಂಪೆನಿಗಳು ಹೊಸ ವೈಜ್ಞಾನಿಕ ಆವಿಷ್ಕಾರಗಳನ್ನು ಬಳಸುವಾಗ ಸಾಮಾನ್ಯ ರೈತರ ಹಿತಾಸಕ್ತಿಗಳನ್ನು ಕಡೆಗಣಿಸುವ ಸಾಧ್ಯಾಸಾಧ್ಯತೆ ಹಾಗಾಗಿ ಸಾರ್ವಜನಿಕ ಹಾಗೂ ಸರಕಾರಿ ವಲಯದ ಸಂಸ್ಥೆಗಳು ಈ ನಿಟ್ಟಿನಲ್ಲಿ ಗಮನ ಹರಿಸಬೇಕಾದ ಅಗತ್ಯದ ಕುರಿತು ಬೆಳಕು ಹರಿಸಿದೆ. ಉದಾಹರಣೆಗೆ ಪ್ರತೀಸಲವೂ ರೈತ ಬೀಜ ಬೇಡಿಕೊಂಡು ಬರಬೇಕಾದ ಅಗತ್ಯ ಹುಟ್ಟಿಸುವ ಹೈಬ್ರಿಡ್

ತಳಿಗಳು ಖಾಸಗಿ ಕಂಪೆನಿಗಳ ಉದ್ದೇಶವಾದರೆ, ಅದೇ ಹೈಬ್ರಿಡ್ ತಳಿಗಳಲ್ಲಿ ಮತ್ತೆ ಮತ್ತೆ ಒಂದೇ ಗುಣಮಟ್ಟದ ಬಿತ್ತನೆ ಬೀಜ ಉತ್ಪಾದಿಸುವ ಶಕ್ತಿ ಅಳವಡಿಸುವ ತಂತ್ರಜ್ಞಾನ ಬಲಪಡಿಸುವ ಸಾಧ್ಯತೆಯತ್ತ ಸರಕಾರಿ ಸಂಶೋಧನಾವಲಯಗಳು ಪ್ರಯತ್ನಿಸಬಹುದು. ಹಾಗೆಯೇ ಹೊಸ ಹೊಸ ರಾಸಾಯನಿಕ ಔಷಧಿಗಳನ್ನು ಹುಟ್ಟು ಹಾಕುವ ಖಾಸಗಿ ಕಂಪೆನಿಗಳಿಗೆ ವ್ಯತಿರಿಕ್ತವಾಗಿ ಜೈವಿಕ ಕೀಟ ಹತೋಟಿಗೆ ಸರ್ಕಾರಿ ಸಂಶೋಧನಾ ವಲಯಗಳ ಪ್ರಯತ್ನ ಇತ್ಯಾದಿ ವಿವರವಿದೆ. ಹೊಸದನ್ನು ಹುಟ್ಟಿಸುವ ಸಂಶೋಧನೆಗಳು ಹಳೆಯದನ್ನು ಮೂಲೆಗುಂಪಾಗಿಸುವುದರಿಂದಾಗುವ ಏರುಪೇರುಗಳ ಉದಾಹರಣೆಗೆ ಜಪಾನಿನ ಸಂಶೋಧನೆಯೊಂದನ್ನು ಬಳಸಿ, ಕೋಕೋಕೋಲಾ ಹಾಗೂ ಪೆಪ್ಸಿ ಕಂಪೆನಿಗಳು ಸಕ್ಕರೆ ಬಳಸುವುದನ್ನೇ ನಿಲ್ಲಿಸಿದ್ದು, ಸಿಹಿಯನ್ನು ನೇರವಾಗಿ ಯಾವುದೇ ಪಿಷ್ಟಪದಾರ್ಥದಿಂದ ಉತ್ಪಾದಿಸಬಲ್ಲ ಅಣುಜೀವಿಯೊಂದನ್ನು ಬಳಸಲು ಆರಂಭಿಸಿದಾಗ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆಯ ಬೆಲೆ ಇಳಿದದ್ದು, ಸಕ್ಕರೆಗಾಗಿಯೇ ಕಬ್ಬನ್ನು ಬೆಳೆಸುತ್ತಿದ್ದ ರೈತರಿನಿಗೆ ಬಿದ್ದ ಪೆಟ್ಟು ಇವು ನಮ್ಮಂತಹ ದೇಶಗಳು ಮುನ್ನೆಚ್ಚರಿಕೆ ವಹಿಸಬೇಕಾದ ವಿಷಯಗಳು.

ರಾಜಕೀಯ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಬರೆದ ಲೇಖನವೊಂದರಲ್ಲಿ ಬೌದ್ಧಿಕ ಸನ್ನದಿನ ಹಕ್ಕು, ಇದರಲ್ಲಿ ಬಡರೈತನಿಗೆ ದೊರಕಬೇಕಾದ ಪಾಲು, ಅದನ್ನು ಒದಗಿಸುವುದರಲ್ಲಿ ಇರುವ ಅಡಚಣೆಗಳು ಇತ್ಯಾದಿ ವಿವರವಿದೆ. ಕೋಸ್ಟಾರಿಕಾದ ಒಂದು ಸರ್ಕಾರೇತರ ಸಂಸ್ಥೆ ಪಾಶ್ಚಿಮಾತ್ಯ ದೇಶವೊಂದರ ಖಾಸಗಿ ಕಂಪೆನಿಗೆ ಸ್ಥಳೀಯ ಜ್ಞಾನವನ್ನು ಮಾರುವುದಕ್ಕಾಗಿ ಮಾಡಿಕೊಂಡಿರುವ ಒಪ್ಪಂದವನ್ನು ಗಮನಿಸಿದರೆ, ಈ ನಿಟ್ಟಿನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ನಡೆಯಬೇಕಾದ ಅಗತ್ಯತೆ ಎದ್ದು ಕಾಣುತ್ತದೆ.

ಇವೆಲ್ಲವನ್ನು ಓದುವಾಗ ಅನ್ನಿಸುವುದಿಷ್ಟೇ: ಭಾರತವೂ ಸೇರಿದಂತೆ ಈ ಎಲ್ಲಾ ತೃತೀಯ ಜಗತ್ತಿನ ದೇಶಗಳಲ್ಲಿ, ಸ್ಥಳೀಯ ಜ್ಞಾನ ಸಂಪತ್ತು, ಅದಕ್ಕೆ ಪೂರಕವಾದ ಸಸ್ಯ ಸಂಪತ್ತೂ ಹೇರಳವಾಗಿದೆ. ಪಾಶ್ಚಿಮಾತ್ಯರು ಬಂದು ಇದನ್ನೂ ಕೊಳ್ಳೆ ಹೊಡೆಯುವ ಮುನ್ನ ನಾವು ಜಾಗರೂಕರಾಗಬೇಕಾಗಿದೆ. ಅವರು ನಮ್ಮ ಜ್ಞಾನವನ್ನು ಬಾಚಿ ನಮಗೇ ಮಾರದಂತೆ ನಾವು ಜಾಣರಾಗಬೇಕು.

ಪುಸ್ತಕದ ಕೊನೆಯ ವಿಭಾಗ ರೈತರು ಹಾಗೂ ಸಂಶೋಧಕರು ಒಟ್ಟಾಗಿ, ಪರಸ್ಪರ ಪೂರಕವಾಗಿ ಮಾಡಬಹುದಾದ್ದ ಸಂಶೋಧನೆಗಳ ಕುರಿತಾಗಿದೆ. ಇದರ ಮುಖ್ಯ ಅಂಶಗಳು ಎರಡು. ಒಂದು ರೈತರ ಅಗತ್ಯವನ್ನು ಗುರುತಿಸಿ ಸಂಶೋಧನೆ ನಡೆಸುವುದು. ಎರಡನೆಯದಾಗಿ ಸಂಶೋಧನೆಗಳ ಫಲಿತಾಂಶವನ್ನು ಮೌಲ್ಯಮಾಪನ ಮಾಡುವವರು ರೈತರು, ಇದರ ಪ್ರಕಾರ ಸಂಶೋಧನೆ ಹಂತಹಂತವಾಗಿ ನಡೆಯಬೇಕಾದ ಕೆಲಸ. ಮೊದಲನೆಯ ಹಂತದಲ್ಲಿ ಸಂಶೋಧಕರು ರೈತರ ನಡುವೆ ಸೇರಿ, ಅವರೊಡನೆ ಒಟ್ಟಾಗಿ ಅವರು ಅನುಸರಿಸುತ್ತಿರುವ ಪದ್ಧತಿಗಳ ಮೌಲ್ಯ ಅಧಿಕಗೊಳಿಸುವ ಸಾಧ್ಯತೆಯನ್ನು ಪರಿಶೀಲಿಸುವುದು. ಎರಡನೆಯ ಹಂತದಲ್ಲಿ ಸಂಶೋಧನೆ ರೈತರೊಡಗೂಡಿ ಅಥವಾ ಪ್ರಯೋಗಾಲಯದಲ್ಲಿ ನಡೆಸುವುದು. ಮೂರನೆಯ ಹಂತದಲ್ಲಿ ಸಂಶೋಧನೆಯ ಫಲಿತಾಂಶವನ್ನು ರೈತರು ಬಳಸುವಾಗ ಕಂಡು ಬರುವ ನ್ಯೂನತೆಗಳನ್ನು ಗುರುತಿಸುವುದು. ನಾಲ್ಕನೆಯ ಹಂತ ನ್ಯೂನತೆಗಳನ್ನು ತಿದ್ದುವುದು. ಈ 3-4 ನೆಯ ಹಂತಗಳು ಮತ್ತೆ ಮತ್ತೆ ನಡೆಯಬೇಕಾದ ಕೆಲಸ.

ಸುರಾಪಾಲನ ವೃಕ್ಷಾಯುರ್ವೇದ

ಮಡಕೆಯಷ್ಟು ದೊಡ್ಡ ತೆಂಗಿನಕಾಯಿ ಬೇಕೆ? ಕಲ್ಪವೃಕ್ಷ 'ಇಲ್ಲ' ಎನ್ನದು. ಬಾರ್ಲಿ ಅಥವಾ ಅದರ ಹೊಟ್ಟು ಮತ್ತು ಉದ್ದನ್ನು ಪುಡಿ ಮಾಡಿ ಉಪ್ಪು ನೀರಿನಲ್ಲಿ ಬೇಯಿಸಿ, ಆರಿಸಿ ಬುಡಕ್ಕೆ ಹಾಕಿ, ನೀರನ್ನು ಯಥೇಚ್ಛವಾಗಿ ಕೊಟ್ಟು ನೋಡಿ.!

ಸಾವಯವದ ಸತ್ವ ಹೀರಿ ಬೆಳೆದ ಕೃಷಿ ಉತ್ಪನ್ನಗಳಿಗಿಂದು ಭಾರೀ ಬೇಡಿಕೆ. ಡಾಲರ್ ಬೆಳೆ ದ್ರಾಕ್ಷಿ ಹೆಚ್ಚು ನಿರವಯವ ಬೇಡುವ ಕೃಷಿ. ಕಡಿಮೆ ಖರ್ಚಿನಲ್ಲಿ ಉತ್ಪನ್ನದ ಗುಣಮಟ್ಟ ಹೆಚ್ಚಿಸಲು ಬುಡಕ್ಕೆ ಕೋಳಿಗೊಬ್ಬರ ಹಾಕಿ ಮೀನಿನ ಕೊಬ್ಬಿನ ಅಂಶವಿರುವ ನೀರನ್ನು ಸಿಂಪರಣೆ ಮಾಡಿ ನೋಡಿ.

ತಂಗಳು ಅಕ್ಕಿ ಗಂಜಿಯ ನೀರು ಅಥವಾ ಸುಣ್ಣದ ತಿಳಿ ನೀರನ್ನು ಕುಂಬಳದ ಬಳ್ಳಿಗೆ ಸಿಂಪಡಿಸಿದರೆ ಒಳ್ಳೆಯ ಫಲ. ಹೊಲದಿಂದ ಗರಿಕೆ ಅಳಿಸಲು ಪರದಾಡುತ್ತಿದ್ದೀರಾ? ಗರಿಕೆ ಹೊಲಕ್ಕೆ ಸೆಣಬು ಬಿತ್ತಿ ನೋಡಿ. ಅದು ಉತ್ತಮ ಹಸಿರೆಲೆ ಗೊಬ್ಬರವೂ ಹೌದು. ಸಿಹಿಯಾದ ದೊಡ್ಡ ದಾಳಿಂಬೆ ಹಣ್ಣು ಎಲ್ಲರಿಗೂ ಇಷ್ಟ ತಾನೆ ? ಗಿಡದ ಬುಡಕ್ಕೆ ಎರೆಹುಳುಗಳನ್ನು ಅದ್ದಿದ ಹಾಲು ಮತ್ತು ಮೀನಿನ ಕೊಬ್ಬಿನ ಅಂಶವಿರುವ ನೀರನ್ನು ಹಾಕಿ. ಈ ವಿವರಗಳು ವರಹ ಮಿಹಿರ ಮತ್ತು ಚಾವುಂಡರಾಯರಿಗಿಂತ ಪ್ರಾಚೀನ ಸುರಪಾಲನಾ ವೃಕ್ಷಾಯುರ್ವೇದದಲ್ಲಿ ಉಲ್ಲೇಖವಾಗಿದೆ.

ವಾಸುದೇವ, ಅದಮಾರು

ತಲೆನೋವು ನಿವಾರಣೆಗೆ

(ಅ) ಹಣೆಯ ಮಧ್ಯದಲ್ಲಿ ನೋವು

♣ ಅರ್ಧ ಚಮಚ ಶುಂಠಿಯನ್ನು ಪುಡಿಮಾಡಿ ನೀರಿನ ಜೊತೆ ಬೆರೆಸಿ ಕುದಿಸಿ ಲೇಹ್ಯ ತಯಾರಿಸಬೇಕು. ತೊಂದರೆಗೆ ತುತ್ತಾದ ಭಾಗದ ಮೇಲೆ ಬೇಕಾದಾಗಲೆಲ್ಲ ಲೇಪಿಸಬೇಕು.

♣ ಕರಿಮೆಣಸು ಹಣ್ಣುಗಳು, ಪಿಪ್ಪಲೀ ಹಣ್ಣುಗಳು ಮತ್ತು ಶುಂಠಿ ಪ್ರತೀ ದ್ರವ್ಯವನ್ನು ಹದಿನೈದು ಗ್ರಾಂನಷ್ಟು ತೆಗೆದುಕೊಂಡು ಪುಡಿ ಮಾಡಿ ಒಂದು ಚಮಚ ಪುಡಿಯನ್ನು ಜೇನು ತುಪ್ಪದ ಜೊತೆ ಬೆರೆಸಿ ದಿನಕ್ಕೆ ಮೂರು ಸಲ, ಮೂರರಿಂದ ನಾಲ್ಕು ದಿನಗಳು ಸೇವಿಸಬೇಕು. *(ಮೊಸರು, ಕರಿದ ಪದಾರ್ಥಗಳು, ತಣ್ಣನೆಯ ಪದಾರ್ಥಗಳು, ಥಂಡಿಗೆ ಮೈ ಒಡ್ಡುವುದು ವರ್ಜ್ಯ.)*

(ಆ) ಶಂಖ ಪ್ರದೇಶದಲ್ಲಿ ನೋವು

♣ ಧನಿಯಾ ಮತ್ತು ಜೀರಿಗೆ ಒಣ ಬೀಜಗಳನ್ನು ಅರ್ಧ ಚಮಚದಷ್ಟು ತೆಗೆದುಕೊಂಡು ಸಾಕಷ್ಟು ನೀರಿಗೆ ಹಾಕಿ ಕುದಿಸಿ ಕಷಾಯ ತಯಾರಿಸಬೇಕು. ಈ ಕಷಾಯವನ್ನು ದಿನಕ್ಕೆರಡು ಸಲದಂತೆ ಮೂರರಿಂದ ನಾಲ್ಕು ದಿನಗಳ ಕಾಲ ಕುಡಿಯಬೇಕು.

♣ ಲಾವಂಚ *(Vetiveria zizanioides)* ದ ಬೇರುಗಳನ್ನು ಚೆನ್ನಾಗಿ ಅರೆದು ಪುಡಿಮಾಡಬೇಕು. ಅರ್ಧ ಚಮಚ ಪುಡಿಯನ್ನು ನೀರಿನ ಜೊತೆ ಬೆರೆಸಿ ತಯಾರಿಸಿದ ಲೇಹ್ಯವನ್ನು ಶಂಖ ಪ್ರದೇಶಕ್ಕೆ ಹಚ್ಚಬೇಕು. *(ಅತಿ ಬಿಸಿ, ಮಸಾಲೆ ಖಾರ ಪದಾರ್ಥಗಳ ಸೇವನೆ ಮತ್ತು ಬಿಸಿಲಿಗೆ ಮೈ ಒಡ್ಡುವುದು ಸಲ್ಲದು.)*

(ಇ) ತಲೆಯ ಹಿಂಭಾಗದಲ್ಲಿ ನೋವು

♣ ಅಳಲೆ ಮರ *(Terminalia chebula)* ದ ಹಣ್ಣಿನ ಸಿಪ್ಪೆಯನ್ನು ಪುಡಿ ಮಾಡಬೇಕು. ಅರ್ಧ ಚಮಚ ಪುಡಿಯನ್ನು ನೀರಿನ ಜೊತೆ ಬೆರೆಸಿ ಲೇಹ್ಯ ತಯಾರಿಸಬೇಕು. ಒಂದು ಚಮಚ ಪುಡಿಯನ್ನು ಬಿಸಿ ಹಾಲು ಅಥವಾ ನೀರಿನಲ್ಲಿ ಬೆರೆಸಿ ರಾತ್ರಿ ಮಲಗುವ ಮುನ್ನ ಕುಡಿಯಬೇಕು.

♣ ಲೋಳೆಸರ *(Aloe barbadensis)* ದ ಎಲೆಗಳನ್ನು ಒಣಗಿಸಿ ಪುಡಿ ಮಾಡಬೇಕು. ಎರಡು ಚಿಟಿಕೆ ಪುಡಿಯನ್ನು, ಎರಡು ಚಿಟಿಕೆ ಅರಿಶಿನ ಪುಡಿ ಜೊತೆ ಬೆರೆಸಿ ಕಾಲು ಬಟ್ಟಲು ನೀರಿನ ಜೊತೆ ಸೇರಿಸಿ ಕುಡಿಯಬೇಕು.

(ಈ) ನಿರಂತರ ತಲೆಶೂಲೆ

ಅಶ್ವಗಂಧ *(Withania samnifera)* ಹಿರೆ ಮದ್ದಿನ ಗಿಡದ ಬೇರುಗಳನ್ನು ಒಣಗಿಸಿ ಪುಡಿ ಮಾಡಬೇಕು. ಐದು ಗ್ರಾಂ ಪುಡಿಗೆ ಅರ್ಧ ಲೋಟ ಉಗುರು ಬಿಸಿಯಾದ ಹಾಲನ್ನು ಬೆರೆಸಿ ಏಳರಿಂದ ನಲವತ್ತೆರಡು ದಿನಗಳ ಕಾಲ ಸೇವಿಸಬೇಕು.

ಅಶ್ವಗಂಧ ಸಸ್ಯವನ್ನು ಚೆನ್ನಾಗಿ ಅರೆದು ರಸ ತೆಗೆಯಬೇಕು. ಎರಡು ಲೋಟ ರಸವನ್ನು ಒಂದು ಲೋಟ ಹರಳೆಣ್ಣೆ ಮತ್ತು ಮೂರು ಲೋಟ ನೀರಿನ ಜೊತೆ ಬೆರೆಸಿ ಕುದಿಸಿ, ನೀರನ್ನು ಆವಿಯಾಗಿಸಿ, ಉಳಿದ ಎಣ್ಣೆಯ ಮಿಶ್ರಣವನ್ನು ಏಳರಿಂದ ಹತ್ತು ದಿನಗಳವರೆಗೆ ರಾತ್ರಿ ಹೊತ್ತು ತಲೆಗೆ ಚೆನ್ನಾಗಿ ತಿಕ್ಕಬೇಕು. *(ಮೇಲೆ ಹೇಳಿದ ಮುನ್ನೆಚ್ಚರಿಕೆಗಳನ್ನು ಪಾಲನೆ ಮಾಡಿದ ಬಳಿಕ ನೀರು ಕುಡಿಯಬಾರದು.)*

ಕೃಪೆ : "ಪ್ರಾಥಮಿಕ ಆರೋಗ್ಯ ಪಾಲನೆಗೆ ಔಷಧೀಯ ಸಸ್ಯಗಳನ್ನು ಬಳಕೆದಾರನ ಮಾರ್ಗದರ್ಶಿ". ಸ್ಥಳೀಯ ಆರೋಗ್ಯ ಪರಂಪರೆಗಳ ಪುನರುತ್ಥಾನ ಪ್ರತಿಷ್ಠಾನ (FRLHT) ಬೆಂಗಳೂರು.

ಆಧುನಿಕ ಕೃಷಿ

ಪಿ. ಲಂಕೇಶರ ಅನುಭವ

ಬೆಂಗಳೂರು ಸಮೀಪದ ಹತ್ತು ಎಕರೆ ತೋಟದಲ್ಲಿ ನನ್ನ ಹತ್ತಾರು ಪ್ರಯೋಗಗಳು ಶುರುವಾದವು. ಇಂಡೋ ಅಮೆರಿಕನ್ ಹೈಬ್ರಿಡ್ ಸಂಸ್ಥೆ ಹೊಸ ಹೊಸ ಬೀಜಗಳನ್ನು ಮಾಡುವುದರಲ್ಲಿ ಹೆಸರುವಾಸಿಯಾಗಿತ್ತು. ಬೆಂಗಳೂರಲ್ಲೇ ಇರುವ ಈ ಹೈಬ್ರಿಡ್ ಸಂಸ್ಥೆಯಿಂದ ಟೊಮ್ಯಾಟೋ ಬೀಜಗಳನ್ನು ತಂದು ಅವನ್ನೂ ಊರಿದೆವು. ಅವು ಸರಿಯಾಗಿ ಬೆಳೆಯಬೇಕಾದರೆ ಅನುಸರಿಸಬೇಕಾದ ನಿಯಮಗಳನ್ನೆಲ್ಲಾ ಅನುಸರಿಸಿದೆವು. ಆದರೆ ಈ ಬೀಜಗಳು ಕೂಡ ಬೀಜ ಮಾಡಿದವರಿಗೆ ಮಾತ್ರ ಲಾಭದಾಯಕ ಎನ್ನುವುದು ತಿಳಿಯಿತು. ಯಾಕೆಂದರೆ ಔಷಧಿ ಹೊಡೆಯುವುದು ಒಂದೆರಡು ಗಂಟೆ ತಡವಾದರೂ ಬಿಟ್ಟಿದ್ದ ನೂರಾರು ಟೊಮ್ಯಾಟೋ ಕಾಯಿಗಳು ಕೊಳೆತು ಉದುರಿ ಹೋಗುತ್ತಿದ್ದವು. ಈ ಹೈಬ್ರಿಡ್ ಗಿಡಗಳನ್ನು ನೋಡಿಕೊಳ್ಳುವುದು ಬ್ರಹ್ಮನಿಂದಲೂ ಸಾಧ್ಯವಿಲ್ಲ ಅನ್ನಿಸಿತು.

ಆದರೆ ನಾವು ತೋಟ ಆರಂಭಿಸಿದಾಗ ಎಲ್ಲಿಂದಲೋ ಬಂದುಬಿಟ್ಟಿದ್ದ ನಾಟಿ ಟೊಮ್ಯಾಟೋ ಬೀಜಗಳು ಗಟ್ಟಿಯಾಗಿ ಬೆಳೆದು ಕಾಯಿಬಿಟ್ಟವು. ಕುಂಬಳ ಕಾಯಿಯೂ ಅಷ್ಟೇ ಅದೆಲ್ಲಿಂದ ಬೀಜಗಳು ಒಂದು ಬಿದ್ದವೋ, ನಮ್ಮ ತೋಟ ಗಿಡಗಳಿಂದ ತುಂಬಿರದೆ ಇದ್ದ ಮೊದಲ ವರ್ಷ ಬಿಸಿಲು ಇದ್ದಲ್ಲೆಲ್ಲಾ ಬೂದು ಗುಂಬಳ ಕಾಯಿಗಳು ಬಿಟ್ಟವು, ಅದೂ ಹೇಗೆ ತಕ್ಕೆ ತುಂಬುವಷ್ಟು ಗಾತ್ರ. ಕ್ರಮೇಣ ಗಿಡಮರಗಳು ಜಾಸ್ತಿಯಾಗಿ ಬಿಸಿಲು ಕಮ್ಮಿಯಾದಂತೆ ಈ ಅತಿಥಿ ಬೀಜಗಳು ಬರುವುದೂ, ಬಳ್ಳಿಯಾಗಿ ಬೆಳೆಯುವುದೂ ನಿಂತಿತು.

ಇವೆಲ್ಲದರಿಂದ, ಕ್ರಮೇಣ ಡೇರಿ, ಮೊಲಸಾಕಣೆ ಮುಂತಾದ್ದರಿಂದ ಹಿಂಜರಿದು ಮೌನವಾಗತೊಡಗಿದೆ.

ಒಂದು ಹಿಂದುಳಿದ ದೇಶದಲ್ಲಿ ಹೊಸ ಕೃಷಿ, ವೈಜ್ಞಾನಿಕ ಡೇರಿ ಎಲ್ಲವೂ ಹೇಗೆ ಕಷ್ಟವಾಗುತ್ತದೆ ಎಂದು ಚಿಂತಿಸ ತೊಡಗಿದೆ. ಇಪ್ಪತ್ತನೇ ಶತಮಾನದ ಕ್ರಿಯಾಶೀಲತೆಯ ವಿವರಗಳನ್ನು ಎದುರಿಸದಿದ್ದರೆ ನಮ್ಮ ಸಣ್ಣಪುಟ್ಟ ಕ್ರಿಯೆಗಳಲ್ಲಿ ಬರೀ ಹುಂಬತನ ವಾಗಬಹುದು ಅನ್ನಿಸತೊಡಗಿತ್ತು.

ಕೃಪೆ: ಪಿ.ಲಂಕೇಶ್‌ರ "ಹುಳಿಮಾವಿನ ಮರ"
- ಒಂದು ಆತ್ಮ ಕಥನ
ಪುಸ್ತಕ ಪ್ರಕಾಶನ, ಬೆಂಗಳೂರು.

❂❂❂

ಕಡಲೇಕಾಯಿಯ ಒಂದು ನಾಟಿತಳಿ

ಗುಜರಾತಿನ ಸೌರಾಷ್ಟ್ರದ ಪಂಕಾನ ಎಂಬ ಹಳ್ಳಿಯ ಥಾಕರ್ಷಿಭಾಯಿ ಸಾವಲಿಯ ಎಂಬ 65 ವರ್ಷದ ರೈತ 'ಥಾಕರ್ಷಿ' ಎಂಬ ಹೆಸರಿನ ಒಂದು ಕಡಲೇಕಾಯಿ ತಳಿಯನ್ನು ಬೆಳೆಸುತ್ತಿದ್ದು ; ಅದು ಸುತ್ತಮುತ್ತಲಿನ ಹಳ್ಳಿಗಳ ರೈತರಿಂದ ಉತ್ತಮ ಬೇಡಿಕೆ ಹೊಂದಿದೆ. 95-100 ದಿನಗಳಲ್ಲಿ ಕಟಾವಿಗೆ ಬರುವ ಈ ತಳಿ 1998 ರಿಂದ ಇಲ್ಲಿಯವರೆಗೆ ಯಾವುದೇ ಕಾಯಿಲೆಗಳ ಹಾವಳಿಯನ್ನು ತಡೆಗಟ್ಟುವ ಶಕ್ತಿ ಹೊಂದಿದೆ. ಅಧಿಕ ಮಳೆಯಲ್ಲೂ ಹಾಳಾಗದ ಈ ತಳಿ ಮಳೆ ಇಲ್ಲದ ಬರಗಾಲದಲ್ಲೂ ಸಾಕಷ್ಟು ಇಳುವರಿ ನೀಡುತ್ತದೆ. ಬೇಸಿಗೆ ಮತ್ತು ಮಳೆಗಾಲ ಎರಡೂ ಅವಧಿಯಲ್ಲೂ ಗುಜರಾತಿನಲ್ಲಿ ಇದನ್ನು ಬೆಳೆಸಲು ಸಾಧ್ಯವಾಗುತ್ತಿದೆ.

ಮೂಲ ಹನಿ ಬೀ. ಸಂ 7(3) 1996

ತುಂಗಭದ್ರಾ ಜಲ ಮಾಲಿನ್ಯ

ಹೊಸಪೇಟೆ ತಾಲೂಕಿನಿಂದ 5 ಕಿ.ಮೀ. ದೂರದ ಚಿತ್ತವಾಡಗಿಯಲ್ಲಿರುವ "ಇಂಡಿಯಾ ಶುಗರ್ ಮತ್ತು ರಿಫೈನರಿ ಲಿಮಿಟೆಡ್" ಸಕ್ಕರೆ ಕಾರ್ಖಾನೆಯಿಂದ ಒಡೆದ ಟ್ಯಾಂಕರ್‌ನಿಂದ ಕಳೆದ ವರ್ಷ ಹೊರಬಿದ್ದ 'ಮೂಲೆಸಿಸ್' ರಾಸಾಯನಿಕ ಸೇರ್ಪಡೆಯಿಂದ ತುಂಗಭದ್ರಾ ನೀರು ವಿಷಪೂರಿತವಾಗಿರುವ ವಿಚಾರ ಎಲ್ಲರಿಗೂ ತಿಳಿದಿದೆ.

ಈ ವಿಷಪೂರಿತ ನೀರಿನಲ್ಲಿ ಸತ್ತಿರುವ ಜಲಚರಗಲು ಕೊಳೆತು ಹೊಸಪೇಟೆ ಮತ್ತು ಗಂಗಾವತಿ ತಾಲೂಕಿನ ಅನೇಕ ಗ್ರಾಮಗಳ ಜನಜೀವನ ಅಸಹನೀಯವಾಗುವಂತೆ ಮಾಡಿತು. ನೀರು ಎಷ್ಟರ ಮಟ್ಟಿಗೆ ವಿಷಪೂರಿತ ವಾಯಿತೆಂದರೆ, ಅದರ ಆಮ್ಲಜನಕದ ಪ್ರಮಾಣ ಶೂನ್ಯವಾಗಿ ಅದು ಕುಡಿಯಲು ಮತ್ತು ಯಾವುದೇ ಉಪಯೋಗಕ್ಕೆ ಯೋಗ್ಯವಾಗಿಲ್ಲ ದಂತಾಯ್ತು.

ಕಲುಷಿತ ನೀರು ಹಾಗು ದುರ್ನಾತಮಯ ವಾಸನೆಯಿಂದ ಬಹಳ ಕಡೆಗಳಲ್ಲಿ ತಲೆನೋವು, ಹೊಟ್ಟೆ ತೊಳೆಸುವಿಕೆ ಮುಂತಾದ ತೊಂದರೆಗಳಾದ ಬಗ್ಗೆ ವರದಿಯಾಗಿದೆ. ಈ ತರಹದ ಸ್ಥಿತಿಯೇ ಮುಂದುವರಿದರೆ ಸಾಂಕ್ರಾಮಿಕ ರೋಗಗಳು ಬರಬಹುದೆಂದು ಜನರು ಭೀತಿಪಡುವಂತಾಯ್ತು.

ತುಂಗಭದ್ರಾ ನದಿ ದಂಡೆಯ ಮೇಲೆ ವಾಸಿಸುತ್ತಿರುವ ಸಾವಿರಾರು ಆಂಧ್ರ ಪ್ರದೇಶದ ಜನತೆಯ ಮೇಲೂ ಇದರ ದುಷ್ಪರಿಣಾಮ ಕಾಣಿಸಿಕೊಳ್ಳುವ ಸಾಧ್ಯತೆಯಿದ್ದು, ಆಂಧ್ರ ಪ್ರದೇಶ ಸರ್ಕಾರ ಈ ನೀರನ್ನು ಯಾವುದೇ ಕೆಲಸಕ್ಕೆ ಬಳಸದಂತೆ ಜನರಿಗೆ ಎಚ್ಚರಿಕೆ ನೀಡಿತು. ಗಂಗಾವತಿ ತಾಲೂಕಿನಲ್ಲಿ ಮೂರು ಜನರು ಸತ್ತಿದ್ದು, ಅವರು ಈ ರಾಸಾಯನಿಕದ ಪರಿಣಾಮದಿಂದಲೇ ಸತ್ತಿದ್ದಾರೆಯೇ ಎನ್ನುವುದು ಇನ್ನೂ ಖಚಿತವಾಗಿಲ್ಲ ! ಸತ್ತ ಮೀನುಗಳ ತೂಕ ಸುಮಾರು 500 ಟನ್ನುಗಳಷ್ಟಿದ್ದು, ಕೆಲವು ಕಡೆ ದನ, ಕುರಿ ಮತ್ತು ಕೋಳಿಗಳ ಸಾವಿನ ಬಗ್ಗೆಯೂ ವರದಿಗಳು ಬಂದಿವೆ.

ದುಷ್ಪರಿಣಾಮವನ್ನು ತಡೆಗಟ್ಟಲು, ಕಲುಷಿತ ನೀರಿಗೆ 2000 ಕ್ಯೂಸೆಕ್ಸ್ ನೀರನ್ನು ನಾರಾಯಣಪುರ ಅಣೇಕಟ್ಟಿನಿಂದ ಬಿಡುಗಡೆ ಮಾಡಲಾಯಿತು. ನೀರಿನಲ್ಲಿ ಅತ್ಯಂತ ಕಡಿಮೆಗೊಂಡಿರುವ ಆಮ್ಲಜನಕದ ಪ್ರಮಾಣವನ್ನು ಹೆಚ್ಚಿಸಲು ವಿಜಯ ಆಕ್ಸಿಜನ್ ಕಂಪೆನಿಯವರಿಂದ ನೀರಿಗೆ ಆಮ್ಲಜನಕದ ಮಿಶ್ರಣವನ್ನು ಮಾಡಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಂಪನಿಯನ್ನು ಕೂಡಲೇ ಮುಚ್ಚಲು ಆಜ್ಞಾಪಿಸಿದ್ದಾರೆ, ಮತ್ತು ದಂಡವಾಗಿ 25 ಲಕ್ಷ ರೂಪಾಯಿಗಳನ್ನು ವಿಧಿಸಿದ್ದಾರೆ. ಈ ಒಂದು ಘಟನೆಯಿಂದ ಒಂದು ಕೋಟಿ ರೂಪಾಯಿಯಷ್ಟು ಮೀನುಗಳು ಮತ್ತು ಇನ್ನೊಂದು ಕೋಟಿ ಇತರೆ ನಷ್ಟಗಳಾಗಿರಬಹುದೆಂದು ಅಂದಾಜು ಮಾಡಲಾಗಿದೆ.

ಈ ಕಾರ್ಖಾನೆಯನ್ನು ಮುಚ್ಚಿದರೆ ಹೊಸಪೇಟೆ ತಾಲೂಕಿನ ಸಾವಿರಾರು ಕಬ್ಬು ಬೆಳೆಗಾರರು ಸಂಕಟಕ್ಕೆ ಸಿಲುಕ ಬೇಕಾಗುತ್ತದೆ. ನೀರು ಮತ್ತೆ ಯಥಾ ಸ್ಥಿತಿಗೆ ಬಂದು, ಅದರಲ್ಲಿ ಜಲಚರಗಳು ಮತ್ತೆ ಬದುಕಲು 6 ರಿಂದ 9 ತಿಂಗಳುಗಳು ಬೇಕಾಗಬಹುದುಎಂದು, ಹಾಗಾದರೆ ಬೇರೆ ಬೇರೆ ರಾಜ್ಯಗಳಿಂದ ಬಂದ ಸಾವಿರಾರು, ಮೀನುಗಾರರು ತುಂಬ ತೊಂದರೆಗೆ ಒಳಗಾಗುತ್ತಾರೆಂದು ವರದಿಗಳು ತಿಳಿಸಿವೆ.

ಶ್ರೀಧರ ಕೋಮಾರ, ಕೃಷಿ ವಿಶ್ವ ವಿದ್ಯಾಲಯ,
ಬೆಂಗಳೂರು.

ಪ್ರತಿಕ್ರಿಯೆ

ಮಾನ್ಯರೆ,

'ನಾಗಭಿನಂದನ' ಗ್ರಂಥದಲ್ಲಿ ಪ್ರಕಟವಾದ ನನ್ನ ಲೇಖನದ ಸಾರಾಂಶವನ್ನು ಬೆಳೆ ಆಚರಣೆಗಳು ಎಂಬ ಶೀರ್ಷಿಕೆಯಡಿಯಲ್ಲಿ ಬಳಸಿಕೊಂಡದ್ದು ಖುಷಿಯ ವಿಷಯ. ಬರೆಯುವ ಲೇಖನಗಳು ಜನರಿಗೆ, ಮುಖ್ಯವಾಗಿ ಕೃಷಿ ಒಲವಿರುವವರಿಗೆ ತಲುಪಬೇಕು. ಆ ಕೆಲಸವನ್ನು ನಿಮ್ಮ ಹಿತ್ತಲಗಿಡ ಮಾಡಲಿದೆ. ಅಭಿನಂದನೆಗಳು

ನಾನು 'ಚಿತ್ರದುರ್ಗ ಜಿಲ್ಲೆಯ ವ್ಯವಸಾಯ' ವಿಷಯ ಕುರಿತು ಸಂಶೋಧನೆ ಮಾಡಿರುವೆ. ಈ ಮಹಾಪ್ರಬಂಧವನ್ನು 'ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು' ಪ್ರಕಟಿಸಿದೆ (1995) ಈ ಕೃತಿಗೆ ಕುಶಿಹರಿಹರಿದಾಸಭಟ್ಟ ಜಾನಪದ ಪ್ರಶಸ್ತಿ ಈಚಿಗೆ ದೊರಕಿತು. ದಯಮಾಡಿ ಈ ಪುಸ್ತಕವನ್ನು ಗಮನಿಸಿ. ನಮ್ಮ ಕೃಷಿಯು ದೇಶೀಯತೆಯನ್ನು ಮೈಗೂಡಿಸಿ ಕೊಳ್ಳಬೇಕಿದೆ. ಈ ದಿಸೆಯಲ್ಲಿ 'ಹಿತ್ತಲಗಿಡ' ಸಾರ್ಥಕ ಕೆಲಸಮಾಡುತ್ತಿದೆ ಬರೆಯಿರಿ.

ವಿಶ್ವಾಸದಿಂದ,

ಡಾ. ಎಂ.ಜಿ. ಈಶ್ವರಪ್ಪ, ದಾವಣಗೆರೆ

ಪರಿಹಾರ ತಿಳಿಸುವಿರೋ ?

ನಮ್ಮ ಬೆಂಗಳೂರಿನ ಸಮೀಪದ ಹೊಲದಲ್ಲಿ ಬೆಳೆಸುವ ತೊಗರಿಗೆ ವಿಪರೀತ ಕೀಟಗಳ ಹಾವಳಿ. ಹತೋಟಿಗೆ ಸಾವಯವ ಪದ್ಧತಿಯ ಪರಿಹಾರ ಏನಾದರೂ ಇದೆಯೆ ಲ ರಾತ್ರಿ ಪಂಜು ಉರಿಸಿದಲ್ಲಿ ಬೇರೆ ಒಳ್ಳೆ ಕೀಟಗಳಿಗೆ ತೊಂದರೆ ಆಗಲಾರದೆ?

ಕೃಪಾ, ಬೆಂಗಳೂರು

*(ಪ್ರೊ. ಗುಪ್ತಾರವರ SRISTI ಸಂಸ್ಥೆಯ **Honey Bee Data Base** ನಿಂದ ನಿಮಗೆ ಪರಿಹಾರ ಸಿಗಬಹುದು ಪ್ರಯತ್ನಿಸಿ.)*

ಪ್ರಕಾಶ್ ಜೀ,

ಹೊಸ ಹಿತ್ತಲಗಿಡ (ಪೈರು ೩, ಕೊಯಿಲು ೧-೨, ೧೯೯೭) ತಲುಪಿತು. ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ ಎಂದು ಹೇಳಿಕೊಂಡು ರಾಜಕೀಯದ ಕವಾಟು ಹರಡಲು ಪತ್ರಿಕೆಯನ್ನು ಬಳಸಿಕೊಳ್ಳುತ್ತಿರುವುದು ಕಂಡು ವಿಷಾದವಾಯಿತು. ಪುಟ 13 ರಲ್ಲಿ 'ಭಾಜಪದಂತಹ ಪ್ರತಿಗಾಮಿ ಪಕ್ಷ ....' ಎಂಬ ಹೇಳಿಕೆ ಇದೆ. ಇಂತಹ ಬಾಲಿಶ ಮಾತು ಹಿತ್ತಲ ಗಿಡದಲ್ಲಿ ಪ್ರಕಟವಾಗುವುದು ಅತ್ಯಂತ ದುರಂತ. ನಿಮಗೆ ನಿಮ್ಮ ರಾಜಕೀಯ ತುಡಿತಗಳನ್ನು ಪ್ರಕಟಿಸಲು ಬೇರೆ ವೇದಿಕೆಗಳಿವೆ. ಹಿತ್ತಲಗಿಡದಲ್ಲಿ ಅವನ್ನು ತುರುಕಿ ಹೊಲಸು ಮಾಡಬೇಡಿ.

ಸುದರ್ಶನ, ಪುತ್ತೂರು

(ಈ ಲೇಖನದ ಅಭಿಪ್ರಾಯ ಸಂಪೂರ್ಣ ಲೇಖಕರದ್ದು. ಯಾವುದೇ ಪಕ್ಷಕ್ಕೆ ಅಥವಾ ಆ ಪಕ್ಷಕ್ಕೆ ಸೇರಿದ ವ್ಯಕ್ತಿಗಳಿಗೆ ಬೇಸರವನ್ನುಂಟುಮಾಡುವುದು ಹಿತ್ತಲ ಗಿಡದ ಉದ್ದೇಶವಲ್ಲ - ಸಂಪಾದಕ)

ಮಾನ್ಯ ಸಂಪಾದಕರು,

ಮಾನ್ಯರೇ ನಾನು ತಮ್ಮ 'ಹಿತ್ತಲಗಿಡ' ಪತ್ರಿಕೆಯನ್ನು ಓದಿ ತುಂಬಾ ಸಂತೋಷವಾಯಿತು. ಉಪಯುಕ್ತ ಮಾಹಿತಿಯನ್ನು ತಿಳಿಸುತ್ತಿದ್ದೀರಿ ತುಂಬಾ ಸ್ತುತ್ಯವಾದ ಕಾರ್ಯ. ನನಗೆ ಹಿಂದಿನ ಎಲ್ಲಾ ಸಂಚಿಕೆಗಳು ಬೇಕಾಗಿವೆ. ಆದ್ದರಿಂದ ದಯವಿಟ್ಟು ಕಳುಹಿಸಿ ಕೊಡುವರೆಂದು ನಂಬಿರುವೆ.

ರಾಜಶೇಖರ, ತೋಳನೂರ ಸಿಂಡಿಕೇಟ್ ಬ್ಯಾಂಕ್
ಇಂಡಿ ಬಿಜಾಪುರ - 586209

(ಹಿಂದಿನ ಎಲ್ಲಾ ಸಂಚಿಕೆಗಳಿಗೆ ರೂ.150/- ಎಂ.ಓ. ಮಾಡಿ ಪಡೆಯಬಹುದು)

ರೈತ ರೈತರ ನಡುವೆ

ಯಶ್‌ದೇವ್, ವಲ್ಲಭ ವಿದ್ಯಾನಗರ ಗುಜರಾತ್

ತೆಂಗಿನ ಮರದಲ್ಲಿ ಎಳೆಕಾಯಿಗಳು (ನಳ್ಳಿ) ಉದುರುವುದಕ್ಕೆ ಮುಂಡುಗದ ಯಾವ ಭಾಗವನ್ನು ಹಾಕಬೇಕು ಎಂದು ಕೇಳಿದ್ದಿರಿ.

ಮುಂಡುಗ *(Cicas Circinalis)* ಗಿಡದ ಎಲೆಗಳನ್ನು ಸುಮಾರು 20-25 ಕೆ.ಜಿ.ಯಷ್ಟನ್ನು ಸಣ್ಣಗೆ ತುಂಡು ಮಾಡಿ ತೆಂಗಿನ ಮರದ ಬುಡಕ್ಕೆ ಸೇರಿಸಿ.

ಶ್ರೀ ದತ್ತ, ಬಾವಿಕೈಸರು, ತೀರ್ಥಹಳ್ಳಿ ತಾ.

ತರುವಾಯ ಇತ್ತೀಚಿನ ನಿಮ್ಮ ಪತ್ರಿಕೆಯಲ್ಲಿ 'ಹಿತ್ತಲಗಿಡದ ವ್ಯಕ್ತಿಗಳು' ಈ ಲೇಖನದಲ್ಲಿ 8ನೇ ಪುಟದಲ್ಲಿ ರೆಡ್ಡಿಯ ಪರ್ಯಾಯ ಗೊಬ್ಬರ ಈ ಕುರಿತು ಮಾಹಿತಿ ತಪ್ಪಿರಬಹುದೆಂದು ನನ್ನ ಅನಿಸಿಕೆ.

20' ಉದ್ದ x 6' ಅಗಲ x 3' ಎತ್ತರ ಈ ಅಳತೆಯ ಗುಂಡಿಯ ಒಟ್ಟು ವಿಸ್ತೀರ್ಣ ಕೇವಲ 360 cft ಆದರೆ ನೀವು ಇಂತಹ ಒಂದು ಗುಂಡಿಯಿಂದ 3 ತಿಂಗಳಲ್ಲಿ 60 ಟನ್ ಉತ್ಕೃಷ್ಟ ಕಾಂಪೋಸ್ಟ್ ಗೊಬ್ಬರ ತಯಾರಾಗುವುದೆಂದು ತಿಳಿಸಿದ್ದೀರಿ. ಇದು ಹೆಚ್ಚು ಕಡಿಮೆ 1 ಲಾರಿ ಲೋಡು 6 ಟನ್ ಒಳಗಡೆ ಆಗುವುದು ಆದ್ದರಿಂದ ಈ ಬಗ್ಗೆ ನಮಗಿರುವ ಅನುಮಾನವನ್ನು ಬಗೆಹರಿಸಿ.

ತಮ್ಮ ವಿಶ್ವಾಸಿ

ಬಿ.ಜೆ. ಕಾಡಪ್ಪ,
ಮಲ್ನಾಡ್ ಪ್ಲಾಂಟೇಷನ್ಸ್ ಬೇಗಾನೆ, ಶೃಂಗೇರಿ

(ಈ ಬಗ್ಗೆ ಶ್ರೀ ನಾರಾಯಣ ರೆಡ್ಡಿಯವರಿಂದ ಹೆಚ್ಚಿನ ವಿವರ ಪಡೆದು ತಮಗೆ ತಿಳಿಸಲಾಗುವುದು)

ಹಿತ್ತಲಗಿಡ ಪತ್ರಿಕೆಯನ್ನು ಕನ್ನಡದಲ್ಲಿ ಮುದ್ರಿತಗೊಳ್ಳುವ ಇತರ ಕೃಷಿ ಪತ್ರಿಕೆಗಳ ವಿವರ, ವಿಳಾಸ ಹಾಗೂ ಚಂದಾ ಹಣದ ಮೊತ್ತಗಳನ್ನು ತಿಳಿಸಿದರೆ ಅನುಕೂಲ ವಾಗುತ್ತದೆ.

ಎಂ. ಜಯರಾಮ್, ಕಂಡಕ್ಟರ್,
ಸೋರ ಹುಣಸೆ, ಬೆಂಗಳೂರು ದಕ್ಷಿಣ.

ಪರಿಸರ ಸಹಯೋಗದಿಂದ ಆಹಾರಭದ್ರತೆ

IFOAM-ASIA ಅಂತರಾಷ್ಟ್ರೀಯ ಸಮ್ಮೇಳನ ಕೃಷಿ ವಿ.ವಿ.ನಿಲಯ, ಡಿಸೆಂಬರ್ 1-4-1997

ಸಮ್ಮೇಳನದ ಬಗ್ಗೆ ಸಾವಯವ ಕೃಷಿಕರೊಬ್ಬರು ಬೆಂಗಳೂರು ಕೃಷಿ ವಿ.ವಿ. ಉಪಕುಲಪತಿಗಳಿಗೆ ಬರೆದ ಪತ್ರ.

ಮಾನ್ಯರೆ

ರಾಸಾಯನಿಕ ಕೃಷಿಯಿಂದ ಭೂಸಾರ ಕಡಿಮೆಯಾಗಿ ಬೆಳೆ ಕಲುಷಿತ ಹಾಗೂ ಪರಿಸರ ಮಾಲಿನ್ಯ ಗೊಳ್ಳುತ್ತದೆಂಬ ತಜ್ಞರ ಅಭಿಪ್ರಾಯವನ್ನು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ನೀವು ಸಹ ಅನುಮೋದಿಸಿ ಸಾವಯವ ಕೃಷಿಯನ್ನು ಅಳವಡಿಸಬೇಕೆಂದು ರೈತ ಬಾಂಧವರಿಗೆ ಕರೆ ಕೊಟ್ಟಿದ್ದೀರಿ. ಇದು ಸಂತೋಷದಾಯಕ ವಿಚಾರ. ಆದರೆ ಈ ಬಗ್ಗೆ ನಿಮ್ಮ ಬಳಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿ, ಅನುಷ್ಠಾನಗೊಳಿಸುವ ನೀಲಿ ನಕಾಶೆ ಇಲ್ಲ. ಜೊತೆಗೆ ಎಲ್ಲಿಯೂ ರಾಸಾಯನಿಕ ಕೃಷಿ ಪದ್ಧತಿಯನ್ನು ಕೈಬಿಡಿ ಎಂದು ಈ ವಿಚಾರ ಸಂಕಿರಣದಲ್ಲಿ ಒತ್ತಿ ಹೇಳಿಲ್ಲ. ಸಾವಯವ ಕೃಷಿ ಪ್ರೋತ್ಸಾಹಿಸಲು ವಿದೇಶದಲ್ಲಿ ನೀಡುವ ಹಾಗೆ ಧನ ಸಹಾಯ ಗಳನ್ನೇನಾದರೂ ಪ್ರಕಟಿಸಿದ್ದೀರಾ? ಅಥವಾ ಸಾವಯವ ಕೃಷಿ ಇಳುವರಿ ಕಡಿಮೆ ನೀಡಿದರೂ ಅದು ಅತ್ಯಂತ ಪೌಷ್ಠಿಕ ಆಹಾರಒದಗಿಸುವುದರಿಂದ ಆ ಬೆಳೆಗೆ ಉತ್ತಮ ಬೆಲೆಯನ್ನು ನಿಗದಿ ಪಡಿಸಲು ಮಾರುಕಟ್ಟೆಗೆ ಸೂಚಿಸಿದ್ದೀರಾ? ಸಾವಯವ ಕೃಷಿಯ ಬಗ್ಗೆ ಈ ಕೂಡಲೆ ಕೃಷಿ ಇಲಾಖೆ ವತಿಯಿಂದ ವ್ಯಾಪಕ ಪ್ರಚಾರಾಂದೋಲನ ವಾಗಬೇಕು. ಕೃಷಿ ಇಲಾಖೆ ಕಾರ್ಯಕ್ರಮದಂತೆ ಪರ್ಯಾಯವಾದ ಸಾವಯವ ಕೃಷಿ ಕಾರ್ಯಸಂಸ್ಥೆ ಒಂದು ಸ್ಥಾಪನೆಯಾಗಿ ಅದರ ಮೂಲಕ ಸಾವಯವ ಕೃಷಿ ಬೇಸಾಯದ ತಂತ್ರಜ್ಞಾನವನ್ನು ರೈತರಿಗೆ ಮುಟ್ಟಿಸುವುದು ಹಾಗೂ ಈ ಬೆಳೆಗೆ ಸೂಕ್ತ ಮಾರುಕಟ್ಟೆಯನ್ನು ನಿರ್ಮಿಸುವುದು ಈಗ ಆಗಬೇಕಾಗಿರುವ ಮುಖ್ಯ ಕಾರ್ಯ. ಈ ನಿಟ್ಟಿನಲ್ಲಿ ನೀವು ಕೈಗೊಳ್ಳುವ ಯಾವುದೇ ಕಾರ್ಯಕ್ಕೆ ಹೆಗಲು ನೀಡಲು ನಾವುಗಳು ಸಿದ್ಧವಾಗಿರುತ್ತೇವೆ.

ಎಸ್. ಬೋರೇ ಗೌಡ ನಗುವನ ಹಳ್ಳಿ
*ಮತ್ತು **30** ಮಂದಿ ಸಹಿ*

ದೇಶೀಯ ತಂತ್ರಜ್ಞಾನದ ಬಗೆಗಿನ ಶಿಫಾರಸ್ಸುಗಳು

ಅಧ್ಯಕ್ಷತೆ : ಶ್ರೀಮತಿ ತುನ್‌ಜ್ಞೆ ಡೀಡಿಸ್ ಫಿಲಿಪ್ಪೆನ್
ಮುಖ್ಯ ಭಾಷಣಕಾರರು : ಪ್ರೊ. ಅನಿಲ್ ಕೆ. ಗುಪ್ತ
ಸಹಾಯಕರು : ಡಾ.ಟಿ.ಎಸ್. ಪ್ರಕಾಶ್ ಕಮ್ಮರಡಿ

◆ ದೇಶೀಯ ಜ್ಞಾನವ್ಯವಸ್ಥೆಯನ್ನು ಬಲಪಡಿಸಲು ಕಾಯ್ದೆ ಕಾನೂನುಗಳಿಗಿಂತ ಪರಿಸರ ಮತ್ತು ಮಾನವನ ನಡುವಿನ ಪರಸ್ಪರ ಅವಲಂಬನೆ ಆಧಾರಿತ ನೈತಿಕತೆ ಹಾಗೇ ಭಾವನಾತ್ಮಕ ಪ್ರತಿಕ್ರಿಯೆಗಿಂತ ಸಾಮರ್ಥ್ಯ ಬಲಪಡಿಸುವ ಕಾಳಜಿಗಳು ಮುಖ್ಯವಾಗಿರುತ್ತವೆ.

◆ ರೈತರು, ವಿಜ್ಞಾನಿಗಳು, ವಿದ್ಯಾರ್ಥಿಗಳು, ಸ್ವಯಂಸೇವಾಸಂಸ್ಥೆ, ವ್ಯಕ್ತಿಗಳು ಹಾಗು ಮಹಿಳೆಯರೆಲ್ಲರ ಜಾಲ ರಚಿಸಿ ಆ ಮೂಲಕ ದೇಶೀಯ ಜ್ಞಾನ ತಂತ್ರಜ್ಞಾನಗಳ ವ್ಯವಸ್ಥಿತ ದಾಖಲು, ಪ್ರಸರಣ, ಉತ್ತಮಗೊಳಿಸುವಿಕೆ ಹಾಗೇ ಮೌಲ್ಯ ಕೂಡಿಸುವಿಕೆ ಕಾರ್ಯ ನಡೆಯಬೇಕಾಗಿದೆ.

◆ ಶಾಲಾ ಕಾಲೇಜು ಶಿಕ್ಷಣಗಳಲ್ಲಿ ದೇಶೀಯ ಜ್ಞಾನ, ತಂತ್ರಜ್ಞಾನಗಳನ್ನು ಸೇರಿಸಬೇಕು.

◆ ನಾಟೀ ಸಮುದಾಯ ಮತ್ತು ವ್ಯಕ್ತಿಗಳ ಬೌದ್ಧಿಕ ಸನ್ನದಿನ ಹಕ್ಕು ಕಾಪಾಡಲು ಎಲ್ಲಾ ಪ್ರಯತ್ನಗಳು ಅಗತ್ಯ.

◆ ದೇಶೀಯ ಜ್ಞಾನ ವ್ಯವಸ್ಥೆಯೊಡನೆ ಪರಿಸರದೃಷ್ಟಿಯಿಂದ ಉಪಯುಕ್ತ ಆಧುನಿಕ ತಂತ್ರಜ್ಞಾನವನ್ನು ಮೇಳೈಸುವ ಮೂಲಕ ಮನುಕುಲದ ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳಬೇಕು ಈ ನಿಟ್ಟಿನಲ್ಲಿ ಗ್ರಾಹಕ ಸಮುದಾಯದಲ್ಲಿ ಜಾಗೃತಿ ಬೆಳೆಸಲು ಸುದ್ದಿ ಸಂಪರ್ಕ ಮಾಧ್ಯಮದ ಉಪಯೋಗ ಪಡೆಯಬೇಕು.

◆ ನಾಟೀ ಜ್ಞಾನ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಅರಿತು ಅದನ್ನು ಪ್ರೋತ್ಸಾಹಿಸುವ ಕಾರ್ಯನಡೆಯ ಬೇಕಾಗಿದೆ.

ಜೀವಚೈತನ್ಯ ಕೃಷಿ ಕಾರ್ಯಾಗಾರ, ಬೆಂಗಳೂರು 18-22 ಅಕ್ಟೋಬರ್, 97

ಬೆಂಗಳೂರಿನ 'ಇಕ್ರಾ' ಸಂಸ್ಥೆಯವರು ಕಳೆದ ಅಕ್ಟೋಬರ್ 18 ರಿಂದ 22 ರವರೆಗೆ ಜೀವ ಚೈತನ್ಯ ಕೃಷಿ ಕಾರ್ಯಾಗಾರವನ್ನು ಬೆಂಗಳೂರಿನ ಸಮೀಪದ ಕ್ಲಾರೆಟ್ ನಿವಾಸದಲ್ಲಿ ಏರ್ಪಡಿಸಿದ್ದರು. ಇದರಲ್ಲಿ ಜೀವಚೈತನ್ಯ ಕೃಷಿ ತಜ್ಞ ಶ್ರೀ ಪೀಟರ್ ಪ್ರಾಕ್ಟರ್ ಜೀವಚೈತನ್ಯ ಕೃಷಿ ಬಗ್ಗೆ ಸಂವಾದ ನಡೆಸಿದರು. ಜೊತೆಗೆ ಕಾರ್ಯಾಗಾರದಲ್ಲಿ ಪಾಲ್ಗೊಂಡವರೆಲ್ಲರೂ ಪ್ರಾಯೋಗಿಕವಾಗಿ ಕೆಲವು ದನದ ಕೊಂಬುಗಳನ್ನು ನೆಲದಲ್ಲಿ ಹುಗಿದರು. ಐದೂ ದಿನಳ ಕಾಲ ಪೀಟರ್ ಪ್ರಾಕ್ಟರ್ ರೈತರೊಡನೆ ಲಭ್ಯವಿದ್ದುದರಿಂದ ಜೀವಚೈತನ್ಯ ಕೃಷಿ ಬಗ್ಗೆ ಸಂದೇಹವನ್ನು ಪರಿಹರಿಸಿಕೊಳ್ಳುವಲ್ಲಿ ತಕ್ಕಮಟ್ಟಿಗೆ ಸಹಾಯವಾಯಿತೆಂಬುದು ಅನೇಕ ರೈತರ ಅಭಿಪ್ರಾಯ.

ಮೈಸೂರು ಜಿಲ್ಲೆ ಜೀವಧಾರಕ ಕೃಷಿ ಕೂಟ

ಈ ಕೃಷಿ ಕೂಟವು ತನ್ನ ಉದ್ಘಾಟನಾ ಸಭೆಯನ್ನು ತಾ. 18-5-97 ರಂದು ದೊಡ್ಡಿಂದುವಾಡಿ ಗ್ರಾಮ, ಕೊಳ್ಳೇಗಾಲ ತಾಲೂಕಿನ ಕೈಲಾಸ ಮೂರ್ತಿಯವರ ತೋಟದಲ್ಲಿ ನಡೆಸಿತು. ಆ ಮೇಲೆ ತಾ.29-6-97 ರಂದು ಮೈಸೂರಿನ ಖರ್ಜನ್ ಪಾರ್ಕಿನಲ್ಲಿ ನಂತರ ತಾ.7-9-97 ರಂದು

ಕೂಟದ ಮೂರನೇ ಸಭೆ ಮೈಸೂರಿನ ಕಳಲವಾಡಿ ಗ್ರಾಮದ ಚಂದ್ರಶೇಖರ ಇಂದ್ರಪ್ರ ಸ್ಥ ತೋಟದಲ್ಲಿ ಹಾಗೂ ನಾಲ್ಕನೆಯ ಸಭೆ ಆಯರ ಹಳ್ಳಿ ಗುರುಸ್ವಾಮಿಯವರ ತೋಟದಲ್ಲಿ ತಾ. 9-11-97 ರಂದು ನಡೆಯಿತು. ಈ ಸಭೆಗಳಲ್ಲಿ ರೈತ ಸಂಘದ ಪ್ರೋ. ನಂಜುಂಡ ಸ್ವಾಮಿ, ಪ್ರಗತಿಪರ ಸಾವಯವ ರೈತರುಗಳಾದ ಭರಮಗೌಡರು, ಆರ್.ಎಸ್. ಪಾಟೀಲ್, ಶಾಂತಿ ಮೂಲೆ, ಪುರುಷೋತ್ತಮ ರಾಯರು, ಪ್ರಜ್ಞಾ ಭಾರತೀಯ ಉಪೇಂದ್ರ ಶೆಣೈ, ಇಕ್ರಾ ವಾಸು, ವಿಜ್ಞಾನ ಲೇಖಕರಾದ ಜಿ.ಟಿ.ನಾರಾಯಣ ರಾಯರು, ವಿಜಯಾ ಅಂಗಡಿ, ಗಣೇಶ ಶೆಣೈ ಮತ್ತು ಕಾರ್ಟನ ರವಿಕುಮಾರ್ ಭಾಗವಹಿಸಿದ್ದರು.

"ಇಂಥಾ ಸಭೆಗಳು ಆಗಾಗ ನಡೆಯಬೇಕು. ವಿಚಾರ ವಿನಿಮಯ ಬೇಕು ನಾವು ಬದಲಾಗಬೇಕು. ರಾಸಾಯನಿಕ ಕೃಷಿ ನಮಗೆ ಸಾಕು. ಹೊಸ ರೀತಿ ನೀತಿ ತಿಳಿಯಲು ಅವಕಾಶ ಬೇಕು" ಎಂಬುದು ಬಂದ ಎಲ್ಲರ ಅಭಿಪ್ರಾಯ ವಾಯಿತು. ಮಾಧ್ಯಮಗಳಲ್ಲಿ ದಿನಬೆಳಗಾದರೆ ಮೂಡಿ ಬರುವ ರಾಸಾಯನಿಕ ರಾಗದ ಬಗೆಗೆ ವಿರೋಧಿಸಿ ಠರಾವು ಮಂಡಿಸಲಾಯಿತು.

ವರದಿ ಎ.ಪಿ. ಚಂದ್ರಶೇಖರ್

ಹಾಸನ ಜಿಲ್ಲಾ ಪರಿಸರ ಪ್ರಿಯ ಕೃಷಿಕರ ಮಾಸಿಕ ಸಭೆ

ಇಲ್ಲಿನ ಪರಿಸರಾಸಕ್ತ ಕೃಷಿಕರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಸನ ಘಟಕದ ಸಹಯೋಗದೊಂದಿಗೆ ಹಾಸನ ಜಿಲ್ಲಾ ಪರಿಸರ ಪ್ರಿಯ ಕೃಷಿಕರ ಸೇವೆ ಸಂಸ್ಥೆಯೊಂದನ್ನು ಪ್ರಾರಂಭಿಸಿ ಪ್ರತೀ ತಿಂಗಳೂ ಜಿಲ್ಲೆಯ ಯಾರಾದರೊಬ್ಬರ ಜಮೀನಿನಲ್ಲಿ ಸಭೆ ಸೇರಿ ವಿವಿಧ ಪರಿಸರ ಸಂಬಂಧಿ ಕೃಷಿ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ.

ಇತ್ತೀಚಿನ ಸಭೆ ತಾ.28-12-97ರ ಭಾನುವಾರ ಸಕಲೇಶಪುರ ತಾಲೂಕಿನ ಆಗನಿ ಗ್ರಾಮದ ಡಾ. ಸೋಮಯ್ಯನವರ ಕಾಫಿ ತೋಟದಲ್ಲಿ ಏರ್ಪಾಡಾಗಿತ್ತು. ಪದವಿಧರ ಕೃಷಿಕ ಡಾ|| ವಾರಣಾಶಿ ಕೃಷ್ಣಮೂರ್ತಿ ಹಾಗೂ ಹರಿಹಳ್ಳಿಯ ಶ್ರೀ ವಿ.ಪಿ. ಹೆಗಡೆಯವರು ತಮ್ಮ ಸಾವಯವ ಕೃಷಿ ಅನುಭವ ಹಂಚಿಕೊಂಡರು. ಅನೇಕ ಹಿರಿಯ ಅನುಭವಿ ಕೃಷಿಕರಿಂದ ಚಿಂತನ ಮಂಥನ ನಡೆಯಿತು.

ಪ್ರಕೃತಿ ಪರ ವ್ಯವಸಾಯ ಹಾಗೂ ಆರೋಗ್ಯ ಪದ್ಧತಿಗಳ ಇತಿಮಿತಿಗಳು ಹಾಗೂ ಲಾಭ ನಷ್ಟಗಳು

ಸ್ಥಳ: ರೇಷ್ಮೆ ಕೃಷಿ ಕಾಲೇಜು, ಚಿಂತಾಮಣಿ
ದಿನಾಂಕ- ಅಕ್ಟೋಬರ್ 16-17, 1997

ಈ ಕಾರ್ಯಾಗಾರವನ್ನು ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರದ ರೈತರಾದ ಶ್ರೀ ಚೆರ್ಕಾಡಿ ರಾಮಚಂದ್ರರಾಯರು ಉದ್ಘಾಟಿಸಿದರು. ಇವರು ಸರ್ವೋದಯ ಸಿದ್ಧಾಂತಕ್ಕೆ ಬದ್ಧರಾದವರು. ರೇಷ್ಮೆ ಕೃಷಿ ಕಾಲೇಜಿನ ನಿರ್ದೇಶಕರಾದ ಶ್ರೀ ವಿಜಯೇಂದ್ರ ಅವರು ಅಧ್ಯಕ್ಷತೆ ವಹಿಸಿದ್ದರು.

ಪರಿಸರವಾದಿಗಳಾದ ಶ್ರೀ ಎಲ್ಲಪ್ಪರೆಡ್ಡಿ 'ಸೇವಕ್' ಸಂಸ್ಥೆಯ ಆಚಾರ್ಯ ವಿನಯವಿನೇಕರ್, ಜನಪ್ರಿಯ ಸಾವಯವ ರೈತರಾದ ಶ್ರೀ ಎಲ್. ನಾರಾಯಣ ರೆಡ್ಡಿ ಹಾಗೂ ದಕ್ಷಿಣ ಕನ್ನಡದ ಶ್ರೀ ಎಂ.ಟಿ. ಶಾಂತಿಮೂಲೆ ಅತಿಥಿಗಳಾಗಿ ಆಗಮಿಸಿದ್ದರು. ಎಲ್ಲರನ್ನೂ ವಿಕೇರಿನ ಕಾರ್ಯನಿರ್ವಾಹಕ ಶ್ರೀ ಕೇಶವಮೂರ್ತಿ ಪರಿಚಯಿಸಿ ಸ್ವಾಗತಿಸಿದರು. 70 ಜನ ರೈತರು, ವಿಜ್ಞಾನಿಗಳು ಮತ್ತಿತರು ಪಾಲ್ಗೊಂಡಿದ್ದರು.

ಮುಂದಿನದು

ಅಂತರರಾಷ್ಟ್ರೀಯ ಸಮ್ಮೇಳನ:

ಔಷಧಿ ಸಸ್ಯಗಳ ಸಂರಕ್ಷಣೆ, ಉಪಯೋಗ, ವಾಣಿಜ್ಯ ಮತ್ತು ಸಾಂಸ್ಕೃತಿಕ ಪರಂಪರೆ

(International conference on Medicinal plants Conservation, Utilisation, Trade & Cultural Traditions)

ಫೆಬ್ರವರಿ. 16-20, 1998 ಭಾರತೀಯ ವಿಜ್ಞಾನ ಮಂದಿರ ಬೆಂಗಳೂರು

'ಮಾನವ ಕುಲದ ಉಳಿಕೆಗಾಗಿ ಔಷಧಿ ಸಸ್ಯಗಳು' ಈ ತತ್ವವನ್ನು ಕೇಂದ್ರ ವಾಗಿಟ್ಟುಕೊಂಡು "ಸ್ಥಳೀಯ ಆರೋಗ್ಯ ಪರಂಪರೆಯ ಪುನರುತ್ಥಾನ ಪ್ರತಿಷ್ಠಾನ"(FRLHT) ಸಂಘಟಿಸುತ್ತಿರುವ ಈ ಸಮ್ಮೇಳನದಲ್ಲಿ

- ಔಷಧಿ ಸಸ್ಯಗಳ ಸಂರಕ್ಷಣೆ ಮತ್ತು ಮಾಹಿತಿ ಕಲೆಹಾಕುವುದು.
- ಸಾಮಾಜಿಕ ಆರ್ಥಿಕ ವಿಚಾರಗಳು ಮತ್ತು ಸಮುದಾಯಕ್ಕೆ ಅನ್ವಯಿಸುವಂತೆ ಕಾರ್ಯಕ್ರಮಗಳು.
- ದೇಶೀಯ ಮತ್ತು ಪಾರಂಪರಿಕ ಜ್ಞಾನ ವ್ಯವಸ್ಥೆ ಮತ್ತು ಸಂಪನ್ಮೂಲಗಳ ಮೇಲಿನ ಹಕ್ಕು .
- ನೀತಿ ನಿಯಮಗಳು.
- ಔಷಧಿ ಸಸ್ಯಗಳ ಅಭಿವೃದ್ಧಿ.
- ವಾಣಿಜ್ಯ ಮತ್ತು ಉದ್ದಿಮೆಗಳ ಅಭಿವೃದ್ಧಿ ಹೀಗೆ ಹಲವು ಗೋಷ್ಠಿಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಆಸಕ್ತರು

***"FRLHT, No. 50, 2nd Stage, M.S.H. Layout, Anandanagar, Bangalore - 24.** ಸಂಪರ್ಕಿಸಬಹುದು.*

ನೀವು ಕಾಗದ ಹಾಗೂ ಪರಿಸರದ ಬಗ್ಗೆ ಕಾಳಜಿ ಇರುವ ಗ್ರಾಹಕರಾಗಿದ್ದಲ್ಲಿ ಈಗಿನಿಂದಲೇ ಕಾಗದದ ಬಳಕೆಯನ್ನು ಮಿತಿಗೊಳಿಸಿ ಮತ್ತು ಪುನರುತ್ಪಾದನಾ *(Recycled)* ಪ್ರಕ್ರಿಯೆಯಿಂದ ತಯಾರಿಸಿದ ಕಾಗದವನ್ನು ಬಳಸಿ - *ಕಾಗದ ಕಟ್ಟೆ, ಬೆಂಗಳೂರು.*

ವಿ.ಸೂ. *:* ಹಿತ್ತಲಗಿಡದ ಈ ಸಂಚಿಕೆಯನ್ನು ಕಬ್ಬಿನ ತ್ಯಾಜ್ಯ *Bagasse* ಕಾಗದಿಂದ ಮುದ್ರಿಸಲಾಗಿದೆ.

ಪತ್ರಿಕೆ ನೊಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್ / ಚೆಕ್ ಮೂಲಕ ***"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"*** ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಇದನ್ನು ಸ್ಪಷ್ಟವಾಗಿ ತಿಳಿಸ ತಕ್ಕದ್ದು.

ವಿಳಾಸ

ಡಾ. ಟಿ.ಎನ್.ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕ
ಗೌರವ ಸಂಪಾದಕ ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ
ಬೆಂಗಳೂರು - 560 024.

ಗೆ ____________________

____

____

____

Printed by Sri S. Sridhar, Published by Smt. K. Meenakshi (Owner), printed at Navbharath Enterprises, No. 10, Sirur Park B Street, Seshadripuram, Bangalore - 560 020 and Published at No. 399, 14 - B Cross, New Town Yelhanka, Bangalore - 560 064. Edited by Dr. T.N. Prakash